TIGHT BINDING BOOK

कर्मण्येवाधिकारस्ते मा फलेषु कदाचन ।

ಶ್ರೀಕೃಷ್ಣ—ಕರ್ಮಯೋಗಶಾಸ್ತ್ರ.

ಶ್ರೀಬಲಭೀಮ-ವಾಚನಾಲಯ-ಗ್ರಂಥಮಾಲೆ.

ದ್ವಿತೀಯ ಪುಷ್ಪ

ಸಮಾಜರಹಸ್ಯ.

"The Woman's cause is man's, They rise or sink,
To-gether dwafted, God-like, bound or free,
If she be small, slight natured, miserable,
How shall man grow?

— *Tennyson.*

ಲೇಖಕ

ದಾಮೋದರ ಸದಾಶಿವ ದೇಶಪಾಂಡೆ—ಮಧುಪುರ.

ಮೊದಲನೆ ಆವೃತ್ತಿ ೧೦

ಬೆಳಗಾವಿಯೊಳಗೆ ದೇವೇಂದ್ರ ಫಡಪ್ಪಾ ಚೌಗುಲ ಇವರು ತಮ್ಮ ಶ್ರೀಮಹಾವೀರ
ಮುದ್ರಣಾಲಯದಲ್ಲಿ ಮುದ್ರಿಸಿದರು.

ದಾಮೋದರ ಸದಾಶಿವ ದೇಶಪಾಂಡೆ ಇವರು ಮುದವಾಲದೊಳಗ ಶ್ರೀಬಲಭೀಮ
ವಾಚನಾಲಯದಲ್ಲಿ ಪ್ರಕಟಿಸಿದರು.

ಪ್ರಾರಂಭಕ್ಕೆ ಎರಡು ಶಬ್ದಗಳು.

ಸುಶಿಕ್ಷಿತ ಕೆಲ ಸ್ತ್ರೀ-ಪುರುಷರು ಹಿಂದುಳಿದ ಅಂಧು-ಭಗಿನಿಯುರನ್ನು ತಿದ್ದುವದರಲ್ಲಿ ಸ್ವಾರ್ಥತ್ಯಾಗಿಗಳಾಗಿ ತಮ್ಮ ತನ-ಮನ-ಧನಸರ್ವಸ್ವವನ್ನರ್ಪಿಸಿ ಎಡೆಬಿಡದೆ ಯತ್ನಿಸುವದೇ ನಿಜ ಸಮಾಜ-ಸೇವಾಧರ್ಮವು. ಇದೇ ಅವರ ಆದ್ಯಕರ್ತವ್ಯವು ಬರೇ ಪುರುಷರಿಂದಲೇ ಹೇಗೆ ಸಮಾಜವಾಗುವದಿಲ್ಲವೋ ಹಾಗೆಯೇ ಬರೆ ಪುರುಷರನ್ನಷ್ಟು ಸುಶಿಕ್ಷಿತರನ್ನಾಗಿ ಮಾಡಿದರೆ ಸಮಾಜೋನ್ನತಿಯೂ ಇದರಿಂದಲೇ ಆಗುವ ದೇಶೋನ್ನತಿಯೂ ಎಂದಿಗೂ ಆಗಲಾರವು. ಸ್ತ್ರೀಯರೂ ಕೂಡ ಸುಶಿಕ್ಷಿತರೂ ಸುಸಂಸ್ಕೃತರೂ ಆಗಿ ಸಮಾಜಕ್ಕೆ ತಾವು ಮಾಡಬಹುದಾದ ಕಾರ್ಯವನ್ನು ಯಥಾಶಕ್ತಿಯಿಂದಲೂ ಯಥಾಸಾಂಗವಾಗಿಯೂ ಮಾಡಲೇ ಬೇಕು ಅದಕ್ಕಾಗಿ ಅವರು ಚಲೋ ಸಂಸ್ಕೃತಿಯನ್ನು ಪಡೆಯಲೇ ಬೇಕು. ಇದೇ ಸಮಾಜೋನ್ನತಿಯ—ಹಾಗೆಯೇ ದೇಶೋನ್ನತಿಯ—ರಹಸ್ಯವು

ವಾಚಕಮಹಾಶಯ! 'ನಾವು ಯಾರು? ನಮ್ಮ ಸಮಾಜಸ್ಥಿತಿಯು ಈಗ ಹೇಗಿರುವದೆ'ಂಬದನ್ನು ಕರ್ನಾಟಕಸ್ಥರಾದ ನಾವು ವಿಚಾರಮಾಡಿದರೆ ನಮಗೆ ಏನು ಕಂಡುಬರಬಹುದು? ನಿಜವಾಗಿ ಪ್ರಾಂಜಲಬುದ್ಧಿಯಿಂದ ವಿಚಾರಮಾಡಿದರೆ ಐವತ್ತು ವರ್ಷಗಳ ಹಿಂದಿನ ಮಹಾರಾಷ್ಟ್ರ-ಸಮಾಜಸ್ಥಿತಿಯ ಚಿತ್ರವೇ ನಮ್ಮ ಈಗಿನ ಸ್ಥಿತಿಯನ್ನು ಯಥಾಸಾಂಗವಾಗಿ ಸಾರಿ ದೂರಿ ಹೇಳುತ್ತದೆ. ಹೀಗೆ ಐವತ್ತು ಐವತ್ತು ವರ್ಷಗಳ ಹಿಂದಿನಿಂದಲೇ ಹೆಜ್ಜೆಯನ್ನಿಡುತ್ತ ನಡೆದರೆ, ನಮ್ಮ ಸಮಾಜವು ಪೂರ್ಣವಾಗಿ ಸುಧಾರಿಸಬೇಕಾದರೆ ಇನ್ನು ಯಾವ ಯುಗವು ಬರುವದೋ ಯಾರು ಹೇಳುವರು? ಸಮಾಜಸುಧಾರಣೆಯಾಗಬೇಕಾದರೆ ಸ್ವಾರ್ಥತ್ಯಾಗಿಗಳಾದ ಸುಶಿಕ್ಷಿತ ದಂಪತಿಗಳೇ ಮುಂದಾಗಬೇಕು. ಇಂಥವರಲ್ಲಿಯೇ ನಮ್ಮ ಸಮಾಜೋನ್ನತಿಯ ಎಲ್ಲ ರಹಸ್ಯವು ಹರಡಿಕೊಂಡಿರುವದು. ಇಂಥವರು ಸಿದ್ಧರಾಗಿ ನಮ್ಮ ಕರ್ನಾಟಕವನ್ನು ಉದ್ಧರಿಸಿ ಹರಿಸಲು ಮುಂದೆ ಬರಬೇಕೆಂದು ಅನನ್ಯಭಾವದಿಂದ ಬೇಡಿಕೊಳ್ಳುವದಕ್ಕಾಗಿಯೇ ನಮ್ಮ 'ಸಮಾಜ-ರಹಸ್ಯ'ವನ್ನು ಅಸ್ತಿತ್ವದಲ್ಲಿ

ತರುವ ಸುದೈವವು ಪರಮಗುರುವಾದ ಶ್ರೀರಾಮನ ಕೃಪೆಯಿಂದ ನಮಗೆ ಬಂದಿರುವದು. ತೀವ್ರ ಕಾರ್ಯಭಾರವನ್ನು ಕೈಕೊಂಡು ಕೆಲವಾಂಶದಿಂದಾದರೂ ಈಗಿನ ಶೋಚನೀಯ ಕರ್ನಾಟಕ ಸಮಾಜಸ್ಥಿತಿಯನ್ನು ಸುಧಾರಿಸಲೆತ್ನಿಸಿದರೆ ಪ್ರಸ್ತುತಕ್ಕೆ ಕೈಕೊಂಡ ನಮ್ಮ ಕಾರ್ಯವು ಅಂಶತ.ವಾದರೂ ಸಫಲವಾದಂತಾಗುವದು.

ಮುದವಾಲ,	ನಿಮ್ಮೆಲ್ಲರ ಸೇವಕ,
ವಿಜಯಾದಶಮಿ (೨೫-೧೦-೧೭).	ದಾಮೋದರ.

ಹೃದಯನಿವೇದನ.

ಅಂತಃಕರಣದೊಳಗಿನ ತಳಮಳಿಕೆಯನ್ನು ಸುಹೃದಯರ ಮುಂದೆ ಹೇಳದಿದ್ದರೆ ದುಃಖವು ಕಡಿಮೆಯಾಗಲಾರದು. ಇದೊಂದು ಮನುಷ್ಯನ ಪ್ರಕೃತಿಧರ್ಮವಿರುವದು. ಮೊದಲಿನಿಂದಲೇ ಸಮಾಜಸೇವೆಯನ್ನೂ ಭಾಷಾ ಸೇವೆಯನ್ನೂ ಮಾಡಬೇಕೆಂಬ ನಮ್ಮ ಉತ್ಕಟೇಚ್ಛೆಯು ಈ ಸೇವೆಗಾಗಿ ನಾವು ಯಾವತರದ ಶಿಕ್ಷಣವನ್ನು ಪಡೆಯತಕ್ಕದ್ದು? ಸೇವೆಯನ್ನು ಹ್ಯಾಗೆ ಮಾಡಬೇಕು? ನಮ್ಮ ಸೇವೆಯು ಸಮಾಜಕ್ಕೆ ರುಚಿಕರವಾದೀತೋ ಹೇಗೆ? ಮುಂತಾದ ಎಷ್ಟೋ ವಿಚಾರಗಳು ದಿನಾಲು ನಮ್ಮನ್ನು ಪೀಡಿಸದೆ ಇರುವದಿಲ್ಲ ಚಲೋ ಪುಸ್ತಕಗಳ ವಾಚನವು ಮನುಷ್ಯನ ಸದ್ಗುಣಕ್ಕೆ ಪುಷ್ಟಿಕರಣವಾಗಿ ಸನ್ಮಾರ್ಗವನ್ನು ತೋರಿಸಿ ಕೊಡುವದೆಂದು ಪೂರ್ಣ ಸಂಬಿಗೆಯುಂಟಾಯಿತು. ಇದಕ್ಕಾಗಿ ನಮ್ಮ ಕರ್ನಾಟಕದಲ್ಲಿ ದೊಡ್ಡ ದೊಡ್ಡ ಮಧ್ಯವರ್ತಿಯ ವಾಚನಾಲಯಗಳೂ, ಪುಸ್ತಕಸಂಗ್ರಹಾಲಯಗಳೂ (Central libraries) ಸ್ಥಾಪಿಸಲ್ಪಟ್ಟು ಅವುಗಳಿಂದ ಎಷ್ಟೋ ಸಣ್ಣ ವಾಚನಾಲಯಗಳು ನಡೆಯಿಸಲ್ಪಡುವದಲ್ಲದೆ ಜನರಲ್ಲಿ ವಾಚನಾಭಿರುಚಿಯನ್ನೂ ಸುಸಂಸ್ಕೃತಜೀವಿತೇಚ್ಛೆಯನ್ನೂ ಹೆಚ್ಚಿಸುವ ಪ್ರಯತ್ನವು ನಡೆಯಬೇಕು ಹೀಗಾದರೆ ನಮ್ಮ ಕರ್ನಾಟವು ಶೀಘ್ರವೆ ಉನ್ನತಿಹೊಂದಿ ಹಿಂದುಸ್ಥಾನಕ್ಕೆ ತಾನು ಮಾಡಬೇಕಾದ ಕರ್ತವ್ಯವನ್ನು ಮಾಡಿ ಹಿಂದಮಾತೆಯ ಋಣಮುಕ್ತವಾಗಬಹುದು ಪ್ರಾಥಮಿಕ ಶಿಕ್ಷಣವಿಲ್ಲದೆ ಜನರಿಗೆ ಸುಸಂಸ್ಕೃತ ಜೀವಿತ್ವವನ್ನು ಹೊಂದುವದು ತೀರ ಅಶಕ್ಯವೆಂದು ಇಷ್ಟು ದಿವಸದವರೆಗೆ ಅನುಭವಹೊಂದುತ್ತಿದ್ದ ನಮ್ಮ ಉದಾಹರಣೆಯಿಂದಲೇ ಕಂಡುಹಿಡಿಯಬಹುದು

ನಮ್ಮಿಂದಾದಷ್ಟು ಈ ದೃಷ್ಟಿಯಿಂದ ಕರ್ನಾಟಕ ಸಾಹಿತ್ಯವನ್ನು ಬೆಳೆಯಿಸಬೇಕೆಂದು 'ಶ್ರೀಬಲಭೀಮ ವಾಚನಾಲಯ' ವೆಂಬ ಸಂಸ್ಥೆಯನ್ನು ಕಳೆದ ೯೧೬ ಇಸ್ವಿಯ ಎಪ್ರಿಲ ತಿಂಗಳೊಳಗೆ ನಮ್ಮೂರಲ್ಲಿ ಸ್ಥಾಪಿಸಿದೆವು. ವಾಚನಾಲಯವು ಇನ್ನು ತೀರ ಬಾಲ್ಯಾವಸ್ಥೆಯಲ್ಲಿರುವದೇನೋ ನಿಜವು ಆದರೂ ನಮ್ಮ ಕರ್ನಾಟಕ ಬಂಧು-ಭಗಿನಿಯರು ಸಹಾಯಮಾಡಿದರೆ ನಮ್ಮ ಈ

ಮನೋಭಿಲಾಷವು ಕೈಗೂಡಲಿಕ್ಕೆ ನಮ್ಮ ತನ-ಮನ-ಧನ ಸರ್ವಸ್ವವನ್ನರ್ಪಿಸಿ ಈ ಕಾರ್ಯದಲ್ಲಿ ಅವಿಶ್ರಾಂತಶ್ರಮಪಡುವೆವು.

ಇಂಥ ಕಾರ್ಯಗಳು ಸಾರ್ವಜನಿಕ ಸಹಾಯವೂ, ಸಾರ್ವಜನಿಕ ಪ್ರೇಮಾದರವೂ, ಇಲ್ಲವಿದ್ದರೆ ಅವ್ಯಾಹತವಾಗಿಯೂ, ಅಬಾಧವಾಗಿಯೂ, ನಡೆಯಲಾರವು. ಆದ್ದರಿಂದ ನಮ್ಮ ಬಂಧು-ಭಗಿನಿಯರು ಎಲ್ಲತರದಿಂದಲೂ ನಮ್ಮ ಕಾರ್ಯದಲ್ಲಿ ಸಹಾಯಮಾಡದೆ ಮುಂದುವರಿಯದಿದ್ದರೆ ಸಾಗುವ ಹಾಗಿಲ್ಲ

ವಾಚನಾಲಯದಲ್ಲಿ ಪುಸ್ತಕಸಂಗ್ರಹಕಾರ್ಯವೂ ವಾಚನಾಭಿರುಚಿ ಹೆಚ್ಚಿಸುವ ಕಾರ್ಯವೂ ನಡೆದರೆ ನಮ್ಮಲ್ಲಿ ಸ್ತ್ರೀಯರೂ ಸ್ವಾರ್ಥ ತ್ಯಾಗಬುದ್ಧಿಯು ಹೆಚ್ಚಿಸಿದರೆ ಇನ್ನು ತೀವ್ರವೇ ಕರ್ನಾಟಕವು ಆಸಂಸ್ಕೃತಿಯಗಳನ್ನು ಪಡೆದು ಸುಖಿಯಾಗಬಹುದು. ಸಮಾಜದ ಅರ್ಧಭಾಗ ಎಂದು ಸ್ತ್ರೀಯರೂ ವಿದ್ಯೆ ಕಲಿತು ಉಚ್ಚತಮಧ್ಯೇಯಪ್ರಾಪ್ತಿಗಾಗಿ ಯತ್ನಿಸುವ ತಮ್ಮ ಬಂಧು-ಭಗಿನಿಯರಿಗೂ, ಪತಿಹಿರಿಯರಿಗೂ, ಸಹಾಯಮಾಡಲು ಪ್ರಾರಂಭಿಸಿದರೆ ಈ ಕಾರ್ಯವು ಒಳ್ಳೇ ಭರದಿಂದ ನಡೆದು ಇನ್ನು ಕೆಲವು ದಿವಸಗಳಲ್ಲಿಯೇ ಕರ್ನಾಟಕವು ತನ್ನ ಉಳಿದ ದೇಶ-ಭಗಿನಿಯರಂತೆ ಆನಂದದಿಂದ ಮೆರೆಯಬಹುದು. ವಿದ್ಯಾದಾನವು ಎಲ್ಲ ದಾನಗಳಲ್ಲಿ ಮೇಲಾದದ್ದು! ವಿದ್ಯಾಪ್ರಸಾರವೇ ಜನಾಂಗದ ಉನ್ನತಿಯು!! ಇದೇ ಕಾರ್ಯವನ್ನು ಯಥಾಶಕ್ತಿ ಮಾಡಲು ನಮ್ಮ 'ಬಾಲಭೀಮನು' ಟೊಂಕಕಟ್ಟಿ ನಿಂತಿರುವನು. ಆತನ ಧ್ಯೇಯವನ್ನಂತೂ ಕರ್ನಾಟಕ ಬಂಧು-ಭಗಿನಿಯರಿಗೆ ತಿಳಿಸಿದ್ದೇವೆ. ಇನ್ನು ಆತನ ಕೈಯಿಂದ ಕಾರ್ಯವನ್ನು ತೀವ್ರವಾಗಿ ಮಾಡಿಸುವದು ನಮ್ಮ ಕರ್ನಾಟಕ ಬಂಧು-ಭಗಿನಿಯರನ್ನೇ ಕೂಡಿರುವದು. ಬಾಲಕನು ಸಣ್ಣವನು! ಇನ್ನು ಎಲ್ಲ ಜನರ ಸಹಾಯವಿಲ್ಲ! ಆದ್ದರಿಂದ ಆತನು ದಿನಾಲು ಚಡಪಡಿಸುತ್ತಿರುವನು!!

"ಸಾಮಾಜಿಕ-ಸಾವಿತ್ರಿ' ಯನ್ನು ಪ್ರಸಿದ್ಧಿಸಿ ಈಗ್ಗೆ ೫-೬ ತಿಂಗಳಾಯಿತು. ಗ್ರಂಥಮಾಲೆಯ ಪ್ರಥಮಪುಷ್ಪವೆಂದು ಬರೆದು ಬಿಟ್ಟದ್ದರಿಂದ ಮತ್ತೆ ಎರಡನೇ ಗ್ರಂಥದ ಹಾದಿಯನ್ನು ನೋಡುತ್ತ ನಮ್ಮ ಬಂಧು-ಭಗಿನಿಯರು ಕುಳಿತರು!! ಎರಡನೇ ಪುಸ್ತಕವು ಬರೆದು ಸಿದ್ಧವಾಗಿ ಮುದ್ರಣಾಲಯದ

ಈಗ ೩-೪ ತಿಂಗಳ ಹಿಂದೆಯೇ ಕಂಡಿರುವದೆಂದೂ ನಮ್ಮ ಎಷ್ಟೋ ಬಂಧು-ಭಗಿನಿಯರು ಕೇಳಿದ್ದರು ಆದರೂ ಪುಸ್ತಕವು ಪ್ರಸಿದ್ಧಿಗೆ ತಡವೇಕೆಂಬದು ಅವರಿಗೆ ತಿಳಿಯದಾಯಿತು! ಕಡೆಗೆ ಜಡಮನಸ್ಸಿನಿಂದ 'ಹಣದ ಕೊರತೆಯ ಸಲುವಾಗಿ' ಎಂದು ಉತ್ತರವನ್ನು ಬರೆದೆವು ಇದನ್ನು ಕೇಳಿ ರಾ|| ರಾ|| ಶ್ರೀನಿವಾಸರಾವ ವೆಂಕಟರಾವ ದೇಸಾಯಿ ಮುಂತಾದ ನಮ್ಮ ಕೆಲಮಿತ್ರರು ತಮ್ಮಿಂದಾದಷ್ಟು ದ್ರವ್ಯಸಹಾಯವನ್ನು ಮಾಡಿ 'ಸಮಾಜರಹಸ್ಯ' ವನ್ನು ಕನ್ನಡ ಬಂಧು-ಭಗಿನಿಯರ ಮುಂದೆ ಮಂಡಿಸಲು ಆಸ್ಪದವನ್ನಿತ್ತರು ನಾವು ಆ ಎಲ್ಲ ಮಿತ್ರರಿಗೂ ಋಣಿಯಾಗಿದ್ದೇವೆ ಎಲ್ಲರೀತಿಯಿಂದ ಸಹಾಯಮಾಡಿ ನಮ್ಮ ಈ ಅಲ್ಪಸೇವೆಯನ್ನು ಅನುಗ್ರಹಿಸುತ್ತ ಹೋಗಬೇಕೆಂದು ಎಲ್ಲ ಕನ್ನಡ ಬಂಧು-ಭಗಿನಿಯರಿಗೆ ನಾವು ಅನನ್ಯಭಾವದಿಂದ ಬೇಡಿಕೊಳ್ಳುತ್ತೇವೆ

ನಮ್ಮ ಎಲ್ಲ ಕಾರ್ಯಗಳಿಗೆ ಸಹಾನುಭೂತಿಯಿಂದ ಸಹಾಯಮಾಡಿ, ನಮ್ಮ ಕಾರ್ಯಾದಿಶವನ್ನು ತಿಳಿಸುತ್ತಬಂದ ಮ. ರಾ ರಾ ಕೃಷ್ಣಾಜಿ ಹಣಮಂತ ಮುದವೇಡಕರ ('ಕರ್ನಾಟಕವೃತ್ತ' ಸಂಪಾದಕರು) ಇವರಿಗೂ, ವಾಚನಾಲಯದ ಅಧ್ಯಕ್ಷರೂ, ನಮ್ಮ ಎಲ್ಲ ಸಂಸ್ಥೆಗಳ ಹಿತಚಿಂತಕರೂ, ಸಹಾಯ್ಯಭೂತರೂ ಆದ ಡಾ ಹಣಮಂತ ವೆಂಕಟೇಶ ಸವಣೂರ, ಎಲ್, ಎಮ್, ಆಂಡ ಎಸ್ ಇವರಿಗೂ ನಾವು ಆಜನ್ಮ ಉಪಕಾರಬದ್ಧರಾಗಿರುವೆವು

ಕಡೆಗೆ ಕಡೆಗೆ ಈ 'ಹೃದಯನಿವೇದನ'ವನ್ನು ಓದಿದ ಎಲ್ಲ ಕರ್ನಾಟಕಸ್ಥರ ಮನಸದಲ್ಲಿ ನಾವು ಕೈಕೊಂಡ ಕಾರ್ಯದಲ್ಲಿ ಸಹಾಯ ಮಾಡಲು ಸ್ಫೂರ್ತಿಯನ್ನು ಹುಟ್ಟಿಸಲಿ. ಶಸ್ವಾನಂದ ಜಗಸ್ವಿಯಾಮಕ 'ಶ್ರೀರಘುಪತಿಗೆ' ಬೇಡಿಕೊಂಡು, ಪ್ರತಿ ಕಾಪಂಬರಿಯನ್ನು ತಿದ್ದುವ ಕೆಲಸದಲ್ಲಿ ನಮಗೆ ಸಹಾಯಕರಾದ ಮ. ರಾ ರಾ ರುಕ್ಮಾಂಗದ ಗೋವಿಂದರಾವ ದೇಶಪಾಂಡೆ ಬಿ. ಏ ಯವರಿಗೂ ಮುದ್ರಣವನ್ನು ಮುದ್ದಾಗಿ ಮಾಡಿಕೊಟ್ಟ ಶ್ರೀ. ದೇವೇಂದ್ರರವರಿಗೂ ನಾವು ತುಂಬಾ ಋಣಿಯಾಗಿದ್ದೇವೆಂದು ಹೇಳಿ ನಮ್ಮ 'ನಿವೇದನ'ವನ್ನು ಇಲ್ಲಿಗೆ ಮುಗಿಸುತ್ತೇವೆ

ಶ್ರೀಬಲಭೀಮ ವಾಚನಾಲಯ	ಕರ್ನಾಟಕ ನಮ್ರಸೇವಕನಾದ,
ಮುದವಾಲ, ತಾ|| ೧-೧-೧೯೧೮ ಇಸ್ವಿ	**ದಾಮೋದರ ಸದಾಶಿವ ದೇಶಪಾಂಡೆ.**

ಪರಂಪರಾಗತ ಕೆಲ ದುಷ್ಟರೂಢಿ
ಬಂಧನಗಳಿಂದ
ತಳಮಳಿಸುತ್ತಿರುವ ನನ್ನ

ಬಂಧು-ಭಗಿನಿಯರಿಗೆ

ಈ ಅಲ್ಪ ಪ್ರಯತ್ನವನ್ನು
ಅತ್ಯಂತ ಪ್ರೇಮಭಾವದಿಂದ
ಅರ್ಪಿಸಿರುವೆನು.

ದಾ. ಸ ದೇ

॥ ಶ್ರೀಸರಸ್ವತೀ ಪ್ರಸನ್ನ ॥

ಸಮಾಜರಹಸ್ಯ.

ಪ್ರಥಮ ಪರಿಚ್ಛೇದ.

ಸಮಾಜಸೇವಕಮಂಡಲ.

ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಕೊಟ್ಟು ಸಂಪಾದಿಸಿದ ವಾತಾವರಣದಲ್ಲಿ ಮನುಷ್ಯನು ಓಡಾಡಹತ್ತಿದನೆಂದರೆ, ಆತನ ವಿಚಾರಗಳು ಪಕ್ವವಾಗಹತ್ತಿ, ಆತನ ಮನೋಧೈರ್ಯವಾದರೂ ಹೆಚ್ಚುತ್ತಿದೆ, ತನ್ನ ಸಮಾಜದ ಏಳ್ಗೆಗೂ, ತನ್ನ ದೇಶದ ಏಳ್ಗೆಗೂ, ತನ್ನಿಂದಾದಷ್ಟು ಸಹಾಯಮಾಡಿ ಕೃತಕೃತ್ಯನಾಗಬೇಕೆಂಬ ಉದಾತ್ತವಿಚಾರಗಳಾದರೂ ವಿಶ್ವವಿದ್ಯಾಲಯದಲ್ಲಿ ಕಾಲಿಟ್ಟಕೂಡಲೆ ಆತನಲ್ಲಿ ತಲೆದೋರಹತ್ತುತ್ತವೆ. ವಿಶ್ವವಿದ್ಯಾಲಯದ ಗಾಳಿಯೇ ಅಂತಹದಿರುವದು. ತನ್ನ ವಿದ್ಯಾಭ್ಯಾಸದ ಹೊರ್ತಾಗಿ ಅಲ್ಲಿ ತನಗೆ ಹೆಚ್ಚಿಗೇನಾದರೂ ಕಲಿಯುವದುಂಟೆಂದು ಆತನಿಗೆ ಸ್ವಾಭಾವಿಕವಾಗಿಯೇ ತೋರಿ, ಆತನು ತನ್ನ ಮುಂದಿನ ಧ್ಯೇಯವನ್ನು ಅಲ್ಲಿಯೇ ನಿರ್ಣಯಿಸಿ ಅದಕ್ಕಾಗಿ ಎಲ್ಲತರದ ಜ್ಞಾನವನ್ನು ಮಾಡಿಕೊಳ್ಳಲು ಯತ್ನಿಸುವನು

ಗುರುವಾರವಿದ್ದದರಿಂದ ಪುಣ್ಯಪುರದೊಳಗೆ ಪ್ರಸಿದ್ಧಿಗೆ ಬಂದಿದ್ದ ದಕ್ಷಿಣ-ಮಹಾವಿದ್ಯಾಲಯದಲ್ಲಿ ಇಂದು ಒಂದೇ ತರದ ಗದ್ದಲವು ನಡೆದಿತ್ತು. “ ಸಮಾಜಸೇವಕಮಂಡಲ ” ವೆಂಬ ಸಂಘವು ಸ್ಥಾಪಿಸಲ್ಪಟ್ಟು

ಇಂದಿಗೆ ಮೂರು ವರ್ಷಗಳು ಮುಗಿದು ನಾಲ್ಕನೇ ವರ್ಷವು ಪ್ರಾರಂಭ ವಾಗುವದರಿಂದ, ಆ ಮಂಡಲದ ವಾರ್ಷಿಕಸಭೆಯು ನೆರೆಯುತಕ್ಕದ್ದಿತ್ತು; ಮೇಲಾಗಿ ಸಮಾಜಸೇವೆಯಲ್ಲಿಯೇ ತಮ್ಮ ಆಯುಷ್ಯವನ್ನು ಕಳೆದು ತಮ್ಮ ಜೀವಿತವನ್ನು ಧನ್ಯವಾಗಿ ಮಾಡಿಕೊಂಡು, ಎಲ್ಲ ಜನರ ಆದರಕ್ಕೆ ಪಾತ್ರರಾಗಿದ್ದ ವಿದ್ಯಾಸಂಪನ್ನರೂ, ಅನುಭವಿಕರೂ ಆದ ನಾರಾಯಣರಾಯರು ಮಂಡಲಕ್ಕೆ ಕೆಲವು ಸೂಚನೆಗಳನ್ನು ಮಾಡಿ ಕಾರ್ಯದಿಶೆಯನ್ನು ತಿಳಿಸಿಕೊಡುವದಕ್ಕಾಗಿ ಭಾಷಣ ಮಾಡುವವರಿದ್ದರು. ಕಾಲೇಜದಲ್ಲಿ ಉಪನ್ಯಾಸವೆಂದರೆ ಎಲ್ಲ ವಿದ್ಯಾರ್ಥಿಗಳು ಬರತಕ್ಕವರೇ, ಇಂದು ಸಮಾಜೋನ್ನತಿಯ ವಿಷಯಕ್ಕೆ ನಾರಾಯಣರಾಯರಂಥ ವಾಕ್ಪಟುಗಳು ಮಾತಾಡುವವರಿದ್ದದರಿಂದಂತೂ ಎಲ್ಲ ವಿದ್ಯಾರ್ಥಿಗಳಲ್ಲಿ ಒಂದುತರದ ವಿಶಿಷ್ಟ ಉತ್ಸಾಹವೇ ಉಂಟಾಗಿತ್ತು; ಎಲ್ಲರೂ ತಮ್ಮ ಇಳುಹೊತ್ತಿನ ಫಲಾರವನ್ನು ತೀರಿಸಿಕೊಂಡು, ಐದು ಹೊಡೆಯುವ ದಾರಿಯನ್ನೇ ನೋಡುತ್ತಿದ್ದರು; ಇಚ್ಛಿಸಿದಂತೆ ತೀವ್ರವೇ ಐದು ಹೊಡೆದಕೂಡಲೇ ಎಲ್ಲರೂ ಉಪನ್ಯಾಸಮಂದಿರಕ್ಕೆ ಹೋದರು. ನಾರಾಯಣರಾಯರು ಬಂದಗಳಿಗೆಗೇ ಚಪ್ಪಳೆಯ ಸಪ್ಪಳದಲ್ಲಿ ಎಲ್ಲರೂ ಅವರಿಗೆ ಸ್ವಾಗತವನ್ನಿತ್ತರು. ಮಂಡಲವು ಇಂದಿನವರೆಗೆ ಮಾಡಿದ ಕಾರ್ಯವನ್ನು ಕಾರ್ಯದರ್ಶಿಗಳು ಸವಿಸ್ತರವಾಗಿ ಹೇಳಿದಮೇಲೆ ನಾರಾಯಣರಾಯರು ಮತ್ತೆ ಚಪ್ಪಳೆಯ 'ಕಡಕಡಾಟ'ದ ಗರ್ಜನೆಯಲ್ಲಿ ಎದ್ದುನಿಂತು ಮಾತಾಡಹತ್ತಿದರು. "ಮಿತ್ರರೇ, ಸುಮ್ಮನೆ ವಿದ್ಯಾಲಯದಲ್ಲಿ ಕುಳಿತು ನಮ್ಮ ಸಮಾಜಸುಧಾರಣೆಯು ಈ ರೀತಿಯಿಂದ ಆಗತಕ್ಕದ್ದು, ನಮ್ಮ ಸಮಾಜದಲ್ಲಿ ಇಂಥಿಂಥ ಸುಧಾರಣೆಗಳ ಅವಶ್ಯಕತೆಯುಂಟು ಎಂದು ಹೇಳಿದರೆ ಸಮಾಜಕ್ಕೆ ನಿಮ್ಮ ಮಂಡಲದಿಂದ ಏನೂ ಲಾಭವಾಗಲರಿಯದು. ಈಗ ನಿಮ್ಮಂಥ ಕೆಲ ತರುಣರು ಆಜನ್ಮಪರ್ಯಂತವೂ ಇದೇ ಕಾರ್ಯವನ್ನು ಕೈಕೊಂಡು, ಜಾತಿಯೊಳಗಿನ ಕೆಲವು ರೂಢಿಗಳಿಂದ ಎಷ್ಟು ಹಾನಿಯಾಗುತ್ತದೆಂಬದನ್ನು ಉಪ

ನ್ಯಾಸಗಳ ರೂಪದಿಂದಲೂ, ಪ್ರತ್ಯಕ್ಷ ಉದಾಹರಣೆಯಿಂದಲೂ ಜನರಿಗೆ ಚನ್ನಾಗಿ ತಿಳಿಸಿಕೊಡಬೇಕು, ಸತತ ಕಾರ್ಯದಕ್ಷರಾಗಿ ಸಮಾಜಕಂಟಕರನ್ನು ಗೊತ್ತುಹಚ್ಚಿ ಅವರವರ ದುಷ್ಟ ಚಾಳಿಗಳನ್ನು ಬಿಡಿಸಲು ಯತ್ನಿಸಬೇಕು, ಸಮಾಜಕ್ಕೆ ಹಾನಿತಟ್ಟುವಂಥ ಕೃತ್ಯಗಳನ್ನು ಮಾಡಿದವರಿಗೆ ದಂಡಿಸದೆ ಬಿಡಬಾರದು; ವರದಕ್ಷಿಣೆ ತೆಗೆದುಕೊಳ್ಳುವದು, ಬಾಲಿಕೆಯರನ್ನು ಹೊಟ್ಟೆತುಂಬಿಕೊಳ್ಳುವ ಹಣದಾಶೆಗಾಗಿ ಮಾರಿಕೊಳ್ಳುವದು, ಬಾಲವಿವಾಹ ಮಾಡುವದು, ಮುಂತಾದ ನೀಚಕೃತ್ಯ ಮಾಡುವವರನ್ನು ಕಂಡುಹಿಡಿದು, ಮೊದಲು ಅವರಿಗೆ ಅವುಗಳ ದುಷ್ಪರಿಣಾಮವನ್ನು ತಿಳಿಸಿಕೊಡುತ್ತಹೋಗಬೇಕು; ಅದರಿಂದಲೂ ಅವರು ತಮ್ಮ ದುಷ್ಕರ್ಮಗಳನ್ನು ಬಿಡದಿದ್ದರೆ ಸಮಾಜದಿಂದ ಅವರಿಗೆ ' ಬಹಿಷ್ಕಾರ 'ವನ್ನು ಹಾಕಿಸಬೇಕು, ಈ ರೀತಿಯಿಂದ ನಡೆಯಲು ನಿರ್ಧರಿಸಿ ಸಮಾಜಸೇವೆಯನ್ನು ಕೈಕೊಳ್ಳದಿದ್ದರೆ, ನಮ್ಮ ಸಮಾಜಸುಧಾರಣೆಯ ಕೆಲಸವು ನೂರಾರು ವರ್ಷಗಳವರೆಗೆ ಇನ್ನೂ ಹಾಗೆಯೇ ಉಳಿಯುವದು, ..." ನಾರಾಯಣರಾಯರು ಇನ್ನೂ ಎಷ್ಟೋ ಸಮಯೋಚಿತ ಸೂಚನೆಗಳನ್ನು ಮಾಡಿದರು. ಆದರೆ ಅವುಗಳನ್ನೆಲ್ಲ ಇಲ್ಲಿ ಹೇಳುತ್ತ ಕುಳಿತುಕೊಂಡು ನಮ್ಮ ವಾಚಕರನ್ನು ಬೇಸರಗೊಳಿಸಲೆತ್ನಿಸದೆ ಮುಂದಿನ ಕಾರ್ಯಕ್ರಮದ ಬಗ್ಗೆ ಇಷ್ಟರಿಂದಲೇ ಅವರ ವಿಚಾರಗಳನ್ನು ಅರಿತುಕೊಳ್ಳಲು ನಮ್ಮ ವಾಚಕರಿಗೆ ಬಿಟ್ಟು ಅವರ ಭಾಷಣದ ಪರಿಣಾಮವು ಶ್ರೋತೃಸಮುದಾಯದ ಮೇಲೆ ಹೇಗೆ ಆಯಿತೆಂಬದನ್ನು ತಿಳಿದುಕೊಳ್ಳಲು ತಿರುಗುವಾ. ಅದೋ ನೋಡಿರಿ! ದೂರದಲ್ಲಿ ವಿದ್ಯಾಧರನು ಹೇಗೆ ಸ್ಫೂರ್ತಿಗೊಂಡು ಏನೋ ಹೇಳಬೇಕೆಂದು ವಿಚಾರಿಸಿ ಏಳುತ್ತಿರುವನು? ಆತನೇನು ಮಾತಾಡುವನೋ ಎಂದು ಎಲ್ಲ ವಿದ್ಯಾರ್ಥಿಗಳು ಆತನ ಕಡೆಗೆ ಅಚಲ ದೃಷ್ಟಿಯಿಂದ ನೋಡುತ್ತಿರುವರು; ನಾರಾಯಣರಾಯರೂ ಸಹ ಈತನ ಚಲವಿಚಲವೃತ್ತಿಯನ್ನು ಕಂಡು ಈತನ ಭಾಷಣವನ್ನು ಕೇಳಲು

ಆತುರಗೊಳ್ಳುತ್ತಿರುವರೆಂಬುದು ಸ್ಪಷ್ಟವಾಗಿ, ಅವರ ಮುಖದಮೇ ಲಿಂದ ತೋರುತ್ತಿರುವದು, ವಿದ್ಯಾಧರನ ಹತ್ತರವೇ ಕುಳಿತಿದ್ದ ಆತನ ಪರಮ ಮಿತ್ರನಾದ ಮಾಧವನಿಗೆ ಈತನು ಮಾತಾಡುವ ವಿಚಾರ ರಹಸ್ಯವು ತಿಳಿದಿರುವದು, ಮಾಧವನು ಲಗುಬಗೆಯಿಂದ ಆತನಿಗೆ ಹಾಗೆ ಮಾಡಬೇಡೆಂದು ಆತನನ್ನು ಕೂಡಿಸಲು ಯತ್ನಿಸಿದನು, ಆದರೆ ವಿದ್ಯಾಧರನು ಆತನ ಸೂಚನೆಯನ್ನು ಲೆಕ್ಕಿಸದೆ ಎದ್ದುನಿಂತು ಉಚ್ಚ ಸ್ವರದಿಂದ ಮಾತಾಡಹತ್ತಿದನು

" ಮಹಾಶಯರೇ, ತಾವು ಹೇಳಿದಂತೆ ಕಾರ್ಯವನ್ನು ಜರುಗಿ ಸುವದಕ್ಕಾಗಿ ಆಜನ್ಮ ಬ್ರಹ್ಮಚಾರಿಯಾಗಿದ್ದು ಸಮಾಜಸೇವೆಗಾಗಿ ಯೇ ನನ್ನ ಆಯುಷ್ಯವನ್ನು ಕಳೆಯಬೇಕೆಂದು ನಾನು ಇಚ್ಛಿಸುತ್ತೇನೆ. ಇಂದು ನಿಮ್ಮ ಸಾನ್ನಿಧ್ಯದಲ್ಲಿಯೇ ಅದಕ್ಕಾಗಿ ಪ್ರತಿಜ್ಞೆ ಮಾಡಿ ಕಾರ್ಯವನ್ನು ಕೈಕೊಳ್ಳುವೆನು." ಎಂದು ಹೇಳಿ ಇನ್ನು ಪ್ರತಿಜ್ಞೆಯ ಶಬ್ದಗಳನ್ನು ಉಚ್ಚರಿಸತಕ್ಕವನು. ಇಷ್ಟರಲ್ಲಿಯೇ ಮಾಧವನು ಚಟ್ಟನೆ ಎದ್ದುನಿಂತು ಅಂದದ್ದುಃ—"ಮಹಾಶಯರೇ, ಪ್ರತಿಜ್ಞೆಗೆ ಹೀಗೆ ಅವಸರ ಮಾಡಿದರೆ ಅವಿಚಾರವಾಗುವ ಸಂಭವವುಂಟು, ಅವ ಸರದಲ್ಲಿ ಮಾಡಿದ ಪ್ರತಿಜ್ಞೆಗಾಗಿ ಹಿಂದಿನಿಂದ ಪಶ್ಚಾತ್ತಾಪ ಪಡುವ ಸಂಭವವುಂಟು, ಇನ್ನು ಸೂಟಿಯು ತೀರ ಸಮೀಪಕ್ಕೆ ಬಂದಿದೆ; ಆದ್ದರಿಂದ ವಿದ್ಯಾಧರನ ಮನೋಧೈರ್ಯವೇ ಇಷ್ಟು ನಿಶ್ಚಲವಿದ್ದರೆ ಸೂಟಿಯಲ್ಲಿ ಕೆಲವು ಕಡೆಗೆ ಹೋಗಿ, ಈ ಕೆಲಸವನ್ನು ತುಸು ದಿವಸ ಗಳ ವರೆಗೆ ಮಾಡಿ ಅನುಭವ ತೆಗೆದುಕೊಂಡು, ಇನ್ನೂ ಬ್ರಹ್ಮಚಾ ರಿವ್ರತದಿಂದಲೇ ಸಮಾಜಸೇವೆಯನ್ನು ಮಾಡುವದೇ ಆತನಿಗೆ ಸರಿ ಯಾಗಿ ತೋರಿದರೆ ವಿದ್ಯಾಲಯವು ಮತ್ತೆ ಪ್ರಾರಂಭವಾದ ಮೇಲೆ ಹಾಗೆ ಪ್ರತಿಜ್ಞೆಯನ್ನು ಮಾಡಲಿ, ಸುಮ್ಮನೆ ಇಂದು ಪ್ರತಿಜ್ಞೆಯನ್ನು ಮಾಡಿ, ನಾಳೆ ಅದನ್ನು ಭಂಗಿಸುವದು ಮಾತ್ರ ಲೇಸಲ್ಲ; ಸಮಾಜ

ಸೇವೆಗಾಗಿ ಆಜನ್ಮ ಬ್ರಹ್ಮಚಾರಿವ್ರತದಿಂದಲೇ ಇರಬೇಕೆಂಬದೇನೂ ನನಗೆ ಸರಿಯಾಗಿ ತೋರುವದಿಲ್ಲ." ಹೀಗೆ ಹೇಳಿ ವಿದ್ಯಾಧರನು ಕುಳಿತುಕೊಂಡ ಮೇಲೆ ಎಲ್ಲ ಕಡೆಯಲ್ಲಿಯೂ ಶಾಂತತೆಯೇ ಉಂಟಾಯಿತು. ಎಲ್ಲರೂ ಮಾಧವನ ಸಮಯೋಚಿತ ಭಾಷಣವನ್ನು ಕುರಿತು ವಿಚಾರಿಸುತ್ತ ತುಸು ಹೊತ್ತು ಕಳೆದರು, ಕಡೆಗೆ ಕೆಲವರಿಗೆ ಮಾಧವನ ಮಾತಿನ ಸ್ಪಷ್ಟತೆಯು ಪೂರ್ಣವಾಗಿ ಹೊಳೆಯಿತು, ಕೆಲವು ವಿದ್ಯಾರ್ಥಿಗಳು ಕೂಡಿ ಸೂಟಿಯಲ್ಲಿ ತುಸು ಕಾರ್ಯಭಾಗವನ್ನು ಮಾಡಿ ಅನುಭವ ತೆಗೆದುಕೊಳ್ಳಬೇಕೆಂದು ನಿಷ್ಕರ್ಷೆಯಾಗಿ ಸಭೆಯ ಕೆಲಸವು ತೀರಿತು.

ಎಲ್ಲರೂ ತಮ್ಮ ತಮ್ಮ ನಿಜಸ್ಥಾನಗಳಿಗೆ ತೆರಳಿದರು. ವಿದ್ಯಾಧರನೂ, ಮಾಧವನೂ ಒಂದೇ ಕೋಣೆಯಲ್ಲಿ ಇರುತ್ತಿದ್ದರು. ವಿದ್ಯಾಧರನು ತನ್ನ ಮಿತ್ರನ ಮೇಲೆ ಬಹಳೇ ಸಿಟ್ಟಿಗೆದ್ದಂತೆ ಎಲ್ಲರಿಗೂ ತೋರಿತು ವಿದ್ಯಾಧರನು ಏನೂ ಮಾತಾಡದೆ, ಸುಮ್ಮನೆ ಬಂದು ತನ್ನ ಹಾಸಿಗೆಯ ಮೇಲೆ ಬಿದ್ದುಕೊಂಡನು. ಆತನ ಮನಸ್ಸಿನಲ್ಲಿ ತರತರದ ವಿಚಾರಲಹರಿಗಳು ಬರಹತ್ತಿದವು. ಮಾಧವನನ್ನು ತಾನು ಅಣ್ಣನೆಂದು ಮನ್ನಿಸುತ್ತಿದ್ದು ಆತನು ಇಂದು ಸಭೆಯಲ್ಲಿ ತನ್ನ ಮಾನಹಾನಿಯನ್ನು ಯಾಕೆ ಮಾಡಲಿಚ್ಛಿಸಿದನೆಂಬದರ ಗೂಢವು ಆತನಿಗೆ ತಿಳಿಯದಾಯಿತು. ಆತನು ದುರಭಿಮಾನಿಯೆಂದೂ ಸಹ ಒಮ್ಮೆ ಆತನಿಗೆ ತೋರುತ್ತಿತ್ತು, ಮಾಧವನ ಈ ತೆರದ ವಿಲಕ್ಷಣ ನಡತೆಯ ವಿಷಯದಲ್ಲಿ ವ್ಯಸನವಾಗಿ ಆತನು ತಳಮಳಿಸಹತ್ತಿದನು. ಕೆಲವು ಹೊತ್ತಿನ ಮೇಲೆ ಈ ತರದ ಕೆಟ್ಟ ವಿಚಾರಗಳೆಲ್ಲ ಹೋಗಿ ಮನಸ್ಸು ತುಸು ಶಾಂತವಾದ ಮೇಲೆ ಮಾಧವನು ಇಂದಿನವರೆಗೆ ಮಾಡಿದ ಉಪಕಾರಗಳನ್ನು ಆತನು ನೆನಿಸಹತ್ತಿದನು; ಮಾಧವನ ನಿರ್ಮಲ ಅಂತಃಕರಣಕ್ಕೆ ಮೆಚ್ಚಿ ಆತನ ಸಖ್ಯವನ್ನು ಬೆಳೆಯಿಸಲು ತಾನು ಹೇಗೆ ಆತುರ

ಪಟ್ಟನೆಂಬುದೂ, ಮುಂದೆ ಬರಬರುತ್ತ ತಮ್ಮಿಬ್ಬರ ಮಿತ್ರತ್ವವು ಬೆಳೆಯುತ್ತ ಹೋಗಿ ಇಂದು ಅದು ಭ್ರಾತೃ-ಪ್ರೇಮವನ್ನೂ ಸಹ ಹೇಗೆ ಮೀರಿರುವದೆಂಬುದೂ, ಆತನಿಗೆ ನೆನವಾಯಿತು. ಹೀಗಿದ್ದ ಮೇಲೆ ಮಾಧವನು ತನ್ನ ಹಾದಿಯಲ್ಲಿ ಎಂದಿಗೂ ಅಡ್ಡಬರಲಾರನೆಂದು ಆತನಿಗೆ ಅನಿಸಹತ್ತಿತು, ಇಂದಿನ ವರೆಗಿನ ಆತನ ಅನುಭವ, ಆತನ ಇಂದಿನ ವಿಲಕ್ಷಣ ನಡತೆ ಇವುಗಳ ನಡುವೆ ತುಮುಲ ಯುದ್ಧವು ಪ್ರಾರಂಭವಾಗಿ, ಕಡೆಗೆ ಆತನ ಅನುಭವದ ಕೊರಳಲ್ಲಿಯೇ ಜಯಮಾಲೆಯು ತಳುಪಿಸಹತ್ತಿತು. ಆದರೆ ಈಹೊತ್ತು ಆತನು ಹೀಗೆ ಮಾಡಿದ ಕಾರಣವೇನೆಂಬುದು ಮಾತ್ರ ಆತನ ಲಕ್ಷ್ಯಕ್ಕೆ ಬರಲಿಲ್ಲ; ಮಾಧವನನ್ನೇ ಇದರ ವಿಷಯಕ್ಕೆ ಕೇಳಬೇಕೆಂದು ಆತನು ಮನಸ್ಸಿನಲ್ಲಿ ಮಾಡಿಕೊಂಡು, ಕೂಡಲೆ ಎದ್ದು ಕುಳಿತನು.

ಇಷ್ಟು ಹೊತ್ತಿನವರೆಗೆ ಮಾಧವನು ಏನೂ ಮಾತಾಡದೆ ತನ್ನ ಖುರ್ಚಿಯ ಮೇಲೆ ಸುಮ್ಮನೆ ವಿಚಾರಿಸುತ್ತ ಕುಳಿತಿದ್ದನು. ತಾನು ಇಂದು ಹೀಗೆ ಒಮ್ಮೆಲೇ ವಿದ್ಯಾಧರನ ಚಂಚಲತೆಯ ವಿಷಯಕ್ಕೆ ಸಭೆಯಲ್ಲಿ ಹೇಳಿದ್ದರಿಂದ ಆತನು ಮನಸ್ಸಿನಲ್ಲಿ ನೊಂದುಕೊಂಡನೋ ಏನೋ ಎಂದು ಮಾಧವನಿಗೆ ವಿಷಾದವೆನಿಸಿತ್ತು. ತಾನು ಒಂದು ಕಾರ್ಯಕ್ಕಾಗಿ ಯತ್ನಿಸುತ್ತಿರಲು ಆ ಕಾರ್ಯವು ಮಾತ್ರ ಸಾಧ್ಯವಾಗದೆ, ಕಡೆಗೆ ಮಿತ್ರತ್ವಕ್ಕೆ ಬಾಧೆಯು ಬಂದು ಇಂದಿನವರೆಗೆ ಮಾಡಿದ ತನ್ನ ಪ್ರಯತ್ನವೆಲ್ಲ ನಿಷ್ಫಲವಾಗುವದೋ ಏನೋ ಎಂದು ಆತನು ವಿಚಾರಿಸುತ್ತಿದ್ದನು. ವಿದ್ಯಾಧರನು ಬಹಳ ಚಂಚಲ ಮನಸ್ಸಿನವನೆಂದು ಆತನಿಗೆ ಈ ಮೊದಲೇ ತಿಳಿದಿತ್ತು; ಬಾಲ್ಯದಲ್ಲಿ ಆತನಿಗೆ ಚನ್ನಾಗಿ ಯಾರೂ ತಿಳಿಸಿಕೊಡದ್ದರಿಂದ ಸಮಾಜಸೇವೆಗಾಗಿ ಆತನಲ್ಲಿ ಅಸ್ಪಷ್ಟ ವಿಚಾರಗಳೇ ತುಂಬಿರುವವೆಂದು ವಿದ್ಯಾಧರನು ಕಂಡುಹಿಡಿದಿದ್ದನು. ಆದ್ದರಿಂದ ನಿಜವಾದ ಮಾರ್ಗವನ್ನು ಆತನಿಗೆ

ಹೇಳಿಕೊಟ್ಟರೆ ತನ್ನ ಮೇಲೆ ಸಿಟ್ಟಾಗದೆ ಚಂಚಲ ಮನಸ್ಸಿಗಾಗಿ ತನ್ನನ್ನೇ ದೂಷಿಸಿಕೊಂಡು ಸಮಯೋಚಿತ ಉಪಕಾರಕ್ಕಾಗಿ ತನ್ನನ್ನು ಮನ್ನಿಸದೆ ಇರಲಾರನೆಂದು ಆತನು ತಿಳಕೊಂಡಿದ್ದನು. ವಿದ್ಯಾಧರನು ಸುಶಿಕ್ಷಿತ ತರುಣನಿದ್ದು ಕೇವಲ ನಿರ್ಮಲ ಅಂತಃಕರಣದವನು. ಆತನಲ್ಲಿ ಕಪಟನಾಟಕವು ಎಳ್ಳಷ್ಟಾದರೂ ಇರಲಾರದೆಂಬದಾಗಿ ಮಾಧವನು ಪೂರ್ಣಮನಗಂಡಿದ್ದನು. ಇಂಥ ಉತ್ತಮೋತ್ತಮ ಗುಣಗಳುಳ್ಳ ವಿದ್ಯಾಧರನ ಸ್ನೇಹವನ್ನು ಸಂಪಾದಿಸಿ ಮಾಧವನು ಧನ್ಯನಾಗಿದ್ದನು.

ವಿದ್ಯಾಧರನು ಎದ್ದು ಕುಳಿತಿದ್ದನ್ನು ಕಂಡು ಮಾಧವನು ಸಾವಕಾಶನಾಗಿ ಅಂದದ್ದು "ವಿದ್ಯಾಧರಾ, ನನ್ನ ಮೇಲೆ ಸಿಟ್ಟಗೆದ್ದೀನು? ನಾನು ನಿನ್ನ ಹಿತಕ್ಕಾಗಿಯೇ ಹಾಗೆ ಹೇಳಿದೆನು. ನಿನ್ನ ಅಹಿತವನ್ನು ನಾನು ಜನ್ಮಜನ್ಮಾಂತರದಲ್ಲಿಯೂ ಕೂಡ ಬಯಸದೆ ಯಾವಾಗಲೂ ನಿನ್ನ ಸಖ್ಯವನ್ನು ದಯಪಾಲಿಸೆಂದು ಅನನ್ಯಭಾವದಿಂದ ದೇವರಿಗೆ ಬೇಡಿಕೊಳ್ಳುತ್ತಿರುವೆನು ಇಂದು ಹೀಗೆ ಮಾಡುವದರಲ್ಲಿ ನನ್ನ ಹೇತುವ್ಯಾವದೆಂದು ನೀನು ಕೇಳಬಹುದು; ಆದರೆ ಅದನ್ನು ಮಾತ್ರ ನಾನು ಈಗ ನಿನಗೆ ಹೇಳಲಾರೆನು. ನನ್ನ ಮಾತಿನ ಅನುಭವ ಬಂದ ಮೇಲೆ ನಿನಗೆ ನನ್ನ ಈ ಆಕಸ್ಮಿಕ ವರ್ತನದ ಕಾರಣವು ತಿಳಿಯಬಹುದು. ಏಳು; ಹೀಗೆ ಸುಮ್ಮನೆ ಏನಾದರೊಂದು ತಿಳಿದುಕೊಂಡು ಅಸಮಾಧಾನ ಹೊಂದುವದು ಹಿತಕರವಲ್ಲ. ನನ್ನ ಮಾತಿನ ಸತ್ಯತೆಯು ನಿನಗೆ ಇನ್ನು ತುಸು ದಿವಸಗಳಲ್ಲಿಯೇ ತಿಳಿದೀತು." ಹೀಗೆ ಮಾಧವನು ತಾನಾಗಿಯೇ ಮಾತಾಡಿದ್ದನ್ನು ಕಂಡು ವಿದ್ಯಾಧರನ ಮನಸ್ಸಿಗೆ ಆನಂದವಾಯಿತು. ಇದಕ್ಕಾಗಿ ಇನ್ನು ಹೆಚ್ಚಿಗೇನೂ ಕೇಳದೆ ಮತ್ತೆ ಹೊತ್ತು ಸಾಧಿಸಿದಾಗ ಅದನ್ನೆಲ್ಲ ತಿಳಿದುಕೊಳ್ಳಬೇಕೆಂದು ನಿರ್ಧರಿಸಿ ಸುಮ್ಮನಾದನು. ತಾನು ಮಾತಾಡದಿದ್ದರೆ ಮಾಧವನು ಮನಸ್ಸಿಗೆ ಕೆಡಕೆನಿಸ

ಕೊಳ್ಳಬಹುದೆಂದು ನಂಬಿ ಆತನ ಸಂಗಡ ತುಸು ಹೊತ್ತು ಮಾತಾಡುತ್ತ ಕುಳಿತು—ತಾನು ಸಿಟ್ಟಗದ್ದಿಲ್ಲವೆಂದೂ, ಆತನ ಮೇಲೆ ತನ್ನ ಪೂರ್ಣ ವಿಶ್ವಾಸವುಂಟೆಂದೂ, ತನಗೆ ಆತನಿಗಿಂತ ಹೆಚ್ಚಿನ ಹಿತಚಿಂತಕರಾರು ಇಲ್ಲೆಂದೂ, ಹೇಳಿದದರಿಂದ ಮಾಧವನ ಮನಸ್ಸಿಗೆ ಆನಂದವಾಯಿತು.

ಕಡೆಗೆ ತಿರಗಾಡುವ ಹೊತ್ತಾಯಿತೆಂದು ತಿಳಿದು ಇಬ್ಬರೂ ಮಿತ್ರರು ಮತ್ತೆ ಅಂಗಿಯನ್ನು ಹಾಕಿಕೊಂಡು ‘ಬಂಡ’ವನದ ಕಡೆಗೆ ಹೋದರು. ಹಾದಿಯಲ್ಲಿಯೂ ಸಹ ಬಹಳ ಮಾತಾಡದೆ ತಮ್ಮ ತಮ್ಮ ಇಂದಿನ ಆಚರಣದ ವಿಚಾರದಲ್ಲಿಯೇ ತಲ್ಲೀನರಾಗಿ ಹೋಗಿದ್ದರು. ತುಸು ಹೊತ್ತು, ವನದಲ್ಲಿ ಮಲ್ಲಿಗೆ ಗಿಡಗಳ ಮೇಲಿಂದ ಹಾಯ್ದು ತಂಪಾಗಿ ಸುವಾಸನೆಯಿಂದ ಕೂಡಿದ ಮಂದಮಾರುತನನ್ನು ಸೇವಿಸಿ ತಿರುಗಿ ತಮ್ಮ ಕೋಣೆಗೆ ಬಂದು, ಊಟ ಉಡಿಗೆಗಳನ್ನು ತೀರಿಸಿಕೊಂಡು ಹತ್ತು ಹೊಡೆಯುವವರೆಗೆ ಅಭ್ಯಾಸಮಾಡಿ ಇಬ್ಬರೂ ಪರಮಮಿತ್ರರು ನಿದ್ರಾವಶರಾದರು.

ದ್ವಿತೀಯ ಪರಿಚ್ಛೇದ.

ಪೂರ್ವಪರಿಚಯ.

ವಾಚಕವೃಂದ! ನಮ್ಮ ಈ ಮಿತ್ರರ ಪೂರ್ವ ಇತಿಹಾಸವನ್ನು ಹೇಳದೆ ತಮ್ಮನ್ನು ಇಷ್ಟು ವೇಳೆಯವರಿಗೆ ಏನೋ ಹೇಳುತ್ತ ಕುಳಿತದ್ದಕ್ಕಾಗಿ ನಮ್ಮಮೇಲೆ ತಾವು ಮಾತ್ರ ಸಿಟ್ಟಾಗಲಿಲ್ಲವೇ?

ಎರಡನೆಯವರ ಪೂರ್ವಾಪರ ಇತಿಹಾಸವನ್ನು ಪರೀಕ್ಷಿಸದೆ ಕುರುಡರಾಗಿ ಅವರ ಅನುಕರಣಮಾಡುವದು ಕಾಲಾಂತರದಿಂದ

ಪಶ್ಚಾತ್ತಾಪಕ್ಕೆ ಕಾರಣವಾಗುತ್ತದೆ ದೊಡ್ಡ ದೊಡ್ಡ ಗ್ರಂದಗಳನ್ನು ಓದುವಾಗ್ಗೆ ನಮಗೆ ಎಷ್ಟೋ ತರದ ಉದಾಹರಣೆಗಳು ಕಾಣುತ್ತವೆ. ಆದರೆ ಅವುಗಳಲ್ಲಿ ಗ್ರಾಹ್ಯಾಂಶವು ಎಷ್ಟಿರುವದು, ಇಲ್ಲವೆ ಅವು ನಮ್ಮ ದೇಶ-ಕಾಲಕ್ಕನುಸರಿಸಿ ಎಷ್ಟರಮಟ್ಟಿಗೆ ಅನುಕರಣೀಯವಾಗಿರುವವು ಇವೇ ಮೊದಲಾದ ಪ್ರಶ್ನಗಳ ಬಗ್ಗೆ ನಾವು ಎಳ್ಳಷ್ಟಾದರೂ ವಿಚಾರಮಾಡುವದಿಲ್ಲ ಆ ಉದಾಹರಣೆಯು ಬಾಹ್ಯಾಂಗವೇ ಅಷ್ಟು ಮನೋಹರವಾಗಿರುವದು ನೋಡಿದ ಕೂಡಲೆ ಅದನ್ನು ನಾವೂ ಮಾಡಿ ನೋಡಿ ನಾಶಹೊಂದದೆ ನಮ್ಮಲ್ಲಿ ಶಾಂತತೆಯುಂಟಾಗಲಾರದು. ಹೀಗೆ ಹೇಳಿದ್ದರಿಂದ ಯಾವದರಲ್ಲಿಯೂ ಸತ್ಯಾಂಶವಿರುವದಿಲ್ಲೆಂದು ಮಾತ್ರ ವಾಚಕರು ತಿಳಿಯುವ ಕಾರಣವಿಲ್ಲ, ಇರಬಹುದು ಕೆಲವಡೆಯಲ್ಲಿ ಸತ್ಯಾಂಶವು ಶತಾಂಶದಿಂದಲೂ ನಿಜವಿರಬಹುದು, ಆದರೆ ಇಂಥ ಉದಾಹರಣೆಗಳು ಮಾತ್ರ ಕಡಿಮೆ ಮೇಲಾಗಿ ಅನುಭವ-ಕಿರೀಟವಿಲ್ಲದೆ ಸುಮ್ಮನೆ ಗುರುತರ ಕಾರ್ಯಸಿಂಹಾಸನದಮೇಲೆ ಕೂಡಲು ಹವಣಿಸಿ ಸತ್ಯನಾಶವನ್ನು ಮಾಡಿಕೊಳ್ಳುವದರಲ್ಲಿ ಕೆಲವರಿಗೆ ಯಾಕೆ ಸಂತೋಷವಾಗುತ್ತದೆಯೋ ನಮಗಂತೂ ಹೇಳಲಾಗದು, ಸಾಧಾರಣವಾಗಿ ನಮ್ಮ ವಿದ್ಯಾಧರನು ಈ ಜಾತಿಯವನಿದ್ದನು. ಆತನಿಗೆ ಮೊದಲಿನಿಂದಲೇ ಸಮಾಜಸೇವೆಯ ನಿಜವಾದ ಮಾರ್ಗವನ್ನು ಹೇಳಿಕೊಡುವವರು ಯಾರೂ ಇಲ್ಲದ್ದರಿಂದ ಆತನಿಗೆ ತಾನು ಓದಿದ್ದರ ಮೇಲೆಯೇ ಮನೋರಾಜ್ಯದ ಗಿಡಗಳನ್ನು ಬೆಳಿಸಿ ಫಲಗಳನ್ನು ಪರೀಕ್ಷಿಸಬೇಕಾಗುತ್ತಿತ್ತು. ಆತನ ಹತ್ತರ ಮೊದಲು ಮೊದಲು ಇಂಥ ಕಾರ್ಯದ ಅನುಭವವುಳ್ಳವರು ಯಾರೂ ಇಲ್ಲದ್ದರಿಂದ ಆತನ ಸಮಾಜಸೇವೆಯ ವಿಚಾರಗಳೇನೋ ತಪ್ಪಿ ಕೆಲವು ಸಾರೆ ಇದಕ್ಕಾಗಿ ಸಂಕಟದೊಳಗೆ ಸಹ ಬೀಳುತ್ತಿದ್ದನು. ಹೀಗಾಗಿದ್ದದರಿಂದಲೆ ಆತನ ಮನಸ್ಸು ಚಂಚಲವಾಗಿತ್ತು; ಒಂದು ಮಾರ್ಗವನ್ನು ಅನುಸರಿಸ ತುಸುಹೊತ್ತು ಅದನ್ನು ಕ್ರಮಿಸಿದಮೇಲೆ ಅದರ ಪರಿಣಾಮವು ಅಷ್ಟೇನು ಚನ್ನಾಗಿ

ಆಗಲಿಕ್ಕಿಲ್ಲೆಂಬ ಭ್ರಾಮಕ ಕಲ್ಪನೆಯಿಂದಲೇ ಅದನ್ನು ಬಿಟ್ಟುಕೊಟ್ಟು ಹೊಸ ಕಾರ್ಯಕ್ಕೆ ಆರಂಭಿಸುತ್ತಿದ್ದನು ಒಂದು ಕಾರ್ಯದ ಬೆನ್ನುಹತ್ತಿ ಮನಸುಗೊಟ್ಟು ಅದಕ್ಕಾಗಿ ಅವಿಶ್ರಾಂತಶ್ರಮಪಟ್ಟು, ಅದರ ಸುಪರಿಣಾಮವನ್ನು ಕಾಣುವ ಸುದಿನದುಪಭೋಗವು ಕ್ವಚಿತ್ತಾಗಿಯೇ ಆತನ ಪಾಲಿಗೆ ಬರುತ್ತಿತ್ತು. ಹೀಗಿದ್ದರೂ ಸಹ ಆತನು ಸರಸ್ವತೀದೇವಿಯ ಕೇವಲ ಪರಮ ಭಕ್ತನಿದ್ದದರಿಂದ ಆಕೆಯು ಮಾತ್ರ ಪೂರ್ಣ ಆತನಿಗೆ ಪ್ರಸನ್ನಳಾಗಿದ್ದಳು ಆತನು ಈ ವರ್ಷ ಬಿ ಏ ಪರೀಕ್ಷೆಗೆ ಕೂಡತಕ್ಕವನಿದ್ದನು. ಸುದೈವದಿಂದ ದಕ್ಷಿಣ ಮಹಾವಿದ್ಯಾಲಯದಲ್ಲಿ ಬಂದಂದಿನಿಂದ ಮೇಲೆ ಹೇಳಿದಂತೆ ಆತನಿಗೆ ಸರ್ವ ಗುಣಸಂಪನ್ನನಾದ ಮಾಧವನು ಜೊತೆಗಾರನಾದನು.

ಮಾಧವನು ಮೊದಲಿನಿಂದ ದಕ್ಷರಾದ ತಂದೆತಾಯಿಗಳ ಮೇಲ್ವಿಚಾರಣೆಯ ಕೆಳಗೆ ಬೆಳೆದದ್ದರಿಂದ ಆತನಿಗೆ ಎಲ್ಲತರದ ಅನುಭವವು ಸಜ್ಜನರ ಉದಾಹರಣೆಯಿಂದಲೂ, ಸ್ವಂತ ಆಚರಣೆಯಿಂದಲೂ ಬಂದಿತ್ತು. ಶ್ರೀನಿವಾಸರಾಯರು—ಅಂದರೆ ಮಾಧವನ ತಂದೆಯವರು ಸರ್ವ ವಿದ್ಯಾಮಂಡಿತರಾಗಿದ್ದರು. ಜಗತ್ತಿನ ಆಶ್ಚರ್ಯಕ್ಕೂ, ಅಭಿನಂದನೆಗೂ ಕಾರಣವಾದ ಮುಂಬಾಪುರದಂಥ ಕಾರ್ಯದೇವಿಯ ಮನೆಯಲ್ಲಿ ವಾಸಿಸುತ್ತಿದ್ದರು. ಶ್ರೀನಿವಾಸರಾಯರು ಉಂಡುಟ್ಟು ಸುಖದಿಂದ ವಿದ್ಯಾದೇವಿಯ ಪೂಜೆಯಲ್ಲಿ ತತ್ಪರರಾದವರೆಂದು ಅವರ ಮಿತ್ರಮಂಡಲಕ್ಕೂ, ಅವರ ನೆರೆಹೊರೆಯವರಿಗೂ ಗೊತ್ತಾದ ಮಾತಾಗಿತ್ತು. ಮಾಧವನು ಇಂಥವರ ಮಗನಿದ್ದದರಿಂದ ಆತನಿಗೆ ಮೇಲುತರದ ಉದಾತ್ತ ಶಿಕ್ಷಣವೇ ಸಿಕ್ಕಿತ್ತು. ಆತನ ತಾಯಿಯು ಸಹ ಸುಶಿಕ್ಷಿತಳೂ ಕಾರ್ಯದಕ್ಷಳೂ ಆಗಿದ್ದಳು. ಮಕ್ಕಳ ಲಾಲನೆಪಾಲನೆಯ ವಿಷಯಕ್ಕಂತೂ ನಿಸರ್ಗದೇವಿಯನ್ನು ಕೂಡ ನಾಚಿಸುವಂಥವಳು. ಹೀಗಿದ್ದಮೇಲೆ ನಮ್ಮ ಮಾಧವನು ಮನೆ

ಯಲ್ಲಿ ಆದರ್ಶಭೂತ ಆಜ್ಞಾಧಾರಕಪುತ್ರನೂ, ಕಾಲೇಜದಲ್ಲಿ ಉತ್ತಮ ಮಿತ್ರನೂ ಆಗಿದ್ದನೆಂದು ಬೇರೆಯಾಗಿ ಹೇಳಬೇಕಾಗಿಲ್ಲ. ಇಂಥವರೇ ಸಮಾಜದ ಪ್ರಾಣಜ್ಯೋತಿಗಳು, ಆತನು ಮ್ಯಾಟ್ರಿಕ್ಯುಲೇಶನ್ ಪರೀಕ್ಷೆ ಪಾಸಾದನಂತರ ತಾನು ಪುಣ್ಯಪುರದಂಥ ನಿಸರ್ಗದೇವಿಯ ಮಂದಿರದಲ್ಲಿಯೇ ಸರಸ್ವತಿಯನ್ನು ಪೂಜಿಸಲು ಯತ್ನಿಸುವೆನೆಂದು ಹೇಳಿ ಮಾತಾಪಿತೃಗಳ ಆಜ್ಞೆಯನ್ನೂ, ಆಶೀರ್ವಾದಗಳನ್ನೂ ಪಡೆದು ಪುಣ್ಯಪುರದ ದಕ್ಷಿಣ ಮಹಾವಿದ್ಯಾಲಯದಲ್ಲಿಯೇ ತನ್ನ ಮುಂದಿನ ಶಿಕ್ಷಣಕ್ರಮವನ್ನು ಪ್ರಾರಂಭಿಸಿದ್ದನು. ಅದಕ್ಕೆ ಈಗ ೩-೪ ವರ್ಷಗಳಾಗಿ ವಿದ್ಯಾಧರನಂತೆ ಆತನೂ ಈವರ್ಷ ಬಿ. ಏ. ಪರೀಕ್ಷೆಗೆ ಕೂಡ್ರತಕ್ಕವನಿದ್ದನು. ಒಂದೇತರದ ಅಭ್ಯಾಸ, ಒಂದೇ ಕೋಣೆಯಲ್ಲಿಯ ವಾಸ, ಹೀಗಾದ ಮೇಲೆ ಒಬ್ಬರ ಗುಣಾವಗುಣಗಳು ಮತ್ತೊಬ್ಬರಿಗೆ ತಿಳಿಯಹತ್ತಿ ಮಾಧವನ ಅಸಾಧಾರಣ ಗುಣಗಳನ್ನು ಕಂಡು ವಿದ್ಯಾಧರನು ಆತನನ್ನು ಒಡಹುಟ್ಟಿದ ಅಣ್ಣನಂತೆ ಪ್ರೀತಿಸುತ್ತಿದ್ದದ್ದೇನು ಆಶ್ಚರ್ಯವಲ್ಲ! ಪ್ರೀತಿಯಿಂದ ಪ್ರೀತಿಯು ಹುಟ್ಟುತ್ತದೆ, ವಿದ್ಯಾಧರನೇನು ವ್ಯಸನಾಧೀನನಿರದೆ, ಆತನೂ ತನ್ನಷ್ಟೆ ವಿದ್ಯಾಪರಿಪೂರಿತನೂ, ಸಭ್ಯನೂ, ಸುಗುಣಶೀಲನೂ, ಇರುವನೆಂದು ಕಂಡು ಮಾಧವನಾದರೂ ವಿದ್ಯಾಧರನ ಬಂಧುಪ್ರೇಮವನ್ನು ಕಂಡು ತಕ್ಕ ಪ್ರತಿಪ್ರೇಮವನ್ನೇ ತೋರಿಸಹತ್ತಿದನು, ಹೀಗಾಗಿದ್ದರಿಂದ ೩-೪ ವರ್ಷದ ಸಹವಾಸದಿಂದ ಅವರ ಈ ಪ್ರೇಮವು ವೃದ್ಧಿಂಗತವಾಗುತ್ತ ನಡೆದಿತ್ತು. ನಮ್ಮ ಚಾಣಾಕ್ಷನಾದ ಮಾಧವನು ವಿದ್ಯಾಧರನ ಕೆಲವು ಅಸ್ಪಷ್ಟ ವಿಚಾರಗಳನ್ನು ಕೇಳಿ ಆತನ ಮನಶ್ಚಾಂಚಲ್ಯವನ್ನು ಕಂಡುಹಿಡಿಯದೆ ಇರಲಿಲ್ಲ, ಹೀಗಾಗುವದಕ್ಕೆ ಕಾರಣವೇನೆಂಬದೂ ಆತನ ಮನಸ್ಸಿನಲ್ಲಿ ಹೊಳೆದುಹೋಯಿತು. ಅದನ್ನೆಲ್ಲ ತಾನು ವೇಳೆ ಸಾಧಿಸಿದಾಗ ಚನ್ನಾಗಿ ಖಂಡಿಸುತ್ತಹೋಗಿ ಆತನ ಭ್ರಮೆಯನ್ನೂ ಮನಶ್ಚಂಚಲತೆಯನ್ನೂ ಹೋಗಲಾಡಿಸಬೇಕೆಂದು ಆತನು ನಿಶ್ಚಯಿಸಿದ್ದನು. ಇಷ್ಟರಲ್ಲಿಯೇ ಈ ಕಾರ್ಯದಲ್ಲಿ ಆತನಿಗೆ ಕೆಲ

ಮಾಂಶದಿಂದ ಯಶಸ್ಸು ಸಿಕ್ಕಿತ್ತು. ಹೀಗೆ ತನ್ನ ಏಳಿಗೆಗಾಗಿಯೂ, ವಿದ್ಯೆಗಾಗಿಯೂ, ಮಾಧವನು ಹೆಣಗುತ್ತಿರುವದನ್ನು ಕಂಡು ವಿದ್ಯಾಧರನು ವಿಶೇಷವಾಗಿ ಪ್ರೇಮಿಸಹತ್ತಿದನು. ಆತನೇ ತಂದೆಯು. ಆತನೇ ಗುರುವು, ಆತನೇ ಮಿತ್ರನು, ಬಹಳವೇಕೆ, ಮಾಧವನೇ ತನ್ನ ಸರ್ವಸ್ವವೆಂದು ವಿದ್ಯಾಧರನು ತಿಳಕೊಳ್ಳಹತ್ತಿದನು. ಇದನ್ನೆಲ್ಲ ಕಂಡು ಮಾಧವನಿಗೂ ತುಸು ಆನಂದವಾಗಿತ್ತು ನಿಜವಾಗಿ ಹೀಗಾಗುವದು ಸ್ವಾಭಾವಿಕವೇ! ತಾವು ಪರರ ಕಲ್ಯಾಣಕ್ಕಾಗಿ ಹೆಣಗಿದ್ದರ ಫಲವು ದೊರಕುವ ಮಾರ್ಗಪ್ರತೀಕ್ಷೆಯನ್ನು ಯಾರು ಮಾಡಲಾರರು!! ವಸ್ತುಸ್ಥಿತಿಯು ಹೀಗಿದ್ದದರಿಂದಲೇ ಮೊದಲನೇ ಪರಿಚ್ಛೇದದಲ್ಲಿ ವರ್ಣಿಸಿದ ವಿದ್ಯಾಧರನ ಅಸಮಾಧಾನವು ಅಷ್ಟು ತೀವ್ರವೇ ಹಾರಿಹೋಯಿತು. ಮತ್ತೆ ಇಬ್ಬರು ಮೊದಲಿನಂತೆ ಇರಹತ್ತಿದರು. ಆದರೂ ಅಂದಿನ ವಿಷಯವನ್ನೇ ಬೇರೆ ಬೇರೆ ರೀತಿಯಿಂದ ಚರ್ಚಿಸುವದನ್ನು ಮಾತ್ರ ಬಿಡಲಿಲ್ಲ. ವಿದ್ಯಾಧರನು ತೀರ ಚಿಕ್ಕವನಿರುವಾಗಲೇ ತಾಯಿತಂದೆಗಳು ತೀರಿಕೊಂಡದ್ದರಿಂದ ಅನಾಥ ಬಾಲಕನ ಸಂರಕ್ಷಣೆಯ ಭಾರವು ಆತನ ದೂರಿನ ಆಪ್ತರಾದ ದಿವಾಕರಪಂತರಮೇಲೆ ಬಿದ್ದಿತ; ಅವರು ಬಹಳ ದಕ್ಷತೆಯಿಂದ ಬಾಲಕನನ್ನು ದೊಡ್ಡವನಾಗಿ ಮಾಡಿ ಶಿಕ್ಷಣಕ್ಕೆ ಹತ್ತುವ ಹಣವನ್ನು ಪೂರೈಸಿ ವಿದ್ಯಾರ್ಜನೆಗೆ ತಿಮ್ಮಿಂದಾದಷ್ಟು ಸಹಾಯಮಾಡುತ್ತಿದ್ದರು. ವಿದ್ಯಾಧರನ ತಂದೆಯು ದೊಡ್ಡ ಜಮೀನದಾರನಿದ್ದದರಿಂದ ಹೀಗೆ ಸುಲಭವಾಗಿಯೇ ದಿವಾಕರಪಂತರಿಗೆ ಹಣವನ್ನು ಪೂರೈಸಲು ಬರುತ್ತಿತ್ತು, ದಿವಾಕರಪಂತರಮೇಲೆ ವಿದ್ಯಾಧರನ ಪೂರ್ಣ ವಿಶ್ವಾಸವು. ವಿದ್ಯಾಧರನು ಗೊಡ್ಡವನಾದಂದಿನಿಂದ ದಿವಾಕರಪಂತರಾದರೂ ಈ ವಿಶ್ವಾಸದ ದುರುಪಯೋಗವನ್ನು ಮಾಡಲು ಕನಸುಮನಸಿನಲ್ಲಿಯೂ ಕೂಡ ಎಣಿಸದೆ ಹೊಲದ ಲೆಕ್ಕಪತ್ರಗಳನ್ನೂ, ಆದಾಯದ ‹ಜಮಾಖರ್ಚ› ಪಟ್ಟಿಯನ್ನೂ ಈತನಿಗೆ ಕಳಿಸುತ್ತಿದ್ದರು.

ವಾಚಕಮಹಾಶಯ, ಇಲ್ಲಿಯೇ ಇನ್ನೊಂದು ಮಾತು ! ಮಾಧವನು ವಿದ್ಯಾಧರನ ವಿಷಯದಲ್ಲಿ ಇಷ್ಟು ನಿಃಸ್ವಾರ್ಥ ಬುದ್ಧಿಯಿಂದಲೂ, ಅಲೌಕಿಕ ಪ್ರೇಮದಿಂದಲೂ ನಡೆಯುತ್ತಿದ್ದು, ತಾನು ಒಂದು ಕಾರ್ಯಕ್ಕಾಗಿ ವಿದ್ಯಾಧರನನ್ನು ಸಭೆಯಲ್ಲಿ ಆ ದಿವಸ ಪ್ರತಿಜ್ಞೆಯನ್ನು ಮಾಡುವದರಿಂದ ತಡೆದಿರಲು, ಆತನು ತನ್ನ ಮೇಲೆ ಕೋಪಿಸುವನೋ ಏನೋ ಎಂದು ಅಂಜಿದನೆಂದು ಹಿಂದೆ ಹೇಳಿದ್ದೇವೆ ಮುಂದೆ ಆತನ ಈ ಅಂಜಿಕೆಯಾದರೂ ಸುಳ್ಳಾಯಿತೆಂಬದು ವಾಚಕರು ಕಂಡುಹಿಡಿದೇ ಇರುವರು. ಆತನ ಕಾರ್ಯವ್ಯಾವದೆಂದು ಮಾತ್ರ ಇನ್ನು ವಾಚಕರಿಗೆ ತಿಳಿಸಲೇ ಇಲ್ಲ.

ಶ್ರೀನಿವಾಸರಾಯರಿಗೆ ಮಾಧವನೆಂಬ ಸತ್ಪುತ್ರನಿದ್ದದ್ದಲ್ಲದೆ ಸರಸ್ವತಿಯೆಂಬವಳೊಬ್ಬ ೧೩-೧೪ ವರ್ಷದ ಮಗಳಿದ್ದಳು ಶ್ರೀನಿವಾಸರಾಯರ ಮಹಾಭಾಗ್ಯವೇ ಅಂದದು ! ಸುಪತ್ನಿ ! ಸುಪುತ್ರ! ಸುಕನ್ಯೆ! ! ತಿನ್ನಲಿಕ್ಕೆ ಉಣ್ಣಲಿಕ್ಕೆ ಮನೆಯಲ್ಲಿ ಬೇಕಾದಷ್ಟು! ! ಈಗಿನ ಸುಧಾರಿಸಿದ ಜನರಂತೆ ಹೆಂಗಸರು ವಕೀಲಿಯನ್ನು ಮಾಡತಕ್ಕದ್ದು. ಅಥವಾ ಗಂಡಸರಷ್ಟು ಸಮಾನ ಹಕ್ಕಿನಿಂದ ರಾಜಮಂದಿರದಲ್ಲಿ ಮೆರೆಯತಕ್ಕದ್ದು. ಇವೇ ಮೊದಲಾದ ವಿಚಾರದವರಾಗದಿದ್ದರೂ ಹೆಂಗಸರಿಗೆ ಶಿಕ್ಷಣವು ಅವಶ್ಯವಾಗಿ ಕೊಡತಕ್ಕದ್ದೆಂದು ಅವರ ಅಭಿಪ್ರಾಯವು. ಆದರೆ ಈಗಿನಂತೆ ಗಂಡು ಹುಡುಗರ ಶಾಲೆಯಲ್ಲಿ ಅವರಿಗೆ ಶಿಕ್ಷಣವನ್ನು ಕೊಡದೆ, ಸುಶಿಕ್ಷಿತ ಮರ್ಯಾದೆಶೀಲ ಹೆಂಗಸರೇ, ಬೇರೆ ಸ್ಥಾಪಿಸಿದ ಹೆಣ್ಣು ಹುಡುಗರ ಶಾಲೆಯಲ್ಲಿ, ಅವರಿಗೆ ಕಲಿಸತಕ್ಕದ್ದೆಂದು ಶ್ರೀನಿವಾಸರಾಯರು ಆಗಾಗ್ಗೆ ಹೇಳುತ್ತಿದ್ದರು. ಹೆಂಗಸರ ವಿದ್ಯಾಭ್ಯಾಸದ ವಿಷಯಕ್ಕಂತೂ ಅವರ ಮತ ಬೇರೆ. ಬೀಜಗಣಿತ, ರಸಾಯನ ಶಾಸ್ತ್ರ ಮುಂತಾದ ವಿಷಯಗಳನ್ನು ಕಲಿಸಿ ಬಾಲಿಕೆಯರನ್ನು ಪೀಡಿಸುವದಕ್ಕಿಂತ, ಗೃಹಕೃತ್ಯ, ಹೆಣೆಯುವದು, ಚಿತ್ರತೆಗೆಯುವದು, ಗಾಯನ,

ಶಿಶುಸಂಗೋಪನ, ತಕ್ಕಮಟ್ಟಿಗೆ ವೈದ್ಯಶಾಸ್ತ್ರ, ಸಂಸ್ಕೃತ ಮುಂತಾದ ವಿಷಯಗಳನ್ನು ಅವಶ್ಯವಾಗಿಯೇ ಕಲಿಸಿ ಅವರನ್ನು ನಿಪುಣರನ್ನಾಗಿ ಮಾಡಿ ಸುಸಂಸ್ಕೃತ ಆಯುಷ್ಯವನ್ನು ಕಳೆಯಬೇಕೆಂದು ಅವರ ಇಚ್ಛೆಯು. ವಿಶೇಷವಾಗಿ ಸಂಸ್ಕೃತ ಅಭ್ಯಾಸ ಮಾಡಿಸುವದರ ಮೇಲೆ ಅವರಿಗೆ ಮನಸ್ಸು ಬಹಳ. ಸಂಸ್ಕೃತಭಾಂಡಾರದಲ್ಲಿದ್ದ ಉದಾತ್ತ ಜೀವನ ರಹಸ್ಯಗಳನ್ನೂ ಜೀವಿತಸನ್ಮಾರ್ಗವನ್ನೂ, ಭಾರತೀ-ಸಾಧ್ವಿಯರ ಚರಿತ್ರೆಗಳನ್ನೂ ಪ್ರತಿಬಬ್ಬ ಹೆಂಗಸು ಅಭ್ಯಾಸಿಸಬೇಕೆಂಬು ಅವರು ಯಾವಾಗಲೂ ಅನ್ನುತ್ತಿದ್ದರು ಆದ್ದರಿಂದ ಅವರು ಸರಸ್ವತಿಯನ್ನು ಈ ರೀತಿ ಹೊಸದಾಗಿ ಸ್ಥಾಪಿಸಲ್ಪಟ್ಟ ಮಹಿಲಾ-ವಿದ್ಯಾಲಯಕ್ಕೆ ಕಳಿಸುತ್ತಿದ್ದರು. ಈಗ ಆಕೆಯು ಇಂಗ್ಲಿಷ ಪ್ರವೇಶಪರೀಕ್ಷೆಯವರೆಗೆ ಅಭ್ಯಾಸಿಸಿದ್ದಳು ಶ್ರೀನಿವಾಸರಾಯರು ಮನೆಯಲ್ಲಿ ಸ್ವತಃ ಆಕೆಗೆ ಸಂಸ್ಕೃತ ಕಲಿಸುತ್ತಿದ್ದದರಿಂದ ಆಕೆಯು ಈಗ ಸಾವಿತ್ರಿ-ಆಖ್ಯಾನ, ನಲೋಪಾಖ್ಯಾನ ಮುಂತಾದ ಬೋಧಪರ ಪುಸ್ತಕಗಳನ್ನು ಸಹಜರೀತಿಯಿಂದ ಓದಿ ವಿಶೇಷ ಮಾರ್ಮಿಕ ರೀತಿಯಿಂದ ಅರ್ಥವನ್ನು ತಿಳಿದುಕೊಳ್ಳುತ್ತಿದ್ದಳು. ತಮ್ಮ ಉತ್ಕಟೇಚ್ಛೆಯನ್ನು ಮಗಳು ಪೂರೈಸಿದಳೆಂದು ತಿಳಿದು ಶ್ರೀನಿವಾಸರಾಯರಿಗೆ ಪರಮಾನಂದವಾಗಿತ್ತು. ಹೀಗೆ ಸರಸ್ವತಿಯು ಪೌರ್ವಾತ್ಯ, ಪಾಶ್ಚಿಮಾತ್ಯಭಾಷೆಗಳಲ್ಲಿ ನಿಷ್ಣಾತಳಾಗಿದ್ದಳಲ್ಲದೆ, ಗೃಹಕೃತ್ಯದಲ್ಲಿಯೂ ಆಕೆಯ ಜಾಣತನವನ್ನು ನೋಡಿ ಆಕೆಯ ತಾಯಿಯಾದ ಮನೋರಮಾಬಾಯಿವರಿಗೆ ಹಿಡಿಸಲಾರದಷ್ಟು ಆನಂದವಾಗಿತ್ತು. ಇನ್ನು ಸರಸ್ವತಿಯು ಚಲೋ ಗಂಡನನ್ನು ಪಡೆದಳೆಂದರೆ ತಮ್ಮಷ್ಟು ಸುಖಿಗಳು ಯಾರೂ ಆಗಲಿಕ್ಕಿಲ್ಲೆಂದು ಅವರು ಅನ್ನುತ್ತಿದ್ದರು. ಮಗಳು ಇನ್ನು ದೊಡ್ಡವಳಾದದ್ದರಿಂದ ಮದುವೆಯನ್ನು ಮಾಡಲೇಬೇಕೆಂದು ಮನೋರಮಾಬಾಯಿಯವರು ಪತಿಯ ಹತ್ತರ ಹಟಹಿಡಿದರು. ಶ್ರೀನಿವಾಸರಾಯರಿಗೆ ತಾವು ಸ್ವತಃ ಗಂಡನನ್ನು ಹುಡುಕಹತ್ತಿದ್ದಲ್ಲದೆ ಮಾಧವನಿಗೂ ಅದರ ವಿಷಯಕ್ಕೆ ಶೋಧಿ

ಸಲು ಹೇಳಿಟ್ಟಿದ್ದರು. ಮಾಧವನಮೇಲೆ ಅವರ ವಿಶ್ವಾಸವೂ ಪ್ರೇಮವೂ ಬಹಳ.

ಮಾಧವನು ತನ್ನ ಓರಿಗೆಯವನನ್ನೂ, ಸುಶೀಲನನ್ನೂ, ತನ್ನ ವಿದ್ಯಾಲಯದಲ್ಲಿ ಹುಡುಕಬಹುದೆಂದು ನಂಬಿ ಅವನ ಮಾತೆಯವರಾದ ಮನೋರಮಾಬಾಯಿಯವರು ವಿದ್ಯಾಧರನ ಮುಂದೆ ಯಾವಾಗಲೂ "*तरुण, कुलिन, गोरा, पाहिजे मुलीला, चतुर सद्गुणी, सुंदरसा नवरा" ಎಂದು ಶಾರದಾ ನಾಟಕದಲ್ಲಿಯ ಶಾರದೆಯ ತಾಯಿಯ ಶಬ್ದದಿಂದ ಹಾಡಿ ಸರಸ್ವತಿಯ ಬೆನ್ನು ಚಪ್ಪರಿಸಿ ನಗುತ್ತ ಹೇಳುತ್ತಿದ್ದರು.

ತೃತೀಯ ಪರಿಚ್ಛೇದ.

ಬ್ರಹ್ಮಚಾರಿವ್ರತವೋ, ಗೃಹಸ್ಥಾಶ್ರಮವೋ?

ವಾಚಕರಿಗೆ ಇನ್ನು ಮಾಧವನ ಕಾರ್ಯವ್ಯಾವದೆಂದು ಹೇಳುವ ಕಾರಣವಿಲ್ಲ, ಸರಸ್ವತಿಯ ಉಲ್ಲೇಖದಿಂದಲೂ, ಮಾತಾಪಿತೃಗಳು ಮಾಧವನಿಗೆ ಪ್ರೀತಿಯಿಂದ ಒಪ್ಪಿಸಿದ ಕಾರ್ಯವನ್ನು ಕೇಳಿದ್ದರಿಂದಲೂ, ನಮ್ಮ ಚಾಣಾಕ್ಷರಾದ ವಾಚಕರಿಗೆ ಆತನ ಕಾರ್ಯರಹಸ್ಯವು ತಿಳಿದಿರಬಹುದು. ತನ್ನ ತಂಗಿಯ ಕಲ್ಯಾಣಕ್ಕಾಗಿ ಆಕೆಗೆ ಅನುರೂಪವಾಗಿಯೇ ಇದ್ದು ಸಕಲಗುಣಮಂಡಿತನೂ, ಬಹಳವೇಕೆ, ಮನೋರಮಾಬಾಯಿಯವರು ವರ್ಣಿಸಿದಂತೆಯೇ ಇದ್ದ ವಿದ್ಯಾಧರನನ್ನೇ ತನ್ನ ಬೀಗನಾಗಿ ಆರಿಸಿರಬಹುದೆಂದು ಸಹ ನಮ್ಮ ಎಷ್ಟೋ ವಾಚಕರು ಊಹಿಸಿರಬಹುದು. ಹೌದು! ನೀವು ತಿಳಿದದ್ದು ನಿಜವು! ಆದರೆ ಇದುವರೆಗೆ ತನ್ನ ಇಚ್ಛೆಯನ್ನು

[* ತರುಣನೂ, ಕುಲೀನನೂ, ಸುಶೀಲನೂ, ಸದ್ಗುಣಿಯೂ ಆದಂಥವನನ್ನೇ ನನ್ನ ಮಗಳಿಗೆ ಪತಿಯಾಗಿ ಆರಿಸು.]

ಮಾತ್ರ ಆತನು ಯಾರಿಗೂ ತಿಳಿಸಿದ್ದಿಲ್ಲ ಆದರೆ ತಾಯಿತಂದೆಗಳು ಆತನನ್ನು ಸರಸ್ವತಿಗೆ ಗಂಡನನ್ನು ಹುಡುಕುವದಕ್ಕಾಗಿ ಕೇಳುವದರ ಪೂರ್ವದಲ್ಲಿಯೇ, ತಂಗಿಯು ಮೇಲಿನ ಅಚಲ ಪ್ರೇಮವೂ, ಆಕೆಯ ಗುಣಗಳ ಬಗ್ಗೆ ಆದರವೂ ಆಕೆಯು ತನ್ನನ್ನು ಈಗೀಗ ಯಾವಾಗಲೂ ಹೇಗೆ ಅರ್ಥಪೂರ್ಣ ದೃಷ್ಟಿಯಿಂದ ವ್ಯಾಕುಲಚಿತ್ತಳಾಗಿ ನೋಡುವಳೆಂಬದೂ ಆತನ ಲಕ್ಷಕ್ಕೆ ಬಂದು ಕಾರ್ಯವನ್ನು ಈ ಮೊದಲೇ ಕೈಕೊಂಡಿದ್ದನು ತೀವ್ರವೇ ವಿದ್ಯಾಧರನು ಆತನಿಗೆ ಯೋಗ್ಯವರನಾಗಿ ತೋರಿದನು. ಆತನ ಸರಲ ವೃತ್ತಿಯನ್ನು ಕಂಡು ತನ್ನ ಭಗಿನಿಗೆ ಈತನು ಯೋಗ್ಯ ಪತಿಯಾಗಬಹುದೆಂದು ನಿಶ್ಚಯಿಸಿ, ಸೂಕ್ಷ್ಮರೀತಿಯಿಂದ ಆತನ ಗುಣಾವಗುಣಗಳ ನಿರೀಕ್ಷಣ ಮಾಡುವದಕ್ಕಾಗಿಯೇ ತಾನೂ ವಿದ್ಯಾಧರನೂ ಒಂದೇ ಕೋಣೆಯಲ್ಲಿ ಇರುತ್ತೇವೆಂದು ವಿದ್ಯಾರ್ಥಿಗಳ ಮೇಲ್ವಿಚಾರಕರಿಗೆ ಹೇಳಿಕೊಂಡಿದ್ದನು ಈಗ ೨-೩ ವರ್ಷದ ಸಹವಾಸದಿಂದ ವಿದ್ಯಾಧರನ ವಿಷಯಕ್ಕೆ ಆತನ ಅಭಿಪ್ರಾಯವು ಚನ್ನಾಗಿ ಆಗುತ್ತ ಹೋಗಿ ಆತನ ಪ್ರೇಮವನ್ನಾದರೂ ಸಂಪಾದಿಸಿದ್ದನು. ಹೀಗಿರಲು ಆತನು ತನ್ನ ಭಗಿನಿಯ ವಿಷಯಕ್ಕೆ ವಿದ್ಯಾಧರನ ಮುಂದೆ ಮಾತುತೆಗೆದು ಮೇಲಿಂದ ಮೇಲೆ ಆಕೆಯ ನಿಜಗುಣಾನುವಾದವನ್ನು ಮಾಡದೆ ಇರುತ್ತಿದ್ದಿಲ್ಲ ಎರಡು ವರ್ಷದ ಕೆಳಗೆ ಮಾಧವನು ವಿದ್ಯಾಧರನನ್ನು ತಾನಿರುತ್ತಿದ್ದ ಮುಂಬಾಪುರಿಗೆ ಕರೆದೊಯ್ದಿದ್ದನು. ಅಲ್ಲಿ ಆತನ ಕುಟುಂಬದವರ ಸರಲವೃತ್ತಿಯನ್ನೂ, ನಿರ್ಮಲ ಅಂತಃಕರಣವನ್ನೂ ಅವರ ವಿದ್ಯಾರ್ಜನೆಯನ್ನೂ, ಸುಶೀಲತನವನ್ನೂ ಕಂಡು ಮಾಧವನ ಮನೆಯೆಂದರೆ ಆನಂದದೇವತೆಯ ಸುಖಮಂದಿರವೇ ಎಂದು ವಿದ್ಯಾಧರನು ತಿಳಿಯುತ್ತಿದ್ದನು. ಹೀಗೆ ಎಲ್ಲ ರೀತಿಯಿಂದಲೂ ಮಾಧವನೆಂದರೆ ವಿದ್ಯಾಧರನ ಸರ್ವಸ್ವವಾಗಿ ಹೋಗಿತ್ತು. ತನ್ನ ತಂಗಿಯು ಕಡೆಯಿಂದ ಬರುತ್ತಿದ್ದ ಪತ್ರಗಳನ್ನು ವಿದ್ಯಾಧರನಿಗೆ ತೋರಿಸಿ ಆಕೆಯ ಸರಲ ಅಂತಃಕರಣವನ್ನು ನಿವೇದಿಸುವ

ಒಂದಾದರೂ ಪ್ರಸಂಗವನ್ನು ಮಾಧವನು ವ್ಯರ್ಥವಾಗಿ ಹೋಗಗೊಡುತ್ತಿದ್ದಿಲ್ಲ. ಇದನ್ನೆಲ್ಲ ಕಂಡು ವಿದ್ಯಾಧರನು ಸರಸ್ವತಿಯನ್ನು ಆಕೆಯ ಕೇವಲ ನಿರ್ಮಲಾಂತಃಕರಣಕ್ಕಾಗಿ ಪ್ರೀತಿಸುವನೆಂದೂ, ಈ ಪ್ರೇಮವು ಪ್ರಣಯಪ್ರೇಮವಲ್ಲೆಂದೂ ಮಾಧವನು ತಿಳಿದಿದ್ದನು.

ಆದರೆ ಇತ್ತ ನಮ್ಮ ವಿದ್ಯಾಧರನ ವಿಚಾರ ಬೇರೆ ಸರಸ್ವತಿಯ ಗುಣಗಳನ್ನು ಕಂಡು ಆಕೆಯು ನಿಜವಾಗಿ ಸರಸ್ವತೀ ದೇವಿಯಂತೆ ವಿದ್ಯಾಧರನಿಗೆ ತೋರುತ್ತಿದ್ದಳು, ಇಂಥವಳನ್ನು ಮದುವೆಯಾಗುವದು ತನ್ನಂಥವನಿಗೆ ಶಕ್ಯವಿಲ್ಲೆಂದು ಕಂಡು ಮೊದಲು ಮೊದಲು ನಿರ್ಮಲ ಅಂತಃಕರಣದಿಂದ ಪ್ರೀತಿಸುತ್ತಿದ್ದನು, ಆದರೆ ಬರಬರುತ್ತ ಇದೆಲ್ಲ ಹೋಯಿತು. ಆತನಿಗೆ ಸರಸ್ವತಿಯ ರಮ್ಯವಾದ ಮೂರ್ತಿಯು ಮೇಲಿಂದಮೇಲೆ ನೆನಪಾಗಹತ್ತಿತು. ಸರಸ್ವತಿಯ ಪತ್ರಗಳನ್ನು ಓದಿ ಮನಸ್ಸಿನಲ್ಲಿಯೇ ಆನಂದಪಡುತ್ತಿದ್ದನು ಸರಸ್ವತಿಯ ಗುಣಾನುವರ್ಣನವನ್ನು ಕೇಳುತ್ತ ಕೂಡುವದರಲ್ಲಿ ಆತನು ಸಂತೋಷಪಡಹತ್ತಿದನು. ಆದರೆ ಇವೆಲ್ಲ ವಿಚಾರಗಳು ಕಾಲಾಂತರದಿಂದ ಮಾಧವನ ದೃಷ್ಟ್ಯೋತ್ಪತ್ತಿಗೆ ಬೀಳದೆ ಉಳಿಯಲಿಲ್ಲ. ವಿದ್ಯಾಧರನು ತಾನು ಸರಸ್ವತಿಯನ್ನು ಪ್ರೀತಿಸುತ್ತೇನೆಂದು ಮಾಧವನಿಗೆ ಇನ್ನೂ ಹೇಳಿದ್ದಿಲ್ಲ ಮಾಧವನಾದರೂ ಯಾವ ಕಾರಣದಿಂದಲೋ ಏನೋ ಸರಸ್ವತಿಯನ್ನು ಮದುವೆಯಾಗೆಂದು ವಿದ್ಯಾಧರನನ್ನು ಇನ್ನೂ ಕೇಳಿದ್ದಿಲ್ಲ. ವಿವಾಹದ ವಿಷಯಕ್ಕೆ ವಿದ್ಯಾಧರನ ವಿಚಾರಗಳೇನೋ ಅಪಕ್ವವಿರುವವೆಂದು ಆತನಿಗೆ ಗೊತ್ತಿತ್ತು. ಸಮಾಜಸೇವೆಗಾಗಿ ಆಜನ್ಮವೂ ಬ್ರಹ್ಮಚಾರಿವ್ರತವನ್ನು ಕೈಕೊಳ್ಳಬೇಕೆಂದು ಯಾರು ಆತನಿಗೆ ಹೇಳಿದ್ದರೊ ಏನೋ! ಇದಕ್ಕಾಗಿ ಆತನ ಎಲ್ಲ ವಿಚಾರಗಳನ್ನು ಸಂಪೂರ್ಣವಾಗಿ ಒಮ್ಮೆ ಕೇಳಿಕೊಳ್ಳಬೇಕೆಂದು ಆತನು ಮಾಡಿದನು. ಅದರಂತೆ ಹೊತ್ತು ಸಾಧಿಸಿದಾಗ ಲಕ್ಷ್ಯಗೊಟ್ಟು ಆತನಿಗೆ ಎಲ್ಲ ವಿಚಾರಗಳನ್ನು ಚನ್ನಾಗಿ ತಿಳಿಸಿ

ಹೇಳಿ ಸಮಾಜಸೇವೆಯ ಯೋಗ್ಯ ಮಾರ್ಗಕ್ಕೆ ಹಚ್ಚಬೇಕೆಂದು ಆತನ ಉತ್ಕಟೇಚ್ಛೆಯಿತ್ತು. ಈ ಕಾರ್ಯದಲ್ಲಿ ತನ್ನ ತಂದೆಯವರ ಸಹಾಯವನ್ನು ಪಡೆಯಬಹುದೆಂದು ಆತನು ನಂಬಿದ್ದನು.

ಮಹಾವಿದ್ಯಾಲಯದ ಸೂಟಿಯ ದಿವಸಗಳು ತೀರ ಸಮೀಪಕ್ಕೆ ಬಂದವು ಇನ್ನು ೪-೫ ದಿವಸಗಳಲ್ಲಿಯೇ ವಿದ್ಯಾಲಯಕ್ಕೆ ಸೂಟಿಯಾಗುವದಿತ್ತು, ಆಗ್ಯೆ ಒಂದು ದಿವಸ ಮಾಧವನೂ ವಿದ್ಯಾಧರನೂ ಕೂಡಿ ‘ಬಂಡ’ವನದಕಡೆಗೆ ಹೋದರು.

ದಕ್ಷಿಣ ಮಹಾವಿದ್ಯಾಲಯವು ಪುಣ್ಯಾಪುರದೊಳಗೆ ಇರುವದೆಂದು ಎಲ್ಲರೂ ಅನ್ನುತ್ತಿದ್ದರೂ ನಿಜವಾದ ಸಂಗತಿಯು ಹಾಗಿಲ್ಲ. ದಕ್ಷಿಣ ಮಹಾವಿದ್ಯಾಲಯಕ್ಕೂ ಪುಣ್ಯಾಪುರಕ್ಕೂ ೨-೩ ಮೈಲು ಅಂತರ. ಊರಹವೆಯು ಸ್ವಚ್ಛವಾದದ್ದಲ್ಲವೆಂದೂ ವಿದ್ಯಾಭ್ಯಾಸಕ್ಕೆ ಏಕಾಂತಸ್ಥಾನವು ಒಳ್ಳೇದೆಂದೂ, ಈ ವಿದ್ಯಾಲಯವನ್ನು ಪುಣೆಯ ಉತ್ತರಕ್ಕೆ ಇರುವ ಖಡಕಿ ಎಂಬ ಹಳ್ಳಿಯ ಹತ್ತರ ಒಂದು ಪ್ರಶಸ್ತವಾದ ದಿನ್ನಿಯ ಮೇಲೆ ಕಟ್ಟಿರುವರು ಖಡಕಿಯಲ್ಲಿ ೧೮೧೮ನೇ ಇಸ್ವಿಯಲ್ಲಿ ಪೇಶ್ವೆಯರಿಗೂ ಇಂಗ್ಲೀಷರಿಗೂ ಒಂದು ದೊಡ್ಡ ಕಾಳಗವಾಯಿತೆಂದು ಇತಿಹಾಸಬಲ್ಲ ವಾಚಕರ ನೆನಪಿನಲ್ಲಿರಬಹುದು ಆ ಸಮರಾಂಗಣದ ಹತ್ತರವೇ ನಮ್ಮ ದಕ್ಷಿಣ ಮಹಾವಿದ್ಯಾಲಯವಿರುವದು. ಎತ್ತರದ ಮೇಲೆ ಕಟ್ಟಿದ್ದರಿಂದ ಹವೆಯಂತೂ ಬಹಳೇ ಚನ್ನಾಗಿ ಇರುವದು. ಮುಂಬೈಯ ಕಲುಷಿತ ಹವೆಯ ಸೇವನೆಗಿಂತ ಪುಣ್ಯಾಪುರದ ಹತ್ತರಿದ್ದ ದಕ್ಷಿಣ ವಿದ್ಯಾಲಯದ ಸ್ವಚ್ಛ ವಾತಾವರಣವನ್ನು ವಿದ್ಯಾರ್ಥಿಗಳು ಹೇಗೆ ಬಯಸುತ್ತಿದ್ದರೆಂಬದು ಮುಂಬಾಪುರಸನಾದ ಮಾಧವನ ಸ್ಥಿತಿಯಿಂದ ಕಂಡುಕೊಳ್ಳಬಹುದು.

ದಕ್ಷಿಣ ಮಹಾವಿದ್ಯಾಲಯಸ್ಥರಿಗೆ ಇನ್ನೊಂದು ಆಲ್ಹಾದಕಾರಕ ಸಂಗತಿಯೆಂದರೆ ಮೇಲೆ ಹೇಳಿದ್ದ ಬಂಡವನವು. ಈ ವನವು ವಿದ್ಯಾಲ

ಯುದ ತೀರ ಸಮೀಪದಲ್ಲಿದ್ದದರಿಂದ ಎಲ್ಲ ವಿದ್ಯಾರ್ಥಿಗಳು ಸಂಜೆಯು ಮುಂದೆ ಈವನದ ಕಡೆಗೆ ಹೋಗುವ ಪರಿಪಾಠವನ್ನು ಇಟ್ಟಿದ್ದರು

ಅಕ್ಕತಂಗಿಯರಂತೆ ಮುಳಾಮುಠಾ ನದಿಗಳು ಬಂದನ್ನೊಂದು ತೆಕ್ಕೆಹಾಯ್ದು ಉಲ್ಹಾಸದ ಮಂಜುಲ ಧ್ವನಿಯಿಂದ ಹಾಡುತ್ತ ಬಂಡ ವನದ ಹತ್ತರದಿಂದಲೇ ಹಾಯ್ದು ಹೋಗುತ್ತವೆ. ವನದ ಪಶ್ಚಿಮ ದಂಡೆಯ ಸಮೀಪದಲ್ಲಿ ನದಿಗಳ ಪ್ರವಾಹಕ್ಕೆ ದೊಡ್ಡ ಬಡ್ಡ (Bund) ಹಾಕಿರುವರು ಆದ್ದರಿಂದಲೇ ಈವನಕೆ ‘ಬಂಡ’ವನವೆಂದು ಹೆಸರು ಬಿದ್ದದೆ ತಮ್ಮ ಸಂಗೀತಕ್ಕೆ ಅಡ್ಡಿ ಮಾಡುವದಕ್ಕಾಗಿ ಯಾರೋ ತಮ್ಮ ಹಾದಿಯಲ್ಲಿ ಅಡ್ಡವಾಗಿ ಮಲಗಿರುವರೆಂದು ತಿಳಿದು ಈ ನದಿಗಳು ಹಾಡುತ್ತಲೇ ತುಸು ತೀವ್ರದಿಂದ ನಡೆಯುತ್ತ ಬಂದು ಜಿಗಿದು ಹೋಗುವಂತೆ ಈ ಬಡ್ಡಿನ ಮೇಲಿಂದ ಜಿಗಿದು ತುಷಾರ ರೂಪದಿಂದ ಕಣ್ಣಿಗೆ ಮನೋಹರವಾಗಿ ಕಾಣಿಸುತ್ತವೆ ಸಂಜೆಯ ವೇಳೆಯಲ್ಲಂತೂ ಈ ತುಷಾರದೊಳಗಿಂದ ವಿಶೇಷ ರಮಣೀಯವಾಗಿ ಕಾಣುವ ಕಾಮನಬಿಲ್ಲನ್ನು ನೋಡುವದಕ್ಕಾಗಿಯೋ ಏನೋ ಈ ಬಡ್ಡಿನ ಹತ್ತರ ಜನರು ಬಂದೇಸವನೆ ನೆರೆಯುತ್ತಲೇ ಇರುವರು ಪಾಪ! ನದಿಗಳಿಗೆ ಬಡ್ಡ ಜಿಗಿದು ಹೋಗುವದಕ್ಕಾಗಿ ಎಷ್ಟು ಶ್ರಮ! ಆದರ ಪ್ರೇಕ್ಷಕರು ಮಾತ್ರ ಈ ಅಕ್ಕತಂಗಿಯರ ವಕ್ರಗತಿಯನ್ನು ನಿಂದಿಸಿ ಕುಚೇಷ್ಟೆಯನ್ನು ಮಾಡಿ ನಗುತ್ತ, ಅಲ್ಲಿಯೇ ಇದ್ದ ಪಾವಟಿಗೆಗಳ ಮೇಲೆ ಕುಳಿತುಕೊಳ್ಳುವರು. ಒಬ್ಬರ ಸಂಕಟಕ್ಕೆ ಮತ್ತೊಬ್ಬರ ನಗುವರು! ನೋಡಿದಿರಾ ಸೃಷ್ಟಿನಿಯಮವನ್ನು!!

ಇದೇ ನದಿಯಲ್ಲಿ ಮತ್ತೊಂದು ಕಡೆಗೆ ದಕ್ಷಿಣ ಮಹಾವಿದ್ಯಾಲಯದ ‘ನೌಕಾಲಯ’ವಿರುವದು. ಸಂಜೆಯ ವೇಳೆಯಲ್ಲಿ ಎಷ್ಟೋ ವಿದ್ಯಾರ್ಥಿಗಳು ತಮ್ಮ ನೌಕೆಗಳನ್ನು ತೆಗೆದುಕೊಂಡು ಅತ್ತಿಂದ ಇತ್ತ ಇತ್ತಿಂದ ಅತ್ತ ನೀರಿನಲ್ಲಿ ಓಡಾಡಿಸುತ್ತಿರುವರು. ಇದರಿಂದ ಆ ನೌಕೆ

ಮಾತ್ರ ಏನೂ ಶ್ರಮವಾಗದಂತೆ ತೋರುತ್ತದೆ ವಾಚಕರೇ, ಅತ್ತ ಕಡೆಗೆ ನೋಡಿರಿ! ಒಂದು ನೌಕೆಯು ಮತ್ತೊಂದು ನೌಕೆಯ ಹತ್ತರ ಹೋಗಿ ತಬ್ಬಿ ಆನೆಗಳು ಜಲಕ್ರೀಡೆಯನ್ನು ಮಾಡುವಂತೆ ಹೇಗೆ ಉಲ್ಹಾಸವೃತ್ತಿಯಿಂದ ಜಿಗಿದಾಡುತ್ತಿರುವವು. ಈ ಜಲಕ್ರೀಡೆಯನ್ನು ನೋಡುವದಕ್ಕಾಗಿಯೂ ಎಷ್ಟೋ ಜನರು ನೆರೆದಿರುವರು. ತರುಣರೂ ತರುಣಿಯರೂ ಏನೋ ಹುಡುಕಾಡುತ್ತಿರುವಂತೆ ವನದಲ್ಲಿ ಅತ್ತಿಂದ ಇತ್ತ ಇತ್ತಿಂದ ಅತ್ತ ಓಡಾಡುತ್ತಿರುವರು ಅವರಲ್ಲಿ ಕೆಲವರು ಹುಡುಕುವ ವಸ್ತುವು ಲಭಿಸಿತೆಂದು ಆನಂದದಿಂದ ನಕ್ಕು ತಮ್ಮ ಮಿತ್ರರಿಗೂ ಅದನ್ನು ತೋರಿಸುತ್ತಿರುವರು. ಕೆಲವರು ಅಪಜಯದಿಂದ ಕ್ರೋಧಗೊಂಡು ಒಮ್ಮೆ ನೌಕೆಯನ್ನೂ ಮತ್ತೊಮ್ಮೆ ನೀರಿನ ಹಾರಾಟವನ್ನೂ ನೋಡುತ್ತ ಹೇಗಾದರೂ ಮಾಡಿ ಕಾಲ್ಪನಿಕ ಮನರಂಜನೆಯನ್ನು ಮಾಡಿಕೊಳ್ಳುತ್ತಿರುವರು ವಾಚಕರೇ, ಮತ್ತೊಂದು ಕಡೆಗೆ ನೋಡಿದಿರೇನು? ನೋಡಿರಿ! ಅಲ್ಲಿ ಹೇಗೆ ಸಣ್ಣ ಬಾಲಕರು ವನದೊಳಗೆ ಅಲ್ಲಲ್ಲಿ ಮಾಡಿಟ್ಟದ್ದ ಕಲ್ಲಿನ ಹುಲಿಸಿಂಹಗಳ ಮೇಲೆ ಜಿಗಿಜಿಗಿದು ಕುಳಿತು, ತಮ್ಮ ಅಚಲ ಧೈರ್ಯವನ್ನೂ, ಪರಾಕ್ರಮವನ್ನೂ, ಹುಲಿಯ ಅಪೌರುಷತ್ವವನ್ನೂ ತಮ್ಮ ತಾಯಿಗೆ ಹೇಳಿ ಉರಳಾಡಿ ನಗುತ್ತಿರುವವು ಮತ್ತೆ ಕೆಲ ಬಾಲಕರು ಅಂಜಿಕೆಯಿಲ್ಲದೆ ಹುಲಿಯ ಬಾಯಲ್ಲಿ ತಮ್ಮ ಕೋಮಲವಾದ ಕರಗಳನ್ನು ಹಾಕುತ್ತಿರುವರು, ಸಣ್ಣ ಹುಡುಗರನ್ನು ನೊಯ್ಯಿಸಬಾರದೆಂಬ ವಿಚಾರವನ್ನು ಮಾಡಿಯೋ ಹುಲಿಯು ಸುಮ್ಮನೆ ಕುಳಿತು ಈ ಚೇಷ್ಟೆಗಳನ್ನು ತಡಕೊಳ್ಳುವದು! ಪ್ರತಿದಿನ ಸಂಜೆಯಲ್ಲಿಯೂ ಇದೇ ತರದ ಗೊಂದಲವಾದರೂ ವನವು ದೊಡ್ಡದಿದ್ದದರಿಂದ ವನದಲ್ಲಿ ಏಕಾಂತ ಸ್ಥಳಗಳನ್ನು ಬಹಳವಾಗಿ ಕಾಣಬಹುದಾಗಿದೆ. ಈ ಸ್ಥಳದಲ್ಲಿ ಸಂಜೆಗೆ ಅಪ್ಸರಸಗಳನ್ನು ಕಾಣಬಹುದೆಂದು ಹೇಳುತ್ತಾರೆ. ಯಾರ ಮುಖದ ಮೇಲೆ ಆನಂದವು ಹೊಳೆಯುತ್ತಿದ್ದು, ಮತ್ತೆ ಯಾರ ಮುಖದ ಮೇಲೆ ಗಾಂಭೀರ್ಯವು

ತಲೆದೋರುತ್ತದೆ; ಮತ್ತೆ ಕೆಲವರ ಮುಖಗಳ ಮೇಲೆ ಸುಪ್ರಸನ್ನತೆಯೂ ಕುಣಿಯುತ್ತಿರುವದು. ಕೆಲವರು ಸಿಟ್ಟಿನಿಂದ ಕಾಲು ಅಪ್ಪಳಿಸುತ್ತ ವಸುಂಧರೆಯನ್ನು ಒಳ್ಳೇ ಬಲದಿಂದ ಒದೆದು ಆಕೆಗೆ ಶಾಪವನ್ನೀಯುತ್ತಿರುವಂತೆ ತೋರುತ್ತಿತ್ತು. ಬಾಲಕರ ನಿಸರ್ಗ ಸೌಂದರ್ಯವೂ ಅವರ ಮಂಜುಳ ಕಿಲಕಿಲಾಟವೂ, ಎತ್ತ ನೋಡಿದತ್ತ ಹಬ್ಬಿಕೊಂಡು ಪ್ರೇಕ್ಷಕರಿಗೆ ಆನಂದವನ್ನೀಯುತ್ತಿರುವದು. ಇಂಥ ತಂಪು ಹೊತ್ತಿನಲ್ಲಿ ವಾಸರ-ಮಣಿಯು ಸಹಸ್ರಕರಗಳನ್ನು ಚಾಚಿ ಮುಗುಳು ನಗೆಯಿಂದ ವನದೊಳಗಿನವರನ್ನು ಸಾವಕಾಶವಾಗಿ ಬೆನ್ನ ಮೇಲೆ ಚಪ್ಪರಿಸಿ ಆನಂದದಿಂದ ರಕ್ತವರ್ಣದ ಮುಖಮಾಡಿಕೊಂಡು ವನಸ್ಥ ನಾಗರಿಕರನ್ನು ಹೆಚ್ಚಿಗೆ ಆನಂದಗೊಳಿಸುತ್ತಲೇ ತನ್ನ ಇತಃಪರ ರಾಜ್ಯವನ್ನು ಆಳಲಿಕ್ಕೆ ಅಪ್ಪಣೆಯನ್ನು ಪಡೆಯುತ್ತಿದ್ದನು.

ಇರಲಿ. ಇಂಥ ಮನೋಹರ ಸ್ಥಳದಲ್ಲಿ ಆನಂದರಸವನ್ನು ಸೇವಿಸುವದಕ್ಕೆ ನಮ್ಮ ವಿದ್ಯಾಧರನೂ ಮಾಧವನೂ ಬಂದಿದ್ದರು. ಇಬ್ಬರು ಮಿತ್ರರು ಅತ್ತಿತ್ತ ತಿರುಗಾಡಿ ಕಡೆಗೆ ಮಲ್ಲಿಗೆಯ ಮಂಟಪದೊಳಗೆ ಇಟ್ಟಿದ್ದ ಒಂದು ಬಾಕಿನ ಮೇಲೆ ಕುಳಿತುಕೊಂಡರು. ಇತ್ತ ಕಡೆಗೆ ಯಾವ ತರದ ಗೊಂದಲವು ಇಲ್ಲದ್ದರಿಂದ ಮಂದಮಾರುತನು ಮಲ್ಲಿಗೆಯ ಮಂಟಪದೊಳಗೆ ಬಂದು ಮಂದಮಂದವಾಗಿ ಸುಗಂಧರಸವನ್ನು ಬೀರುತ್ತಿದ್ದನು. ಇಂದು ವಿದ್ಯಾಧರನ ಎಲ್ಲ ವಿಚಾರಗಳನ್ನು ಕೇಳಬೇಕೆಂದು ಮಾಧವನ ಮನಸ್ಸಿನಲ್ಲಿ ಬಂದಿತು. ಆತನು ಅದರಂತೆಯೇ ಮಾತು ಮಾತಾಡುವಾಗ ಅಂದದ್ದು:—

ಮಾಧವ.—ವಿದ್ಯಾಧರಾ, ಇನ್ನು ತುಸು ದಿವಸಗಳಲ್ಲಿಯೇ ಸೂಟಿಯಾಗುವದು. ಆದ್ದರಿಂದ ನೀನು ಎಲ್ಲಿಗೆ ಹೋಗಬೇಕೆಂದು ನಿಶ್ಚಯಿಸಿರುವಿ?

ವಿದ್ಯಾ:—ಸಮಾಜಸೇವೆಯ ಕಾರ್ಯವನ್ನು ಮಾಡಲು ನಿಶ್ಚಯಿಸಿದ್ದೇನೆ. ಆದ್ದರಿಂದ ಎಲ್ಲಕಡೆಯಲ್ಲಿಯೂ ತಿರುಗಾಡಿ ಅದಕ್ಕಾಗಿ ಯತ್ನಿಸುವೆನು.

ಮಾಧ:—ಹೌದು! ಒಳ್ಳೇ ನೆನಪಾಯಿತು!! ವಾರ್ಷಿಕ ಸಭೆಯ ದಿವಸದಿಂದ ಒಮ್ಮೆ ವಿವಾಹದ ವಿಷಯಕ್ಕೆ ನಿನ್ನ ಎಲ್ಲ ವಿಚಾರಗಳನ್ನು ತಿಳಿದುಕೊಳ್ಳಬೇಕೆಂದು ನನಗೆ ಕುತೂಹಲವುಂಟಾಗಿರುವದು. ದಯಮಾಡಿ ಹೇಳಿದರೆ ನೆಟ್ಟಗಾಗುವದು. ಒಬ್ಬರ ವಿಚಾರಗಳನ್ನು ಮತ್ತೊಬ್ಬರಿಗೆ ಹೇಳಿ ಯೋಗ್ಯ ಮಾರ್ಗದಿಂದಲೇ ನಡೆಯಲಿಕ್ಕೆ ಒಳ್ಳೇದಾಗುವದು. ಹೇಳು ನೋಡುವಾ! ಒಮ್ಮೆ ನಿನ್ನ ಎಲ್ಲ ವಿಚಾರಗಳನ್ನು!

ವಿದ್ಯಾ:—ವಿಚಾರವೆಂಥದು! ಈ ಕಷ್ಟಮಯ ಸಂಸಾರಯಾತ್ರೆಯು ಒಮ್ಮೆ ಹತ್ತಿತೆಂದರೆ ಯಾವ ಯಾವ ಸಂಕಟಗಳು ಬರಬಹುದೆಂಬ ಕಲ್ಪನೆಯೇ ನನಗೆ ಅಸಹ್ಯವಾಗಿರುವದು ಒಮ್ಮೆ ಪ್ರಪಂಚದಲ್ಲಿ ಬಿದ್ದೆವೆಂದರೆ ನಮ್ಮ ಸಮಾಜಕ್ಕೂ, ನಮ್ಮ ದೇಶಕ್ಕೂ ಏನೂ ಸಹಾಯಮಾಡಲಿಕ್ಕಾಗುವದಿಲ್ಲ ಹೆಂಡಿರುಮಕ್ಕಳಿಗೆ ಅನ್ನವನ್ನು ತಂದುಹಾಕುವದರಲ್ಲಿಯೇ ಆಯುಷ್ಯವು ಕ್ಷೀಣವಾಗಬಹುದು; ಆದ್ದರಿಂದಲೇ ನಾನು ವಿವಾಹವನ್ನು ಮಾಡಿಕೊಳ್ಳದೆ ಅಜನ್ಮ ಬ್ರಹ್ಮಚಾರಿವ್ರತದಿಂದಲೇ ಇದ್ದು ಶಕ್ತಿಯಿರುವವರೆಗೆ ಆನಂದದಿಂದಲೂ ಉತ್ಸಾಹದಿಂದಲೂ ಸಮಾಜಸೇವೆಯನ್ನೂ ದೇಶಸೇವೆಯನ್ನೂ ಮಾಡದೆ ಒಂದು ಕ್ಷಣವನ್ನು ಸಹ ವೆಚ್ಚಮಾಡಬಾರದೆಂದು ನಿಶ್ಚಯಿಸಿದ್ದೇನೆ. ಅದರಂತೆ ಮೊನ್ನೆ ಪ್ರತಿಜ್ಞೆಯನ್ನು ಮಾಡುವ ಸುದಿನವು ಬಂದಿರಲು ನೀನು ನಡುವೆ ಯಾಕೆ ಪ್ರತಿಬಂಧಿಸಿದಿಯೋ ಯಾರಿಗೆ ಗೊತ್ತು! ಆದರೂ ನಿನ್ನ ವಿಚಾರಗಳೇನೋ ಬೇರೆ ಇರಬಹುದೆಂದು ನಂಬಿ ಅಂಥ ಮಾನಹಾನಿಯನ್ನು ಸಹ ಸಹಿಸಿದೆನು.

ಮಾ:—ನಿನ್ನ ಅವ್ಯಾಜ ಪ್ರೀತಿಗಾಗಿ ನಾನು ನಿನಗೆ ತುಂಬಾ ಖುಣಿಯಾಗಿದ್ದೇನೆ. ಆದರೆ ವಿವಾಹವೆಂದರೇನೋ ನಿನಗೆ ಚನ್ನಾಗಿ ತಿಳಿದಂತೆ ತೋರುವದಿಲ್ಲ. ಎಲ್ಲಿಯಾದರೂ ಒಬ್ಬ ದುಷ್ಟಸ್ತ್ರೀಯನ್ನು ನೋಡಿರಬಹುದು, ಅದವಾ ಎಲ್ಲಿಯಾದರೂ ಅಂಥವಳ ಇತಿಹಾಸ ವನ್ನು ಓದಿರಬಹುದು, ಇಷ್ಟರಿಂದಲೇ ಜಗತ್ತಿನೊಳಗಿನ ಎಲ್ಲ ಸ್ತ್ರೀಯರೂ ಹಾಗೆ ಇದ್ದು ತಮ್ಮ ಗಂಡಂದಿರಿಗೆ ಸುಖಕೊಡದೆ ಅವರ ಕರ್ತವ್ಯದಲ್ಲಿ ಅಡ್ಡಬರುವರೆಂದು ಮಾತ್ರ ನೀನು ತಿಳಕೊಂಡಿರ ಬಹುದು. ವಿವಾಹವೆಂದರೆ ಸಮಾಜಸೇವೆಯ ಕಾರ್ಯದಲ್ಲಿ ವಿಘ್ನ ವಲ್ಲ. ನಮ್ಮ ಮುಂದಿನ ಆಯುಷ್ಕ್ರಮದಲ್ಲಿಯ ಮಹತ್ವಾಕಾಂಕ್ಷೆಗ ಳನ್ನೂ ನಮ್ಮ ದೇಶಕ್ಕಾಗಿ ನಾವು ಮಾಡುವ ಕರ್ತವ್ಯಕರ್ಮಗಳನ್ನೂ ಜರುಗಿಸಿಕೊಳ್ಳುವದಕ್ಕೆ ಪ್ರತಿಬಂಧಮಾಡದೆ ನಮ್ಮ ಕಾರ್ಯದಲ್ಲಿ ಪೂರ್ಣ ಸಹಾಯಕಳಾಗುವಂಥ ಒಬ್ಬ ಸ್ತ್ರೀಯನ್ನು ಧರ್ಮವಿಧಿಯಿಂದ ಗ್ರಹಿಸುವದಕ್ಕೆ ವಿವಾಹವೆಂದೆನ್ನುವರು. ವಿವಾಹವಾದ ಮೇಲೆ ಹೆಂಡ ತಿಯ ಸಹಾಯದಿಂದ ಇಮ್ಮಡಿ ಬಲಬಂದಂತಾಗಿ ನಮ್ಮ ಕಾರ್ಯದಲ್ಲಿ ಯಶಸ್ಸು ದೊರೆಯುವದು ನಿಶ್ಚಯವೇ ಗಂಡಹೆಂಡಂದಿರ ಶರೀರಗಳು ಎರಡು ಇದ್ದರೂ ಅವರ ಅಂತಃಕರಣವು ಒಂದೇ. ಗಂಡನ ಉನ್ನ ತಿಯೇ ಹೆಂಡತಿಯ ಉನ್ನತಿಯು, ಅವನ ಸುಖವೇ ಆಕೆಯ ಸುಖವು, ಅವನ ಕೀರ್ತಿಯೇ ಆಕೆಯ ಕೀರ್ತಿಯು. ಇದನ್ನೆಲ್ಲ ಬಿಟ್ಟು ವಿವಾಹ ದಿಂದ ಸಮಾಜಸೇವೆಗೆ ವಿಘ್ನವಾಗಬಹುದೆಂಬ ನಿನ್ನ ವಿಚಾರವು, ಹೆಂಡತಿಯೆಂದರೆ ಸಂತತಿಯನ್ನು ಹೆಚ್ಚಿಸುವ ಒಂದು ಜೀವಂತ ಯಂತ್ರವೆಂದು ತಿಳಿದು, ಅವಳನ್ನು ಅದೇ ರೀತಿಯಿಂದ ವಿದ್ಯೆ ಕಲಿಸದೆ ಸತತ ಅಜ್ಞಾನದಲ್ಲಿಟ್ಟು ಆಕೆಯ ಯಾವತರದ ಉನ್ನತಿಗೂ ಯತ್ನಿಸ ಬಾರದೆಂದು ಅನ್ನುವ ಮೂರ್ಖರ ವಿಚಾರದಷ್ಟು ಹಾಸ್ಯಾಸ್ಪದವಾಗಿ ರುವದು. ಜೀವದಿಂದ, ಧರ್ಮದಿಂದ ಯಾರು ಬದ್ಧರಾಗುವರೋ, ಕರ್ತವ್ಯದಲ್ಲಿ ನಮಗೆ ಯಾರು ಅನಂತ ಸಹಾಯವನ್ನು ಮಾಡುವ

ರೋ, ನಮಗೆ ಉದಾಸೀನತೆ ಬಂದಾಗ ಬೇನೆಬಂದಾಗ ಏಕಜೀವತ್ವದಿಂದ ಶುಸ್ರೂಷೆಯನ್ನು ಮಾಡಿ, ನಾವು ಆನಂದದಿಂದಿದ್ದಾಗ್ಗೆ ತಮ್ಮ ಸ್ವರ್ಗೀಯಪ್ರೇಮದಿಂದ ಸ್ವರ್ಗವು ಇನ್ನು ಎರಡೇ ಬೊಟ್ಟು ಉಳಿದಿರುವದೆಂದು ತಿಳಿಯಲು ಯಾರು ಆಸ್ಪದವನ್ನೀಯುವರೋ, ಅವರಿಗೆ ನಮ್ಮ ಕಾರ್ಯದಲ್ಲಿ ವಿಘ್ನವೆಂದು ತಿಳಿದುಕೊಳ್ಳುವದೆಂದರೆ ಎಷ್ಟು ಮೂರ್ಖತನದ ವಿಚಾರವಿರುವದೆಂದು ನೀನೆ ತಿಳಿದುನೋಡು ಪ್ರಜೋತ್ಪಾದನವು ವಿಹಾಹದ ಮುಖ್ಯ ಕಾರಣವಲ್ಲ ಈ ಜಗತ್ತಿನಲ್ಲಿ ಯಾವಾಗಲೂ ನಮ್ಮಲ್ಲಿ ಐಕ್ಯಹೊಂದಿ ತನಮನದಿಂದಲೂ ನಮ್ಮನ್ನು ಹಿಂಬಾಲಿಸಿ ನಮ್ಮ ಅಂಗೀಕೃತಕಾರ್ಯಕ್ಕೆ ಸಹಾಯಮಾಡುವವಳೇ ಹೆಂಡತಿಯು ಸ್ವರ್ಗೀಯಪ್ರೇಮದಿಂದ ಯಾವ ಎರಡು ಅಂತಃಕರಣಗಳು ಒಂದರೊಂದಲ್ಲಿ ಲೀನವಾಗಿ ಹೋಗುವವೋ, ಆಯುಷ್ಯವೆಂದರೆ ಸುಖೋಪಭೋಗದ ಸಾಧನವಿರದೆ ಯಾವದೋ ಒಂದು ಉಚ್ಚತಮ ಧ್ಯೇಯಪ್ರಾಪ್ತಿಗಾಗಿ ಕೊಟ್ಟದ್ದ ಅಮೌಲ್ಯ ವೇಳೆಯೆಂದು ಯಾರ ನಿಷ್ಠೆಯೋ ಇಂಥ ಎರಡು ಅಂತಃಕರಣಗಳು ಒಂದೇ ಸ್ಥಳದಲ್ಲಿ ಬಂದದರಿಂದ ಒಂದಕ್ಕೊಂದು ಆಕರ್ಷಿಸಲ್ಪಟ್ಟ ಎರಡೂ ಸಂಲಗ್ನವಾದ ಮೇಲೆ ಧರ್ಮಾನುಸಾರವಿಧಿಯಿಂದ ಬಂಧನೆಯೇ ವಿವಾಹವು. ಹೀಗಿದ್ದರೆ ನಿನಗೆ ವಿಘ್ನವೆಲ್ಲಿ? ಅಶ್ವಪತಿಯ ಮಗಳು ಈ ತರದ ಎರಡನೇದೊಂದು ಪ್ರಾಣವನ್ನು ತಾನೇ ಹುಡುಕಿತೆಗೆದು ಕ್ಷೀಣಾಯುಷಿಯೆಂದು ನಾರದಮಹರ್ಷಿಗಳು ಹೇಳಿದರೂ, ತಾಯಿತಂದೆಗಳು ಹಾಗೆ ಮಾಡಬೇಡೆಂದು ತಡೆಯುತ್ತಿರಲೂ, ತನ್ನ ಪ್ರೇಮಬಲದಿಂದ ತಾನು ಬೇಕಾದದ್ದು ಮಾಡಬಹುದೆಂದು ನಂಬಿ, ಅದವಾ ಈ ತರದ ಉತ್ಕಟಪ್ರೇಮವನ್ನು ಒಂದು ವರ್ಷದವರೆಗೆ ಸೇವಿಸುವದೇ ಲೇಸೆಂದು ಹೇಳಿ ದ್ಯುಮತ್ಸೇನ ಮಹಾರಾಜನ ಮಗನಾದ ಸತ್ಯವಾನನನ್ನು ಮದುವೆಯಾಗಲಿಲ್ಲವೇ? ಮುಂದೆ ಆಕೆಯು ಪತಿಯಲ್ಲಿದ್ದ ತನ್ನ ಉತ್ಕಟಪ್ರೇಮಬಲದಿಂದ ತನ್ನ ತಂದೆಮಾವಂದರಿಗೆ ಸಂತತಿಸುಖೈಶ್ವರ್ಯವನ್ನೂ, ಪ್ರತ್ಯಕ್ಷ ತನ್ನ

ಪತಿಗೆ ಪ್ರಾಣದಾನವನ್ನೂ ದೊರಕಿಸಿಕೊಂಡು ಎಲ್ಲರನ್ನು ಸುಖಿಯಾಗ ಮಾಡಲಿಲ್ಲವೇ? ಮೇಲಾಗಿ ಸುಶಿಕ್ಷಿತ ಗಂಡಹೆಂಡಂದಿರಿಂದ ಒಳ್ಳೇ ಸಂತತಿಯಾಗಿ ಸಮಾಜಸುಧಾರಣೆಯು ತೀವ್ರವೇ ಆಗಲಿಕ್ಕೆ ಆಸ್ಪದವು ದೊರೆಯುವದು, ಇಲ್ಲದಿದ್ದರೆ ಮುಂದಿನ ಸಂತತಿಯು ದುರ್ಬಲ ವಿಲ್ಲವೆ ದುಷ್ಟವಾದರೆ ನೀನೇ ಏಕೆ, ನಿನ್ನಂದ ಸಾವಿರಾರು ಜನರು ಬ್ರಹ್ಮಚಾರಿವ್ರತದಿಂದ ಇದ್ದು ಸಮಾಜೋನ್ನತಿಗಾಗಿಯೇ ಏಳು ಜನ್ಮ ತೆಗೆದುಕೊಂಡರೂ ಅದು ಇನ್ನೂ ಅಪೂರ್ಣವೇ ಉಳಿದೀತು; ಸುಶಿ ಕ್ಷಿತ ಜನರು ವಿವಾಹಮಾಡಿಕೊಂಡರೆ ಸಮಾಜದಲ್ಲಿಯ ಮತ್ತೊಂದು ಜೀವದ ಉನ್ನತಿಯಾಗಿ ಅವರಿಂದ ಹುಟ್ಟಿದ ಸಂತತಿಯೂ ಸಮಾಜಕ್ಕೆ ಭೂಷಣಾಸ್ಪದವಾದೀತು. ಹೆಂಗಸರಲ್ಲಿ ನಿನ್ನಷ್ಟೇ ಅಲೌಕಿಕಶಕ್ತಿಯೂ ಬುದ್ಧಿಸಾಮರ್ಥ್ಯವೂ ಇರುವದು. ನಿನ್ನನ್ನು ಶಾಲೆಗೆ ಹಾಕಿ ವಿದ್ಯೆ ಕಲಿ ಸದಿದ್ದರೆ ನೀನು 'ಮನುಷ್ಯರೂಪಿಮೃಗವಾಗಿ' ಹೇಗೆ ಚರಿಸುತ್ತಿದ್ದಿಯೋ ಹಾಗೆಯೇ ಹೆಂಗಸರನ್ನು ವಿದ್ಯೆಕಲಿಸಿ ಸುಶಿಕ್ಷಿತರನ್ನಾಗಿ ಮಾಡಿ ಅವರ ಕಡೆಯಿಂದ ಸಮಾಜಕ್ಕೆ ಆಗತಕ್ಕ ಸಹಾಯಗಳನ್ನು ಮಾಡಿಸದಿದ್ದರೆ ಸಮಾಜರೂಪಿ ರಥಕ್ಕೆ ಎರಡನೇ ಗಾಲಿಯಂತಿದ್ದ ಸ್ತ್ರೀಯು ನಿರುಪ ಯೋಗಿಯಾಗಿ ಮೊದಲನೇ ಗಾಲಿಯೂ ಕೂಡ ನಿರುಪಯೋಗವಾಗು ವದು. 'ಹೆಂಗಸರೆಂದರೆ ಮೊಣಕಾಲಿಗಿಂತ ಕಡೆ' ಎಂದು ಹೇಳಿ ಅವರಿಗೆ ನಿಮ್ಮ ಅಂತಃಕರಣದಲ್ಲಿ ಸ್ಥಳಕೊಡದಿದ್ದರೆ ಎಲ್ಲವೂ ಹೇಗೆ ನಿಲ್ಲುವದೆಂದು ನಿನಗೆ ಈಗಾದರೂ ತಿಳಿಯಿತೇ?

ಮಾಧವನು ಹೀಗಂದು ಸುಮ್ಮನಾದನು, ಅತ್ತ ವಿದ್ಯಾಧರನು ಕಲ್ಲುಗೊಂಬೆಯಂತೆ ಇದನ್ನೆಲ್ಲ ಕೇಳುತ್ತ ಆಶ್ಚರ್ಯಚಕಿತನಾಗಿ ಕುಳಿ ತಿದ್ದನು. ಮಾಧವನ ಈ ತರದ ವಿಚಾರಕ್ಕಾಗಿ ಆತನು ಧನ್ಯನೆಂದು ಅನ್ನಹತ್ತಿದನು. ಎಲ್ಲವೂ ಆತನಿಗೆ ಸರಿಯಾಗಿ ತೋರಿತು. ಇಷ್ಟು ದಿವ ಸಗಳವರೆಗೆ ಆತನಲ್ಲಿದ್ದ ವಿಚಾರಗಳೆಲ್ಲ ಹೋಗಿ ಹೊಸ ಚೇತನ

ಬಂದಂತಾಗಿ ತಾನು ಈಗ ಹೊಸ ಜಗತ್ತಿನಲ್ಲಿ ಕುಳಿತಂತೆಯೂ ತೋರಿತು; ಅಷ್ಟರಲ್ಲಿ ಪುನಃ

ಮಾಧವ:—ಯಾಕೆ ವಿದ್ಯಾಧರಾ, ನನ್ನ ವಿಚಾರಗಳು ನಿನಗೆ ಹೇಗೆ ತೋರುತ್ತವೆ? ಸುಮ್ಮನೆ ಆಜನ್ಮ ಬ್ರಹ್ಮಚಾರಿಯೆಂದು ಪ್ರತಿಜ್ಞೆ ಮಾಡಲಿಕ್ಕೆ ಸಿದ್ಧನಾದ ನಿನಗೆ ಈ ರಹಸ್ಯವೆಲ್ಲ ಏನು ಗೊತ್ತು? ವಿವಾಹವನ್ನು ಮಾಡಿಕೊಂಡು ಪತ್ನಿಯ ಸಹಾಯದಿಂದ ಸಮಾಜದ ಏಳ್ಗೆಗಾಗಿ ಬೇಕಾದಷ್ಟು ಯತ್ನಿಸು. ನಿನಗೆ ಯಾರೂ ಬೇಡನ್ನಲಾರರು. ವಿದ್ಯಾಧರನು ಏನೋ ಮಾತಾಡಬೇಕೆಂದು ಯತ್ನಿಸಿದನು

ಮಾಧ—ಮಾತಾಡು ಹೀಗೆ ಮುಗ್ಧನಂತೇಕೆ ಕುಳಿತಿರುವೆ?

ವಿದ್ಯಾ—ನಿನ್ನ ಮಾತನ್ನು ಕೇಳಿ ನನಗೆ ನಿಜವಾಗಿ ಪುನಶ್ಚ ಜೀವವು ಬಂದಂತಾಗಿರುವದು ನಿಜಕರ್ಮವನ್ನು ತಿಳಿಯದೆ ಅರ್ಜುನನು ಶಸ್ತ್ರಾಸ್ತ್ರಗಳನ್ನು ತೊರೆದು ನಿಂತಿರಲು ಕರ್ಮಯೋಗವಾತವನ್ನು ಶ್ರೀಕೃಷ್ಣನು ಆತನಿಗೆ ತಿಳಿಸಿ ಹೇಳಿದಂತೆ ನೀನು ಇಂದು ನನಗೆ ನಿಜ ಮಾರ್ಗವನ್ನು ಹೇಳಿಕೊಟ್ಟಿರುವಿ. ನಾನು ಜನ್ಮಜನ್ಮಾಂತರದಲ್ಲಿಯೂ ನಿನ್ನ ಈ ಉಪಕಾರವನ್ನು ಮರೆಯಲಿಕ್ಕಿಲ್ಲ

ಮಾಧ:— ಇದೆಲ್ಲ ಒತ್ತಟ್ಟಿಗಿರಲಿ! ಸೂಟಿಯಾದಕೂಡಲೆ ದೀಪಾವಳಿಯ ಹಬ್ಬವಿದ್ದದರಿಂದ ಈಸಾರೆ ನೀನು ನಮ್ಮ ಊರಿಗೆ ಬರಲಿಕ್ಕೇ ಬೇಕು. ತಂದೆಯವರೂ ಮಾತಾಜಿಯವರೂ ನಿನ್ನನ್ನು ಮತ್ತೆ ನೋಡಬೇಕೆಂದು ಇಚ್ಛಿಸುತ್ತಿರುವರೆಂಬ ಸಂಗತಿಯು ಅವರ ಪತ್ರದಿಂದ ಗೊತ್ತಾಗುವದು ಮೇಲಾಗಿ ಸರಸ್ವತಿಯು ಈಸಾರೆ ಬರುವಾಗ್ಗ ನಿನ್ನನ್ನು ಕರೆದುಕೊಂಡು ಬಾ ಎಂದು ಹೇಳಿರುವಳು ಇಷ್ಟೆಲ್ಲ ಜನರ ಆಶೆಯನ್ನು ಭಂಗಮಾಡುವದು ಯೋಗ್ಯವಲ್ಲ.

ಸರಸ್ವತಿಯ ನೆನಪು ತೆಗೆದ ಕೂಡಲೆ ವಿದ್ಯಾಧರನ ಮುಖದ ಮೇಲೆ ಆನಂದಲಹರಿಯು ಬಂದಂತಾಗಿ ಮುಗುಳುನಗೆಯಿಂದ ನಗುತ್ತ

ತಲೆಯನ್ನು ಅಲ್ಲಾಡಿಸಿ ತುಸು ಅನುಮತಿಯನ್ನಿತ್ತಂತೆ ಮಾಡಿದನು. ತೀರ ಸಂಜೆಯಾಯಿತೆಂದು ತಿಳಿದು ಇಬ್ಬರೂ ವಿದ್ಯಾಲಯದಲ್ಲಿಯ ತಮ್ಮ ಕೋಣೆಗೆ ಹೊರಟುಹೋದರು. ವಿದ್ಯಾಧರನು ಯಾವದೋ ಒಂದು ಮನೋರಾಜ್ಯದಲ್ಲಿ ಈಸಾಡುತ್ತಿದ್ದನು

ಚತುರ್ಥ ಪರಿಚ್ಛೇದ.

ದಿವಾಕರಪಂತರು.

"ಜಗತ್ತಿನಲ್ಲಿ ಸರ್ವಸುಖಿಯಾಗಿದ್ದ ಪ್ರಾಣಿಯು ಒಬ್ಬನೂ ಇಲ್ಲ!" ಹೌದು! ಈ ಮಹಾತ್ಮರ ಅನುಭವದ ಶಬ್ದಗಳು ಅಕ್ಷರಶಃ ನಿಜವಿರುವವೆಂದು ನಾವೆಲ್ಲರೂ ಮನಗಾಣಬಹುದು ಒಬ್ಬ ಮನುಷ್ಯನು ಇಂದು ತೀರ ಸುಖದಿಂದ ಇದ್ದರೆ ನಾಳೆ ಆತನಿಗೆ ಸಂಕಟಪರಂಪರೆಯು ಬೆನ್ನುಹತ್ತಿ ಈ ಜಗತ್ತೇ ಆತನಿಗೆ ಬೇಡಾಗಿಹೋಗುತ್ತದೆ ಈಶ್ವರೀನಿಯಮವೇ ಅಂತಹದಿರುವದು! ವಸುಂಧರೆಯು ದಿನಕರನ ಸಂಜೆಯ ಹೊತ್ತಿನ ಸುವರ್ಣಮಯ ಬೆಳಕಿನಲ್ಲಿ ಆನಂದದಿಂದ ಕುಣಿದಾಡುತ್ತಿರಲು ಬರಬರುತ್ತ ಆಕೆಯ ಈ ಆನಂದಕ್ಕೆ ಕಾರಣೀಭೂತನಾಗಿದ್ದ ದಿನಕರಮಣಿಯನ್ನು ನಿಶಾರಾಕ್ಷಸಿಯು ತನ್ನ ಬಾಯಲ್ಲಿ ಹಾಕಿಕೊಂಡು ತನ್ನ ಭೀಷಣಕೃತ್ಯಕ್ಕಾಗಿ ಕತ್ತಲೆಯ ಪಾಶದಿಂದ (ಪಾಪ!) ವಸುಂಧರೆಯನ್ನು ಮೂರ್ಛಿತಳಾಗಿ ಮಾಡುತ್ತಾಳೆ ನಮ್ಮ ವಸುಂಧರೆಯು ಆಕೆಯ ಈ ಪ್ರಹಾರದಿಂದ ಮೃತವತ್ತ ಆಗತಕ್ಕವಳೇ ಆದರೆ ಇಷ್ಟರಲ್ಲಿ, ದುರ್ಜನರ ದಂಡನೆಗಾಗಿ ಸುಜನರು ಹಾತೊರೆಯುವಂತೆ ವಸುಂಧರೆಯ ಸಹಾಯಕ್ಕಾಗಿಯೋ ರಜನೀನಾಥನು ನಕ್ಷತ್ರಗಣಸಹಿತವಾಗಿ ನಭೋಮಂಡ

ಲದಲ್ಲಿ ಕಾಣಿಸಿ, ಇನ್ನು ನಿನ್ನನ್ನು ಸಂರಕ್ಷಿಸುತ್ತೇನೆ, ಅಂಜಬೇಡ, ಎಂದು ಹೇಳುವದಕ್ಕಾಗಿಯೋ ಏನೋ, ಹುಡುಕುತ್ತ ತುಸುವೇಳೆಯ ನಂತರ ಬಂದು ಆಕೆಯ ಮೂರ್ಛೆತೆಯನ್ನು ಹೋಗಲಾಡಿಸುವದಕ್ಕಾಗಿ ಯತ್ನಿಸುವನು ಪಾಪ! ಆತನಲ್ಲಿ ಎಲ್ಲಿ ಇಷ್ಟು ಶೌರ್ಯ! ಮೇಲಾಗಿ ಶತ್ರುವಾದರೂ ಎಂಥ ಗೊಡ್ಡವಳು! ಆತನಿಗೆ ಇದರಲ್ಲಿ ಯಶಪ್ರಾಪ್ತಿಯಾಗದೆ ವಸುಂಧರೆಯನ್ನು ಕಾಯುತ್ತ ಕೂಡುವನು. ಮುಂದೆ ಕೆಲವು ವೇಳೆಯನಂತರ ಹನುಮಂತನು ರಾಕ್ಷಸಿಯ ಹೊಟ್ಟೆಯನ್ನು ಒಡೆದು ಹೊರಗೆ ಬಂದಂತೆ ನಿಶೆಯ ಹೊಟ್ಟೆಯನ್ನು ಒಡೆದು ವಸುಂಧರೆಯನ್ನು ಸಂತೋಷಿಸುವದಕ್ಕಾಗಿ ಮತ್ತೆ ದಿನಕರನು ತೀವ್ರದಿಂದ ಓಡಿಬರುವನು, ಹೀಗೆ ಎಷ್ಟೋ ದಿವಸಗಳವರೆಗೆ ನಡದೇ ಇರುವದು. ಆಕೆಗೆ ಪೂರ್ಣ ಆನಂದವೂ ಇಲ್ಲ ಇತ್ತ ಪೂರ್ಣ ಸಂಕಟವೂ ಇಲ್ಲ ಕೆಲವು ವೇಳೆ ಅದನ್ನು, ಮತ್ತೆ ಕೆಲವು ವೇಳೆ ಎರಡನೇದನ್ನು ಅನುಭವಿಸುತ್ತ ಕಾಲಕ್ರಮವನ್ನು ಮಾಡುತ್ತಿರುವಳು.

ಕಾಮಿನಿಯರಾದ ಸ್ತ್ರೀಯರ ಸ್ಥಿತಿಯೂ ಇದೇ. ತಮ್ಮ ಪ್ರಾಣವಲ್ಲಭರ ಬೋಧಾಮೃತವನ್ನು ಸೇವಿಸುತ್ತ ಆನಂದದಿಂದ ಇರುತ್ತಿರಲು "ಕೃತಕಾರ್ಯಗಳಿಗೆ ಎಚ್ಚರಾಗಿರಿ, ಇನ್ನು ಪತ್ನಿಯರನ್ನು ಬಿಟ್ಟು ಏಳಿರಿ" ಎಂದು ಕೂಗಿ ದಿನಕರನ ದೂತರಾದ ಕೋಗಿಲೆ, ಕೋಳಿ ಮುಂತಾದವರು ಎಬ್ಬಿಸುತ್ತಿರಲು ಅದಕ್ಕೆ ಕೂಡ ನಾಚದೆ, ದಿನಕರಮಣಿಯು ತನ್ನ ಪ್ರಖರವಾದ ಹಸ್ತಗಳನ್ನು ಕಿಡಿಕೆಯೊಳಗಿಂದ ಚಾಚಿ ಹಾಸಿಗೆಗಳ ಮೇಲಿಂದ ಕಿತ್ತಿ ಹಾಕುತ್ತಿರಲು ಅವರಿಗೆಲ್ಲ ಎಷ್ಟು ದುಃಖ!! ಆದರೆ ಮತ್ತೆ ಆನಂದದ ವೇಳೆ ತೀವ್ರ ಬರಬಹುದೆಂದು ನಂಬಿ ಎದ್ದು ತಮ್ಮ ಗೃಹಕೃತ್ಯಕ್ಕೆ ತೊಡಗುವರು.

ಕಮಲಿನಿಯಳಿಗೆ ಚಂದ್ರನನ್ನು ನೋಡಿದ ಕೂಡಲೆ ಎಷ್ಟು ಆನಂದ! ಆದರೆ ಇದೆಲ್ಲ ಕೆಲಹೊತ್ತಿನವರೆಗೆ ಮಾತ್ರ!!!

ನಮ್ಮ ಸುಹೃದಯ ವಾಚಕರಿಗೆ ಇಂದು ಇಂಥದೊಂದು ಹೃದಯದ್ರಾವಕ ಉದಾಹರಣೆಯನ್ನು ತೋರಿಸುವದಕ್ಕಾಗಿಯೇ ಅವರನ್ನು ಇಷ್ಟು ದೂರದವರೆಗೆ ಪುಣ್ಯಪುರದಿಂದ ನೂರಾರು ಹರದಾರಿಗಳವರೆಗೆ ಪ್ರವಾಸಶ್ರಮವನ್ನು ಅನುಭವಿಸಲು ಹಚ್ಚಿ ದಿವಾಕರಪಂತರಕಡೆಗೆ ಒಯ್ಯುತ್ತಿರುವೆವು. ಪುಣ್ಯಪುರದಿಂದ ದಕ್ಷಿಣಕ್ಕೆ ಧಾರವಾಡ ಹುಬ್ಬಳ್ಳಿಯ ಕಡೆಗೆ ದಕ್ಷಿಣ ಮಹಾರಾಷ್ಟ್ರ ರೇಲ್ವೆ ಕಂಪನಿಯವರದೊಂದು ರೇಲುಮಾರ್ಗವು ಹೋಗುವದು. ನಮ್ಮ ದಿವಾಕರಪಂತರ ಊರಿಗೆ ಹೋಗಬೇಕಾದರೆ ಇತ್ತಕಡೆಗೆ ಹೊರಡಬೇಕಾಗುವದು. ೧೪-೧೫ ತಾಸುಗಳವರೆಗೆ ಬೇಸರಿಕೆಯಿಂದ ವ್ಯಥೆಗೊಂಡು ಬಂಡಿಯಿಂದ ಯಾವಾಗ್ಗೆ ಇಳಿಯುವೆನೋ ಎಂದು ಅನಿಸಹತ್ತಲು 'ರಾಯಬಾಗ' ಎಂಬ ದೊಡ್ಡ ಸ್ಟೇಶನದಲ್ಲಿ ಬಂಡಿಯು ಬಂದು ನಿಲ್ಲುವದು ಹೆಸರಿನಂತೆ ರಾಯಬಾಗ ಸ್ಟೇಶನದ ಹತ್ತಿರಿರುವ ಎಲ್ಲ ಪ್ರದೇಶವು ಎತ್ತ ನೋಡಿದತ್ತ ಪುಷ್ಪಯುಕ್ತವಾದ ಗಿಡಗಳಿಂದಲೂ, ದೊಡ್ಡ ದೊಡ್ಡ ಮರಗಳಿಂದಲೂ, ಬುಡದಲ್ಲೆಲ್ಲ ಎಳೆ ಹಸರು ಹುಲ್ಲಿನಿಂದ ಶೋಭಿತವಾಗಿ ನೋಡಿದವರಿಗೆ ಆನಂದವನ್ನೀಯುತ್ತಿತ್ತು, ಎಲ್ಲರ ಮನಗಳು ಆಗಲೇ ಆಕರ್ಷಿಸಲ್ಪಡುತ್ತಿದ್ದವು ಶಿವಾಜಿ ರಾಯನ ವಂಶಸ್ಥರಾದ ಕೊಲ್ಹಾಪುರದ ಈಗಿನ ಮಹಾರಾಜರು ಒಂದುಬದಿಗೆ ಬಹಳ ದೂರದವರೆಗೆ ಕಬ್ಬಿಣ ಸಲಾಕಿಗಳನ್ನು ಹಾಕಿ ಒಳಗೆಲ್ಲ ತರತರದ ಮೃಗಗಳನ್ನೂ ಪಶುಗಳನ್ನೂ ಬಿಟ್ಟಿದ್ದರಿಂದ ಬಂಡಿಯೊಳಗಿಂದ ಹೊರಗೆ ಮುಖವನ್ನು ಹಾಕಲು ಕುದುರೆಯ ಚೆಲ್ಲಾಟ, ನಾಯಿಯ ಬೊಗಳಾಟ, ನವಿಲುಗಳ ಕುಣಿದಾಟ ಇವೇ ಮುಂತಾದ ನೋಟಗಳು ಕಣ್ಣಿಗೆ ಮನೋಹರವಾಗಿ ತೋರಿ ರಾಯಬಾಗವೆಂಬ ಹೆಸರನ್ನು ಸಾರ್ಥಕ ಮಾಡುವದಕ್ಕಾಗಿಯೇ ಎನೋ ಈ ತರದ ವ್ಯವಸ್ಥೆಯನ್ನು ಮಾಡಿರುವರು.

ವಾಚಕರೇ, ಇನ್ನು ನಿಮ್ಮ ಈ ನಿರೀಕ್ಷಣವನ್ನು ಸಾಕು ಮಾಡಿ, ಬಂಡಿಯೊಳಗಿಂದ ಕೆಳಗಿಳಿಯಿರಿ. ನಮಗೆ ೩-೪ ಹರದಾರಿಯವರೆಗೆ

ಇನ್ನು ಎತ್ತಿನ ಬಂಡಿಯಲ್ಲಿ ಹೋಗುವದುಂಟು ಹೋಗುತ್ತ ಹಾದಿಯಲ್ಲಿ ಎಷ್ಟೋ ರಮಣೀಯವಾದ ಸ್ಥಳಗಳನ್ನು ನೋಡುವದುಂಟು. ಇಲ್ಲಿಯೇ ಇಷ್ಟು ವೇಳೆ ಮಾಡಿದರೆ ಹೇಗೆ ನಡೆದೀತು. ನಿಜವಾಗಿಯೇ ರಾಯಬಾಗ ಸ್ಟೇಶನದಿಂದ ಎಡೂರ—ಇದೇ ನಮ್ಮ ದಿವಾಕರಪಂತರ ಊರು—ವರೆಗೆ ಇರುವ ಪ್ರದೇಶವು ಬಹಳ ರಮಣೀಯವಾಗಿರುವದು ಅಲ್ಲಲ್ಲಿಗೆ ಹಳ್ಳಿಗಳೂ, ಮಾವಿನ-ಹಲಿಸಿನ-ಗಿಡಗಳ ವನಗಳೂ ಎತ್ತ ನೋಡಿದತ್ತ ಕಾಣುತ್ತಿರುವವು ದಾರಿಯಗುಂಟ ಪ್ರವಾಸಕರಿಗೆ ನೀರಿನ ಅಭಾವತೆಯುಂಟಾಗಬಾರದೆಂತಲೋ, ಅಥವಾ ತನ್ನ ದಂಡೆಯ ಮೇಲೆ ಇರುತ್ತಿದ್ದ ಎಡೂರ ಗ್ರಾಮದವರೆಗೆ ಪ್ರವಾಸಿಕರನ್ನು ಸುಖರೂಪವಾಗಿ ಮುಟ್ಟಿಸಬೇಕೆಂತಲೋ ಕೃಷ್ಣೆಯು ಸಾವಕಾಶವಾಗಿ ದಾರಿಯಗುಂಟ ಹರಿಯುತ್ತಿದ್ದಾಳೆ ಈಗಿನ ಈಕೆಯ ಶಾಂತಸ್ವಭಾವವನ್ನು ಕಂಡು ಯಾರಾದರೂ ಈಕೆಯನ್ನು ಪ್ರೀತಿಸಬಹುದಾಗಿತ್ತು ಆದರೆ ಈಕೆಯು ಒಮ್ಮೊಮ್ಮೆ ಸಿಟ್ಟಿಗೆದ್ದು ಆರ್ಭಟಿಸುತ್ತ ತನ್ನ ಅಕ್ರಾಳ ವಿಕ್ರಾಳ ಸ್ವರೂಪವನ್ನು ಧರಿಸಿದಳೆಂದರೆ ಎಷ್ಟೋ ಗ್ರಾಮಗಳಿಗೆ ಬಲಿಯಾಗಿ ಈಕೆಯ ಹಸಿವೆಯನ್ನು ಕಳೆಯಬೇಕಾಗುತ್ತದೆಂದು ಅವರಿಗೇನು ಗೊತ್ತು!! ನದಿಯಲ್ಲಿ ಬಿಳೇ ಕಲ್ಲಿನಿಂದ ಅಲ್ಲಲ್ಲಿ ಕಟ್ಟಿದ್ದ ಸಣ್ಣ ಸಣ್ಣ ಗುಡಿಗಳು ಆಕೆಯ ಕೊರಳೊಳಗೆ ಮೌಕ್ತಿಕ ಮಾಲೆಯೊಳಗಿನ ಮಣಿಯಂತೆ ತಳುಪಿಸುತ್ತಿದ್ದವು ಈ ದಾರಿಯಿಂದ ಹೋಗುವವರು ಪರಮೇಶ್ವರ ನಿರ್ಮಿತ ಅಗಾಧ ರಚನೆಯನ್ನೂ ಇಲ್ಲಿಯ ಸೃಷ್ಟಿ ವೈಚಿತ್ರ್ಯವನ್ನೂ ನೋಡಿ ಬೆರಗಾಗದೆ ಇರುತ್ತಿದ್ದಿಲ್ಲ. ಈ ದಾರಿಯಿಂದ ಹೋಗಹತ್ತಿದ ಕೂಡಲೆ ಮನಸ್ಸಿನಲ್ಲಿ ಧಾರ್ಮಿಕ ವಿಚಾರಗಳೂ ಪರಮೇಶ್ವರನ ಅಗಾಧ ಲೀಲೆಯ ವಿಷಯಕ್ಕೆ ಆನಂದವೂ ಹುಟ್ಟಿ, ಮನಸ್ಸು ಪ್ರಫುಲ್ಲಿತವಾಗುತ್ತಿತ್ತು. ಇಂಥ ಮನಸೋಕ್ತ ಪ್ರದೇಶದ ಒಂದು ಭಾಗದಲ್ಲಿ, ಕೃಷ್ಣಾನದಿಯ ಎಡ ದಂಡೆಯ ಮೇಲೆ ಇರುತ್ತಿದ್ದದರಿಂದ 'ಎಡೂರ' ಎಂಬ ಹೆಸರಿನಿಂದ ಪ್ರಸಿದ್ಧಿಗೆ ಬಂದಿದ್ದ ಒಂದು ಮಧ್ಯಮ

ಪ್ರತಿಯ ಗ್ರಾಮದಲ್ಲಿ ನಮ್ಮ ದಿವಾಕರಪಂತರು ತಮ್ಮ ಸಣ್ಣದೊಂದು ಕುಟುಂಬದೊಡನೆ ಸುಖದಿಂದ ಇರುತ್ತಿದ್ದರು. ಊರೊಳಗೆ ನದಿಯ ದಂಡೆಯ ಮೇಲೆಯೇ, ಒಂದು ಭವ್ಯವಾದ ಶಿವಾಲಯವಿರುವದು, ಗುಡಿಯ ಸುತ್ತಮುತ್ತಲೂ ಭವ್ಯವಾಗಿ ಭದ್ರವಾಗಿದ್ದ ಗೋಡೆಯು ಕಟ್ಟಲ್ಪಟ್ಟಿರುವದು. ಒಳಗೆಲ್ಲ ಕಡೆಯಲ್ಲಿಯೂ ಯೋಗಿಗಳಿಗೆ ಸುಖ ದಿಂದ ಈಶಚಿಂತನೆಯಲ್ಲಿ ಕಾಲುಕಳೆಯುವದಕ್ಕಾಗಿ ಪೌಳಿಗಳು ಕಟ್ಟ ಲ್ಪಟ್ಟಿರುವವು ಮಧ್ಯದಲ್ಲಿ ಒಂದು ಪ್ರಶಸ್ತವಾದ ಶಿವಮಂದಿರವಿದ್ದು ಶಿವಮೂರ್ತಿಯು ಮಾತ್ರ ನೆಲಕ್ಕಿಂತ ತುಸು ಕೆಳಭಾಗದಲ್ಲಿ ಇರು ವದು. ಇಲ್ಲಿ ದಿನಾಲು ನೂರಾರು ಜನ ಯಾತ್ರಿಕರು ಶಿವದರ್ಶನಕ್ಕಾಗಿ ದೂರ ದೂರ ದೇಶದಿಂದ ಬರುವರು. ವರ್ಷಕ್ಕೊಮ್ಮೆ ಇಲ್ಲಿ ಒಳ್ಳೇ ವಿಜೃಂಭಣೆಯಿಂದ ಈಶ್ವರನ ಜಾತ್ರೆಯು ಸಾಗುವದು ಬಹುಕಾಲ ದಿಂದ ಇಲ್ಲಿ ವೈದ್ಯರ ಪ್ರಖ್ಯಾತಿಯು ಬಹಳ ಬೇಕಾದಂಥ ರೋಗಕ್ಕೆ ವನಸ್ಪತಿಗಳ ಔಷಧದಿಂದ ಗುಣಮಾಡಿ ತೋರಿಸುತ್ತಿದ್ದದರಿಂದ ರೋಗನಿವಾರಣೆಗಾಗಿಯೂ ಸಹ ಜನರು ಈ ಗ್ರಾಮಕ್ಕೆ ಬಂಪೇ ಬರುತ್ತಿರುವರು. ಹೀಗೆ ಎಲ್ಲ ರೀತಿಯಿಂದಲೂ ಈ ಗ್ರಾಮವು ಅತಿ ಶಯ ಪ್ರಖ್ಯಾತಿಯನ್ನು ಹೊಂದಿರುವದು.

ದಿವಾಕರಪಂತರನ್ನು ವಾಚಕರು ಮೊದಲೇ ಅರಿತಿರುವರು. ಇವರು ನಮ್ಮ ವಿದ್ಯಾಧರನ ದೂರಿನ ಆಪ್ತರೆಂದು ಹಿಂದೆ ಹೇಳಿದ್ದೇವೆ. ಇವರ ನಿರ್ಮಲ ಆಚರಣೆಯನ್ನೂ ಸಹ ವಾಚಕರು ಕಂಡೇ ಇರು ವರು. ಪತಿಸೇವೆಯಲ್ಲಿ ದಕ್ಷಳಾದ ಇವರ ಹೆಂಡತಿ, ಇವರ ಒಬ್ಬಳೇ ಒಬ್ಬ ಮಗಳಾದ ವಿಮಲೆಯೆಂಬ ೧೨-೧೩ ವರ್ಷದ ಕುಮಾರಿಕೆಯು ಇಷ್ಟೇ ಜನರು ದಿವಾಕರ ಪಂತರ ಮನೆಯಲ್ಲಿ ಇದ್ದರು. ದಿವಾ ಕರಪಂತರು ಪರೋಪಕಾರ ಬುದ್ಧಿಯಿಂದ ರೋಗಿಗಳಿಗೆ ಔಷಧ ವನ್ನು ಕೊಟ್ಟು ಈಶಚಿಂತನೆಯಲ್ಲಿಯೇ ಕಾಲುಕಳೆಯುತ್ತಿದ್ದರು.

ವಿದ್ಯಾಧರನ ಮಾತಾಪಿತೃಗಳು ತೀರಿದ್ದರಿಂದ ಅವನ ಸಂರಕ್ಷಣದ ಭಾರವು ದಿವಾಕರಪಂತರ ಮೇಲೆ ಬಂದದರಿಂದ ಆತನೂ ಈ ಕುಟುಂಬದೊಳಗಿನವನಾಗಿದ್ದನು. ವಿದ್ಯಾಧರನ ಆದಾಯವು ಇದೇ ಊರ ಹತ್ತರದಲ್ಲಿ ಇರುವ ಮತ್ತೊಂದು ಹಳ್ಳಿಯಲ್ಲಿ ಇತ್ತು. ದಿವಾಕರಪಂತರು ತಮ್ಮಲ್ಲಿದ್ದ ಔಷಧಜ್ಞಾನವನ್ನೂ, ಸಂಸ್ಕೃತ ಜ್ಞಾನವನ್ನೂ ತಮ್ಮ ಪ್ರೀತಿಯ ಮಗಳಾದ ವಿಮಲೆಗೆ ಚನ್ನಾಗಿ ಕಲಿಸಿದ್ದರು. ವಿಮಲೆಯು ರೂಪದಿಂದಲೂ ಗುಣದಿಂದಲೂ ಆಚರಣೆಯಿಂದಲೂ ತನ್ನ ಮಾತಾಪಿತೃಗಳನ್ನು ಆನಂದಗೊಳಿಸುತ್ತಿದ್ದಳು ವಿದ್ಯಾಧರನ ಪ್ರೇಮವು ಆಕೆಯ ಮೇಲೆ ಬಹಳ. ಆಕೆಯನ್ನು ಆತನು ತನ್ನ ಒಡಹುಟ್ಟಿದ ತಂಗಿಯಂತೆಯೇ ಪ್ರೀತಿಸುತ್ತಿದ್ದನು. ಎಂದಾದರೊಮ್ಮೆ ವಿದ್ಯಾಧರನು ಎಡೂರಿಗೆ ಬಂದಾಗ್ಗೆ ಆಕೆಯು ತನ್ನ ಆಚಾರ ವಿಚಾರಗಳಿಂದ ಆತನನ್ನು ಆನಂದಗೊಳಿಸಲು ಮರೆಯುತ್ತಿದ್ದಿಲ್ಲ ದಿವಾಕರಪಂತರ ವಯಸ್ಸು ಈಗ ೬೦-೬೫ ಮೀರಿತ್ತು. ಇಳಿ ವಯಸ್ಸಿನಲ್ಲಿಯೇ ಇವರಿಗೆ ಕನ್ಯಾರತ್ನವು ಲಭಿಸಿದ್ದರಿಂದ ಗಂಡಹೆಂಡಂದಿರು ವಿಮಲೆಯನ್ನು ಬಹಳ ಪ್ರೀತಿಸುತ್ತಿದ್ದರು ವಿದ್ಯಾಧರನೂ ತಮ್ಮ ಮಗನೆಂದೇ ತಿಳಿದುಕೊಂಡು ಆತನ ವಿದ್ಯೆಗಾಗಿ ತಮ್ಮಿಂದಾದಷ್ಟು ಸಹಾಯ ಮಾಡಿ ವಿಶ್ವವಿದ್ಯಾಲಯದ ಬಿ. ಎ ಪರೀಕ್ಷೆಯವರೆಗೆ ಕಲಿಸಿದ್ದರೆಂಬುದು ವಾಚಕರಿಗೆ ಗೊತ್ತಿರುವದು.

ಇರಲಿ —ದೈವಯೋಗವೂ, ಕಾಲಗತಿಯೂ ವಿಚಿತ್ರವಾಗಿರುವವು. ನಮ್ಮ ವಿದ್ಯಾಧರನೂ, ಮಾಧವನೂ ಕೂಡಿ ತಮ್ಮ ಧ್ಯೇಯವನ್ನು ಮುಟ್ಟಲಿಕ್ಕೆ ಹಾದಿಯನ್ನು ಹುಡುಕಿ ಒಬ್ಬರ ವಿಚಾರಗಳನ್ನು ಮತ್ತೊಬ್ಬರಿಗೆ ಹೇಳುತ್ತ ಬಂಡವನದಲ್ಲಿ ಕುಳಿತಿರಲು ಇತ್ತ ಎಡೂರಲ್ಲಿ ಒಂದು ಭಯಂಕರ ಕೋಲಾಹಲವೇ ನಡೆದಿತ್ತು. ಊರಲ್ಲಿ ಬಹಳ ದಿವಸಕ್ಕೆ ಬಂದಿದ್ದ ಪ್ಲೇಗು-ಮಾರಿಕಾ ಅಕ್ಕತಂಗಿಯರು ತಮ್ಮ ರಾಕ್ಷ

ಸೀಕೃತ್ಯಗಳನ್ನು ಅಂಜದೆ ಮಾಡುತ್ತಿದ್ದರು. ವಾಚಕರೇ, ಇಂಥ ಧಾರ್ಮಿಕ ಸ್ಥಳದಲ್ಲಿ, ಪ್ರತ್ಯಕ್ಷ ಪರಮೇಶ್ವರನು ಅಲ್ಲಿಯೇ ಕುಳಿತಿರಲು ಆತನನ್ನು ಸಹ ಲೆಕ್ಕಿಸದೆ ದುಷ್ಟರು ತಮ್ಮ ಕಾಳಕೃತ್ಯವನ್ನು ಹೇಗೆ ಮಾಡುವರು ನೋಡಿದಿರಾ! ದುರ್ಜನರು ಯಾರಿಗೂ ಅಂಜುವದಿಲ್ಲೆಂದು ಹೇಳುವದು ನಿಜವಿರಬಹುದೇನು? ಊರಲ್ಲಿ ಒಂದೇ ತರದ ಗೊಂದಲವು ನಡೆದಿತ್ತು. ನಿನ್ನೆ ಇವರು ತೀರಿಕೊಂಡರು, ಇಂದು ಇಂಥವರಿಗೆ ಪ್ಲೇಗು ಬಂದಿರುವದು. ಎಂದು ಹಾ ಹಾಕಾರವು ಊರಲ್ಲೆಲ್ಲ ಎದ್ದಿತ್ತು. ಬರಬರುತ್ತ ಊರು ಬಿಟ್ಟು ಹೋಗುವದರೊಳಗಾಗಿಯೇ ನಮ್ಮ ದಿವಾಕರಪಂತರಿಗೆ ಪ್ಲೇಗು ಬಂದಿತು. ತೀರಿತು ಅವರ ಹೆಂಡತಿಯ ಕೈಕಾಲೇ ಹೋದವು. ಆಕೆಯು ಬಡಬಡಕೊಂಡು ಅಳಹತ್ತಿದಳು. ಇನ್ನು ತನ್ನ ಕುಂಕುಮದೊಡೆಯರು ನಿಜವಾಗಿಯೇ ತನ್ನನ್ನು ಬಿಟ್ಟು ತೆರಳುವರೆಂದು ತಿಳಿದು ಆಕ್ರೋಶ ಮಾಡಹತ್ತಿದಳು. ಪಾಪ! ವಿಮಲೆಯು ಅತ್ತು ಅತ್ತು ಬೇಸತ್ತಳು. ತಾಯಿಯೇ ಅಳುತ್ತ ಕುಳಿತಿದ್ದ ಮೇಲೆ ಈ ಬಾಲಿಕೆಗೆ ಅಳಬೇಡೆಂದು ಯಾರು ಹೇಳಬೇಕು? ನೆರೆಹೊರೆಯವರು ಎಷ್ಟು ಹೇಳಿದರೂ ಕೇಳದೆ ದಿವಾಕರಪಂತರ ಹೆಂಡತಿಯು ಒಂದೇ ಸವನೆ ಆಕ್ರೋಶ ಮಾಡುತ್ತಿದ್ದಳು ಮರುದಿವಸವೇ "ನಿನ್ನ ಪತಿಯ ಸಂಗಡ ನಿನ್ನನ್ನು ನಾನು ಸ್ವರ್ಗಕ್ಕೆ ಕಳಿಸುತ್ತೇನೆಂ"ದು ಅನ್ನುತ್ತ ಮಾರಿಕಾ ತಂಗಿಯವರು ದಿವಾಕರಪಂತರ ಹೆಂಡತಿಗೆ ಗಂಟುಬಿದ್ದರು. ಮಾರಿಕಾ ಬೇನೆಯಿಂದ ತಾಸೆರಡು ತಾಸುಗಳಲ್ಲಿಯೇ ಅವಳು ಜರ್ಜರಳಾಗಿಹೋದಳು. ಅವಳಿಗೆ ಮಾತಾಡಲಿಕ್ಕೂ ಕೂಡ ಶಕ್ತಿಯಿಲ್ಲದಂತಾಗಿ ಹೋಯಿತು. ಅತ್ತ ದಿವಾಕರಪಂತರಿಗೂ ನೆಟ್ಟಗಾಗುವ ಚಿನ್ಹವು ತೋರಲಿಲ್ಲ ವಿಮಲೆಯ ಮೇಲೆ ಆಕಾಶವೇ ಹರಿದುಬಿದ್ದಂತಾಯಿತು. ಕೆಲವು ದಿವಸಗಳ ಕೆಳಗೆ ಆನಂದದಿಂದ ಮೆರೆಯುತ್ತಿದ್ದ ನಮ್ಮ ಈ ಕುಟುಂಬದ ಅವಸ್ಥೆಯನ್ನು ನೋಡಿ

ದಿರಾ! ಈಶ್ವರೇಚ್ಛೆಯನ್ನು ಯಾರು ಮೀರಲಾಪರು? ದಿವಾಕರಪಂತರ ಮಿತ್ರರು ಅವರ ಈ ದುಃಸ್ಥಿತಿಯನ್ನು ಕಂಡು ವಿದ್ಯಾಧರನನ್ನಾದರೂ ಕರೆಕಳುಹಿಸಬೇಕೆಂದು ಗೊತ್ತುಮಾಡಿ ಆತನಿಗೆ ತಾರು ಮಾಡಿದರು. ವಿಮಲೆಯ ಸಹಾಯಕ್ಕಾಗಿ ತಾವೇ ಬಂದು ದಂಪತಿಗಳ ಶುಶ್ರೂಷೆಯನ್ನು ಮಾಡಹತ್ತಿದರು. ಒಂದು ದಿವಸಾಯಿತು, ಇನ್ನೂ ವಿದ್ಯಾಧರನು ಬರಲಿಲ್ಲೆಂದು ಕಂಡು ವಿಮಲೆಯು ಹತಾಶಳಾದಳು ಆದರೂ ಧೈರ್ಯಗುಂದದೆ ಮಾತಾಪಿತೃಗಳ ಸೇವೆಯಲ್ಲಿ ಹಗಲಿರುಳೆನ್ನದೆ, ನಿದ್ದೆನೀರಡಿಕೆಯಿಲ್ಲದೆ, ತತ್ಪರಳಾದಳು. ಆದರೆ ದೇವರು ಆಕೆಯ ಈ ಸೇವೆಗೆ ತಕ್ಕ ಪ್ರತಿಫಲವನ್ನು ಕೊಡುವಂತೆ ಆಶೆ ಉಳಿಸಿದ್ದಿಲ್ಲ

ಇತ್ತ ಮೂರನೇ ದಿವಸ ಮಾಧವನು ಮುಂಜಾವಿನಲ್ಲಿ ಕಣ್ಣು ಒರಿಸಿಕೊಳ್ಳುತ್ತ ಹೊರಗೆ ಬರಲು ಶಿಪಾಯಿಯು ಆತನ ಕೈಯ್ಯಲ್ಲಿ ಒಂದು ತಾರುತಂದು ಕೊಟ್ಟನು. ಕೂಡಲೆ ಲಗುಬಗೆಯಿಂದ ಹರಿದು ಓದಿ ಗಾಬರಿಯಾಗಿ ಒಳಗೆಹೋಗಿ ವಿದ್ಯಾಧರನಿಗೆ ಅದನ್ನು ಕೊಟ್ಟನು ವಿದ್ಯಾಧರನು ಅಂಜುತ್ತಂಜುತ್ತಲೆ ಓದಹತ್ತಿದನು. ಮುಂದೆ ಮುಂದೆ ಓದಹತ್ತಿದಹಾಗೆ ಆತನ ಮುಖತೇಜವು ಇಳಿಯುತ್ತ ಹೋಯಿತು. ಆತನು ಬಹಳೇ ಸಂಕಟದಲ್ಲಿಬಿದ್ದನು. ಮಗನಂತೆ ಪ್ರೀತಿಸಿ ಪಾಲಿಸಿದ ತನ್ನ ದಿವಾಕರಪಂತರೂ ಆತನ ಹೆಂಡತಿಯೂ ಹೀಗೆ ಮರಣೋನ್ಮುಖರಾಗಿರುವರೆಂದು ಕಂಡು ಆತನಿಗೆ ಅಸಹ್ಯತರವಾದ ದುಃಖವಾಯಿತು. ಕೂಡಲೆ ಆತನು ಎದ್ದು ಅಂಗಿಯನ್ನು ಹಾಕಿಕೊಂಡು ಮಾಧವನ ಸಂಗಡ ವಿದ್ಯಾರ್ಥಿಗಳ ಮೇಲ್ವಿಚಾರಕರಕಡೆಗೆ ಹೋದನು. ಅವರ ಕೈಯ್ಯಲ್ಲಿ ತಾರು ಕೊಟ್ಟು ಇಬ್ಬರೂ ಸುಮ್ಮನೆ ನಿಂತರು. ಮೇಲ್ವಿಚಾರಕರು ತಾರು ಓದಿಕೊಂಡು “ ಒಳ್ಳೇದು ಹೋಗಿರಿ, ನಾನು ರಜೆಯನ್ನು ಕೊಟ್ಟದ್ದೇನೆ ” ಎಂದು ಹೇಳಿದರು. ವಿದ್ಯಾಧರನ ಅತ್ಯಾಗ್ರಹದಿಂದ ಆತನಿಗೆ ಸಹಾಯಮಾಡುವದಕ್ಕಾಗಿ ಮಾಧವನೂ ಎಡೂರ

ಗ್ರಾಮಕ್ಕೆ ಹೊರಟನು. ಅದೇ ರಾತ್ರಿ ೧೦ ಗಂಟೆಯ ಸುಮಾರಕ್ಕೆ ಅವರಿಬ್ಬರು ಎಡೂರಕ್ಕೆ ಬಂದು ಮುಟ್ಟಿದರು. ಮನೆಯ ಹತ್ತರ ಬಂದ ಕೂಡಲೆ ಬಾಗಿಲಲ್ಲಿ ಅಳುತ್ತ ನಿಂತಿದ್ದ ವಿಮಲೆಯು ಅವರ ದೃಷ್ಟಿಗೆ ಬಿದ್ದಳು. ವಿದ್ಯಾಧರನನ್ನು ನೋಡಿದಕೂಡಲೆ ಆಕೆಯು ಚಿಟ್ಟನೆ ಚೀರಿ ಮುಖವನ್ನು ಕೈಯಿಂದ ಮುಚ್ಚಿಕೊಂಡು ನಿಂತಲ್ಲಿಯೇ ನಿಂತಳು. ವಿದ್ಯಾಧರನು ಬಹಳೇ ಗಾಬರಿಯಾದನು. ಆತನು ಆಕೆಯ ಹತ್ತರಕ್ಕೆ ಹೋಗಿ ನಾಲ್ಕು ಉಪಚಾರದ ಮಾತುಗಳನ್ನು ಹೇಳಲಿಕ್ಕೆ ಪ್ರಾರಂಭಿಸಿದನು. ಆಕೆಯ ದುಃಖವೇಗವು ತುಸು ಕಡಿಮೆಯಾದಮೇಲೆ ಸಾವಕಾಶವಾಗಿ "ಕಕ್ಕನಿಗೆ ಹೇಗಿರುವದು? ಹಕ್ಕಿಗ ನೆಟ್ಟಗಾಯಿತೇನು?" ಎಂದು ಕೇಳಿದನು. ವಿಮಲೆಯು ಮತ್ತೆ ದೊಡ್ಡ ಧ್ವನಿಯಿಂದ ಅಳ ಹತ್ತಿದಳು. ಅಳುತ್ತಲೇ "ಇ-ಬ್ಬ-ರೂ ಇಂದು-ಮ-ಧ್ಯಾ-ಹ್ನ-ದ-ಲ್ಲಿ ತೀರಿಕೊಂ-ಡ-ರು" ಎಂದು ನಡಗುತ್ತ ಹೇಳಿದಳು. ವಿದ್ಯಾಧರನ ಹೃದಯಕ್ಕೆ ವಜ್ರಘಾತವಾದಂತಾಯಿತು. ಆತನು ವಿಮಲೆಯನ್ನು ಅಪ್ಪಿಕೊಂಡು ದೊಡ್ಡ ಧ್ವನಿಂದ ಅಳಹತ್ತಿದನು. ಮಾಧವನಿಗೂ ಈ ಸುದ್ದಿಯಿಂದ ಬಹಳೇ ದುಃಖವಾಯಿತು. ಅಳುವ ಭರವು ತುಸು ಕಡಿಮೆಯಾದಮೇಲೆ —

ಮಾಧ — "ವಿದ್ಯಾಧರಾ, ಇನ್ನು ಅಳುತ್ತ ಹೀಗೆ ಎಷ್ಟು ಹೊತ್ತಿನವರೆಗೆ ಕುಳಿತುಕೊಳ್ಳುವಿ? ಈಗಲೆ ಹನ್ನೆರಡು ಹೊಡೆದು ಹೋಯಿತು. ಎಲ್ಲರಿಗೂ ಸಮಾಧಾನವನ್ನು ಹೇಳಿ ನೀನು ಶಾಂತನಾಗು. ಇನ್ನು ಅಳುತ್ತಕುಳಿತರೆ ಏನಾಗಬಹುದು? ಉಳಿದ ಎಲ್ಲ ವಿಚಾರಗಳನ್ನು ಮಾಡಿ ಮುಂದಿನ ಕಾರ್ಯವನ್ನು ಹೇಗೆ ಮಾಡಬೇಕೆಂಬದನ್ನು ನಿಶ್ಚಯಿಸು; ಏಳು."

ವಿದ್ಯಾಧರನು ತುಸು ಶಾಂತನಾಗಿ ವಿಮಲೆಯನ್ನು ಸಮಾಧಾನಪಡಿಸಿದನು. ಕಡೆಗೆ ಸ್ನಾನಮಾಡಿ ಮಾಧವನ ಜುಲುಮೆಯಿಂದ

ಎಲ್ಲರೂ ತುಸು ಫಲಾರವನ್ನು ಮಾಡಿ ಮಲಗಿಕೊಂಡರು. ವಿಮಲೆಯು ಇನ್ನೂ ಅಳುವದನ್ನು ಬಿಟ್ಟದ್ದಿಲ್ಲ. ವಿದ್ಯಾಧರನು ಆಗಾಗ್ಗೆ ಸಮಾಧಾನ ಹೇಳುತ್ತಿದ್ದನು ಯಾರಿಗೂ ನಿದ್ದೆ ಹತ್ತಲಿಲ್ಲ. ತಾಸೆರಡು ತಾಸು ರಾತ್ರಿಯಿರುವಾಗಲೆ ಎಲ್ಲರೂ ಎದ್ದು ಕುಳಿತರು ಮಾದವನು ಮುಂದೆ ಏನು ಮಾಡಬೇಕೆಂದು ಕೇಳಿ.

ಮಾಧ:—ಈ ಊರಲ್ಲಿ ಇನ್ನು ಕ್ಷಣ ಹೊತ್ತಾದರೂ ನಿಲ್ಲುವದು ಸರಿಯಲ್ಲ ಯಾಕಂದರೆ ಊರಲ್ಲಿ ಯಾವತರದ ಕೋಲಾಹಲವು ನಡೆದಿರುವದೆಂಬದು ನಿನಗೆ ಗೊತ್ತೇ ಇರುವದು. ಇಂಥ ಸ್ಥಳದಲ್ಲಿ ನಿಲ್ಲುವದೆಂದರೆ ಪ್ರತ್ಯಕ್ಷ ಮೃತ್ಯುವಿನ ಬಾಯೊಳಗೆ ಹಾರಿಕೊಂಡಂತೆಯೇ ಸರಿ. ಎಲ್ಲಿಯಾದರೂ ಇಲ್ಲಿಯೇ ಸಮೀಪದ ಪಟ್ಟಣದಲ್ಲಿ ಉತ್ತರ ಕ್ರಿಯಾದಿಗಳನ್ನು ಮುಗಿಸಿಕೊಂಡು ಮುಂದಿನ ಎಲ್ಲ ವಿಚಾರಗಳನ್ನು ಸ್ಥಿರಗೊಳಿಸುವಾ.

ಮಾಧವನು ಹೇಳಿದಂತೆಯೇ ವಿದ್ಯಾಧರನು ಕೂಡಲೆ ಎದ್ದು ಮನೆಯಲ್ಲಿ ಎಲ್ಲ ವಸ್ತು-ಒಡವೆಗಳನ್ನು, ಕಾಗದ-ಕತಬಿಗಳನ್ನು ತೆಗೆದುಕೊಂಡು ಸಮೀಪದಲ್ಲಿಯೇ ಇದ್ದ ಕೊಲ್ಹಾಪುರಕ್ಕೆ ಹೋಗುವ ವ್ಯವಸ್ಥೆಯಲ್ಲಿ ತೊಡಗಿದನು.

ಕೊಲ್ಹಾಪುರಕ್ಕೆ ಮುಟ್ಟದ ಮೇಲೆ ಮಾಧವನು ಸವಿಸ್ತಾರವಾಗಿ ತನ್ನ ತಂದೆಯುವರಿಗೆ ಒಂದು ಪತ್ರವನ್ನು ಬರೆದನು. ಉತ್ತರಕ್ರಿಯಾದಿಗಳು ಯಥಾಸಾಂಗವಾಗಿ ಜರುಗಿದವು

ಪಂಚಮ ಪರಿಚ್ಛೇದ.

ಇದೇನು ಗೊಂದಲ!

ಹಿಂದಿನ ಪರಿಚ್ಛೇದದಲ್ಲಿ ದಿವಾಕರಪಂತರ ನಿಧನದಿಂದ ಎಲ್ಲರಿಗೂ ಎಷ್ಟು ದುಃಖವಾಯಿತೆಂದು ಹೇಳೇ ಹೇಳಿರುವೆವು. ನಮ್ಮ ವಾಚಕರಿಗೂ ಸಹ ಅಷ್ಟು ನಿರ್ಮಲ ಅಂತಃಕರುಣದ ಒಬ್ಬ ಉತ್ತಮ ರೋಗಚಿಕಿತ್ಸಕನು ಪ್ಲೇಗದಿಂದ ಇಲ್ಲದ ಹಾಗಾದನೆಂದು ತಿಳಿದು ಬಹಳ ದುಃಖವೆನಿಸಿದ್ದೀತು. ಮಾಧವನು ತನ್ನ ತಂದೆಯವರಿಗೆ ಕೊಲ್ಹಾಪುರದಿಂದ ಪತ್ರವನ್ನು ಬರೆದನೆಂಬದನ್ನೂ ಹಿಂದೆ ಹೇಳಿದ್ದೇವೆ ಅದಕ್ಕಾಗಿ ಪತ್ರವನ್ನು ಅವರು ಓದಿದರೋ ಇಲ್ಲವೋ ಎಂದು ತಿಳಿದುಕೊಳ್ಳುವದಕ್ಕಾಗಿ ಮತ್ತೆ ಸಂಹ್ಯಾದ್ರಿ ಪರ್ವತಶ್ರೇಣಿಯ ಮೇಲಿಂದಲೂ, ಖಂಡಾಳಾ ಮುಂತಾದ ಅಗಾಧ ಧರಿಗಳೊಳಗಿಂದಲೂ ಸುರಕ್ಷಿತವಾಗಿ ದಾಟಿ ಹಿಂದುಸ್ಥಾನದ ಪಶ್ಚಿಮ ತುದಿಗೆ ಇರುವ ಮುಂಬಾಪುರಿಗೆ ಇಂದು ನಮ್ಮ ವಾಚಕರನ್ನು ಒಯ್ಯತಕ್ಕವರಿದ್ದೇವೆ. ವಾಚಕರೆ, ಸಿಟ್ಟಿಗೆದ್ದಿರೇನು. ಹೌದು! ಎದ್ದಿರಬಹುದು. ನಮ್ಮಂಥವರ ಬೆನ್ನುಹತ್ತಿ ದಕ್ಷಿಣದಿಂದ ಪಶ್ಚಿಮಕ್ಕೆ ಪಶ್ಚಿಮದಿಂದ ದಕ್ಷಿಣಕ್ಕೆ ಓಡಾಡಿ ದುಃಖದಾಯಕ ಸಂಗತಿಗಳಿಂದ ಮನವ್ಯಥೆಪಡಿಸುವ ಸುಖವೇ ಸುಖವು! ಮತ್ತೇನೂ ಇಲ್ಲ! ಇರಲಿ! ಮಾಡುವದೇನು? ಇದಕ್ಕೆ ಎದೆಗೊಟ್ಟು ನಿಲ್ಲಲೇಬೇಕು ಮಾಧವನ ಪತ್ರವನ್ನು ಟಪಾಲ ಸಿಪಾಯಿಯು ತಂದು ಒಗದಾಗ್ಯೆ ಶ್ರೀನಿವಾಸರಾಯರು ಮನೆಯಲ್ಲಿ ಇದ್ದಿಲ್ಲ. ಸರಸ್ವತಿಯು ಪತ್ರವನ್ನು ನೋಡಿ ಮಾಧವನ ಕಡೆಯಿಂದ ಬಂದಿರುವದೆಂದು ತಿಳಿದು ಆತನು ಇನ್ನು ತೀವ್ರವೇ ವಿದ್ಯಾಧರನನ್ನು ಕರಕೊಂಡು ಬರಬಹುದೆಂದು ಹಿಗ್ಗಿ ಪತ್ರವನ್ನು

ಹರಿಯು ಹತ್ತಿದಳು. ನಿಜವಾಗಿ ವಿದ್ಯಾಧರನನ್ನು ಕಂಡಂದಿನಿಂದ ಸರಸ್ವತಿಯ ಮನಸ್ಸಿನಲ್ಲಿ ಆತನ ಬಗ್ಗೆ ಪ್ರೇಮವು ಹುಟ್ಟಿತ್ತು, ಆದರೆ ತಾನೇ ಪತಿಯನ್ನು ವರಿಸದೆ ತನ್ನ ತಾಯಿತಂದೆಗಳ ಅನುಮತಿಯಿಂದಲೇ ಪತಿಯನ್ನು ಆರಿಸಬೇಕೆಂದು ಆಕೆಯ ಇಚ್ಛೆಯು, ಅಣ್ಣನೂ ತಂದೆಯೂ ತನ್ನನ್ನು ಬಹಳೇ ಪ್ರೀತಿಸುವರೆಂಬದು ಆಕೆಗೆ ಗೊತ್ತಿತ್ತು, ಆದ್ದರಿಂದಲೇ ಅವರು ಬೇಕಾದಂಥವನ ಕೊರಳಲ್ಲಿ ತನ್ನನ್ನು ಕಟ್ಟದೆ, ತನ್ನ ಜನ್ಮಸಾರ್ಥಕವನ್ನು ಮಾಡಿಕೊಳ್ಳಲು ಅಸ್ಪದವನ್ನೀಯುವಂಥ ಪತಿಯನ್ನೇ ಹುಡುಕಬಹುದೆಂದು ಆಕೆಯು ನಂಬಿದ್ದಳು ಆದರೂ ಆಕೆಯ ಇಚ್ಛೆಯಿಲ್ಲದೆ ಆಕೆಯ ಮನಸ್ಸು ವಿದ್ಯಾಧರನ ವಿಷಯಕ್ಕೆ ಪ್ರಣಯಪ್ರೇಮರತವಾಗಿತ್ತು ಇರಲಿ, ಸರಸ್ವತಿಯು ಪತ್ರವನ್ನು ಓದಿ ಚಿಂತಾಕ್ರಾಂತಳಾದಳು ಆಕೆಗೆ ಆ ಪತ್ರದ ಅರ್ಥವೇ ಚೆನ್ನಾಗಿ ತಿಳಿಯದಂತಾಯಿತು " ಮಾಧವನು ಕೊಲ್ಹಾಪುರದಲ್ಲಿ ಏಕೆ? ವಿದ್ಯಾ....—ಅವರ ಊರು ಅದೇನು ಅಲ್ಲ. ಮೇಲಾಗಿ ಅವರ ಕಕ್ಕರೂ-ಸತ್ತರು, ಛೇ ಎಲ್ಲವೂ ಗೊಂದಲವೇ! ಏನೇ ಇರಲಿ ಅವರೆಲ್ಲರು ಯಾವದೋ ಒಂದು ದೊಡ್ಡ ಸಂಕಟದಲ್ಲಿದ್ದಂತೆ ತೋರುತ್ತದೆ ಆನಂದದ ಸುದ್ದಿಯನ್ನು ಕಾಣಬಹುದೆಂದು ಪತ್ರವನ್ನು ಹರಿದು ನೋಡಿದರೆ ಸಂಕಟದ ಸುದ್ದಿಯು, ಏನೋ ದುಶ್ಚಿನ್ಹವಿದ್ದಂತೆ ತೋರುತ್ತದೆ ' ಎಂದು ಬಾಯಲ್ಲಿಯೇ ವಟವಟಿಸಹತ್ತಿದಳು

ಇಷ್ಟರಲ್ಲಿ ಮನೋರಮಾಬಾಯಿಯವರು ಸರಸ್ವತಿಯು ಕೈಯ್ಯಲ್ಲಿ ಪತ್ರವನ್ನು ಹಿಡಿದು ವಿಚಾರಮಗ್ನಳಾಗಿ ನಿಂತಿದ್ದ ಕೋಣೆಯಲ್ಲಿ ಬಂದರು. ಮಗಳು ಚಿಂತಾಕ್ರಾಂತಳಾಗಿ ಯಾವದೋ ಒಂದು ಗೂಢವಿಚಾರದಲ್ಲಿ ತೊಡಗಿರುವಳೆಂದು ಕಂಡು ಹತ್ತರ ಬಂದು

ಮನೋ—ಯಾಕೆ ಸರಸ್ವತೀ, ಏನು ವಿಚಾರಿಸುತ್ತಿರುವೆ? ಪತ್ರವ್ಯಾರದು? ಅದರಲ್ಲಿ ಏನು ಬರೆದಿರುವದು?

ತಾಯಿಯು ಒಮ್ಮೆಲೆ ಇಷ್ಟು ಪ್ರಶ್ನೆಗಳನ್ನು ಕೇಳಿದ್ದರಿಂದ ಸರಸ್ವತಿಗೆ ಮೊದಲು ಯಾವ ಪ್ರಶ್ನೆಕ್ಕೆ ಉತ್ತರಕೊಡಬೇಕೆಂಬದು ತಿಳಿಯಲಿಲ್ಲ. ಏನೂ ಮಾತಾಡದೆ ತನ್ನ ಕೈಯ್ಯಲ್ಲಿದ್ದ ಪತ್ರವನ್ನು ಮನೋರಮಾಬಾಯಿಯವರ ಕೈಯ್ಯಲ್ಲಿ ಕೊಡುತ್ತ ವ್ಯಾಕುಲತೆಯಿಂದಲೇ ಸರಸ್ವತಿಯು "ಮಾಧವನ ಪತ್ರವು" ಎಂದು ಹೇಳಿ ತಾಯಿಯು ಏನನ್ನುವಳೋ ಕೇಳಬೇಕೆಂದು ಸುಮ್ಮನೆ ನಿಂತಳು. ಮೊದಲು ಮೊದಲು ಮಾಧವನು ಸರಸ್ವತಿಯ ಪತಿಶೋಧನದ ವಿಷಯಕ್ಕೆ ಏನಾದರು ಬರೆದಿರಬಹುದೆಂದೂ, ಆದರಿಂದಲೇ ಸರಸ್ವತಿಯು ಇಷ್ಟು ಗೂಢ ವಿಚಾರಕ್ಕೆ ಬಿದ್ದಿರುವಳೆಂದೂ ಮನೋರಮಾಬಾಯಿಯವರು ನಂಬಿ ಪತ್ರದಲ್ಲಿ ಆತನು ಏನು ಬರೆದಿರುವನೆಂದು ಕಂಡುಕೊಳ್ಳಲು ಉತ್ಸುಕರಾಗಿದ್ದರು ಆದರೆ ಅವರು ಓದುತ್ತ ಹೋದಹಾಗೆ ಆಶ್ಚರ್ಯ ಉದ್ವಿಗ್ನತೆ ಇವೇ ಅವರ ಮುಖದಲ್ಲಿ ತೋರಹತ್ತಿದವು. ಕಡೆಗೆ "ಎಡೂರಲ್ಲಿ ಬಹಳ ಪ್ಲೇಗವಿದ್ದದರಿಂದ ಎಲ್ಲರೂ ಕೊಲ್ಹಾಪುರಕ್ಕೆ ಹೋಗಿ ವ್ಯವಸ್ಥೆಯನ್ನು ಮಾಡುವದಕ್ಕಾಗಿ ತುಸು ದಿವಸ ನಿಂತಿರಬಹುದು. ತಮ್ಮ ಸಹಾಯಕ್ಕಾಗಿ ಇವರಿಗೂ ಬರಲಿಕ್ಕೆ ಕೇಳಿರುವನು. ದಿವಾಕರಪಂತರ ಹಾಗೂ ಅವರ ಪತ್ನಿಯರ ನಿರ್ಮಲ ಅಂತಃಕರಣಕ್ಕೆ ವಿದ್ಯಾಧರನು ಇನ್ನು ಅಂತರಿಸಿದನೆಂದು ಕಂಡು ನನಗೂ ಬಹಳೇ ದುಃಖವಾಗುತ್ತಿರುವದು. ಮಾಧವನು ವಿದ್ಯಾಧರನನ್ನು ಬಹಳೇ ಪ್ರೀತಿಸುತ್ತಿದ್ದಾನೆ. ಅವರಿಬ್ಬರೂ ಕೂಡಿಯೇ ಕೊಲ್ಹಾಪುರಕ್ಕೆ ಹೋದದ್ದು ಬಹಳ ಒಳ್ಳೇದಾಯಿತು ಒಬ್ಬರೊಬ್ಬರ ಸಹಾಯದಿಂದ ಎಲ್ಲ ಕೆಲಸವನ್ನು ಮಾಡುತ್ತಿರಬಹುದು." ಎಂದು ವಿಚಾರಿಸಿ ಮಗಳ ಉದ್ವಿಗ್ನತೆಯನ್ನು ಕಳೆಯುವದಕ್ಕಾಗಿ

ಮನೋ—ಸರಸ್ವತಿ, ಇದಕ್ಕೆ ಇಷ್ಟು ಗಾಬರಿಯಾದಂತೆ ಯಾಕೆ ತೋರುವಿ? ಮರಣವು ಯಾರ ಆಧೀನದಲ್ಲಿರುವದು? ಮಾಧವನೂ

ವಿದ್ಯಾಧರನೂ ಕೂಡಿರುವರು. ಅವರಿಗೆ ಈಗ ಬೇಕಾದಷ್ಟು ಧೈರ್ಯವು ಬಂದಿರುವದು. ಈಗ ಸೇವಾಗೃಹದಿಂದ (office) ಬಂದ ಕೂಡಲೆ ಅವರಿಗೆ ಈ ಪತ್ರವನ್ನು ತೋರಿಸು. ಅವರೂ ಹೋಗಿ ವಿದ್ಯಾಧರನಿಗೆ ಆತನ ಕಾರ್ಯದಲ್ಲಿ ಸಹಾಯಮಾಡಿ ವ್ಯವಸ್ಥೆಯಿಂದ ಎಲ್ಲರನ್ನು ಇತ್ತ ಕಡೆಗೆ ತುಸು ದಿವಸ ನಿಲ್ಲಲಿಕ್ಕೆ ಕರೆದುಕೊಂಡು ಬರಬಹುದು.

ತಾಯಿಯ ಈ ಶಬ್ದಗಳನ್ನು ಕೇಳಿ ಸರಸ್ವತಿಗೆ ತುಸು ಸಮಾಧಾನವಾದಂತಾಯಿತು. ಸರಸ್ವತಿಯು ಸಹಜ ಗತಿಯಿಂದ ಕಿಡಿಕಿಯೊಳಗೆ ಹಣಿಕಿ ಹಾಕಿ ತಂದೆಯು ಬರುವ ಮಾರ್ಗದ ಕಡೆಗೆ ನೋಡಿದಳು. ಕೂಡಲೆ ಚಿಟ್ಟನೆ ಚೀರಿ ನೆಲಕ್ಕುರುಳಿದಳು. ಆ ಕ್ಷಣವೇ ರಮಾಬಾಯಿಯವರು ಏನಾಯಿತೆಂದು ಕಿಡಕಿಯ ಹತ್ತರ ನೋಡಲಿಕ್ಕೆ ಹೋದರು ಇಬ್ಬರು ಮೂವರು ಸೇವಕರೂ, ವೈದ್ಯರೂ ಶ್ರೀನಿವಾಸರಾಯರನ್ನು ಬಂಡಿಯಿಂದ ಮೆಲ್ಲಗೆ ಎಚ್ಚರಿಕೆಯಿಂದ ಇಳಿಸುತ್ತಿದ್ದದ್ದು ಅವರಿಗೆ ಕಾಣಿಸಿತು ಅವರು ತೀರ ಗಾಬರಿಯಾದರು. ಅವರ ಕಣ್ಣಿಗೆ ಕತ್ತಲೆ ಬಂದಂತಾಗಿ ಕೂಡಲೆಅವರು ನೆಲದಮೇಲೆ ದೊಪ್ಪನೆ ಬಿದ್ದರು. ಸರಸ್ವತಿಯು ಎದ್ದು ಸಾವಕಾಶವಾಗಿ ತಾಯಿಯನ್ನು ಎಬ್ಬಿಸಲಿಕ್ಕೆ ಹೋಗುತ್ತಿರಲು ಆಕೆಗೆ ಬಾಗಿಲ ಮೇಲೆ ಯಾರೋ ಬಡಿದಂತಾಯಿತು. ಅಂಜುತ್ತಂಜುತ್ತ ಹೋಗಿ ಬಾಗಿಲ ತೆಗೆದಳು. ಹಾಯ! ಹಾಯ!! ಅಪ್ಪಾ ಹೀಗೇಕೆ ನಿಮ್ಮ ಗತಿ!!" ಎಂದು ಒದರಿ ನೆಲದ ಮೇಲೆ ಕುಳಿತಳು. ವೈದ್ಯರು ಸರಸ್ವತಿಗೆ ಅಂಜಬೇಡೆಂದು ಹೇಳಿ ಅಲ್ಲಿಯೇ ಇದ್ದ ಮಂಚದ ಮೇಲೆ ಶ್ರೀನಿವಾಸರಾಯರನ್ನು ಮಲಗಿಸಿದರು. ಅತ್ತಿತ್ತ ತಮ್ಮ ದೃಷ್ಟಿಯನ್ನು ಹಾಕುತ್ತಿರಲು ಮಸೋರಮಾಬಾಯಿಯವರು ನಿಶ್ಚೇಷ್ಟಿತರಾಗಿ ಬಿದ್ದದ್ದೂ ಅವರ ತಲೆಯೊಳಗಿಂದ ಅತುಲರಕ್ತವು ಹರಿಯುತ್ತಿದ್ದದ್ದೂ ವೈದ್ಯರಿಗೆ ಕಾಣಿಸಿತು. ಗಡಿಬಡಿಯಿಂದ ಹೋಗಿ ಗಾಯವನ್ನು ಕಟ್ಟಿದರು. ಕೆಲವು ಹೊತ್ತಿನಮೇಲೆ

ಮನೋರಮಾಬಾಯಿಯವರು ಕಣ್ಣು ತೆರೆದು ನಾಲ್ಕು ಕಡೆಗೆ ನೋಡಿದರು. ಪತಿಯು ಮಂಚದ ಮೇಲೆ ನಿಶ್ಚೇಷ್ಟಿತನಾಗಿ ಬಿದ್ದದ್ದೂ, ಸರಸ್ವತಿಯು ಗಾಬರಿಯಾಗಿ ಅಳುತ್ತಿರುವದೂ ಅವರಿಗೆ ಕಾಣಿಸಿತು. ಕೂಡಲೇ ಮತ್ತೆ ಅವರ ತಲೆತಿರುಗಿದಂತಾಗಿ ಕೂತಲ್ಲಿಯೇ ಮತ್ತೆ ಉರಳಿದರು. ಸರಸ್ವತಿಯು ಬಹಳ ಅಂಜಿದಳು. ತಂದೆಯವರ ಸ್ಥಿತಿಯು ಹೀಗಾಗಲಿಕ್ಕೆ ಕಾರಣವೇನೆಂದು ಕೇಳಲು ಯತ್ನಿಸುತ್ತಿರಲು ಇಷ್ಟರಲ್ಲಿ ತಾಯಿಯ ಅವಸ್ಥೆಯು ಹೀಗಾದದ್ದು ಕಂಡು ಗಾಳಿಯನ್ನು ಬೀಸಹತ್ತಿದಳು. ತುಸು ಹೊತ್ತಿನ ಮೇಲೆ "ಹಾಯ! ಹಾಯ! ವಿಧಿಯೇ ಇದೇನು ಸಂಕಟ!!" ಎಂದು ಉಸುರ್ಗರೆಯುತ್ತ ಮನೋರಮಾಬಾಯಿಯವರು ಎದ್ದು ಕುಳಿತರು.

ಈಗ ಮಾತ್ರ ಎಲ್ಲರಿಗೂ ತುಸು ಸಮಾಧಾನವಾಯಿತು. ಸರಸ್ವತಿಯ ಕಣ್ಣೊಳಗಿಂದ ಗಂಗಾಮಾತೆಯು ಇನ್ನೂ ಪ್ರವಹಿಸುತ್ತಲೇ ಇದ್ದಳು. ಮನೋರಮಾಬಾಯಿಯವರೂ ಅಳುತ್ತಲೇ ಗಾಬರಿಯಾಗಿ ಹುಚ್ಚು ಹಿಡಿದಂತೆ ಪತಿಯ ಮಂಚದ ಕಡೆಗೆ ಓಡಹತ್ತಿದರು. ವೈದ್ಯರು ಸಾವಕಾಶವಾಗಿ ಸರಸ್ವತಿಯ ಕಡೆಗೆ ನೋಡಿ "‡Ask your mother not to go there He is insensible" ಎಂದು ಹೇಳಿದರು ಈಗಂತೂ ಮನೋರಮಾಬಾಯಿಯವರ ಕೈಕಾಲೇ ಹೋದವು ಮತ್ತೆ ಅವರು ಹುಚ್ಚು ಹಿಡಿದವರಂತೆ ಓಡುತ್ತ ಬಂದು ಸರಸ್ವತಿಯನ್ನು ಅಪ್ಪಿಕೊಂಡು ಬಿಕ್ಕಿ ಬಿಕ್ಕಿ ಅಳಹತ್ತಿದರು. ವೈದ್ಯರು ಅಳಬೇಡೆಂದು ಹೇಳಿ ಶ್ರೀನಿವಾಸರಾಯರ ಕಡೆಗೆ ಒಮ್ಮೆ ದೃಷ್ಟಿಯನ್ನು ತಿರುವಿದರು. ಶ್ರೀನಿವಾಸರಾಯರು ಈಗೀಗ ತುಸು ಕಣ್ಣು ತೆರೆದು ಎಲ್ಲ ಕಡೆಗೂ ನೋಡಬೇಕೆಂದು ಯತ್ನಿಸುತ್ತಿದ್ದರು. ಅಸಹ್ಯತರವಾದ ಅಂತರ್ವೇದನೆಗಳಾಗುತ್ತಿದ್ದದರಿಂದ ಅವರಿಗೆ ಮಾತಾಡ

‡ಮಂಚದಹತ್ತರ ಹೋಗಬೇಡೆಂದು ನಿಮ್ಮ ತಾಯಿಗೆ ಹೇಳು. ಶ್ರೀನಿವಾಸರಾಯರು ನಿಶ್ಚೇಷ್ಟಿತರಾಗಿರುವರು.

ಲಿಕ್ಕೆ ಬರಲಿಲ್ಲ ಪತ್ನಿ ಪುತ್ರಿಯರನ್ನು ಕಂಡು ಅವರ ಅಂತರ್ವೇದನೆಗಳು ಹೆಚ್ಚಿ ಅವರು ಮತ್ತೆ ನಿಶ್ಚೇಷ್ಟಿತರಾದರು. ವೈದ್ಯರು ಮತ್ತೆ ಔಷಧೋಪಚಾರಗಳನ್ನು ಮಾಡಿದರು

ಹೀಗಾಗುವದಕ್ಕೆ ಕಾರಣವೇನೆಂಬದನ್ನು ಸ್ವಲ್ಪದರಲ್ಲಿಯೇ ಸರಸ್ವತಿಗೆ ಹೇಳಿ ಕೆಲವು ಔಷಧಗಳನ್ನು ಕೊಟ್ಟು ಹೋಗಬೇಕೆಂಬ ಉದ್ದೇಶದಿಂದ ಸರಸ್ವತಿಯನ್ನು ಹತ್ತರ ಕರೆದು ಸಾವಕಾಶವಾಗಿ ಎಲ್ಲವನ್ನೂ ಚೆನ್ನಾಗಿ ತಿಳಿಯುವಂತೆ ವಿಸ್ತರಿಸಿ ಹೇಳಿದರು. ಒಮ್ಮೆಲೇ ಹೀಗಾದ ಸುದ್ದಿಯನ್ನು ಕೇಳಿ ಅವರು ಎದೆಯೊಡಕೊಂಡಿರುವರೆಂದೂ ಹೇಳಿ ಕೆಲವು ಔಸಧಗಳನ್ನು ಕೊಟ್ಟು ತಾವು ಸಂಜೆಯ ಎಂಟು ಗಂಟೆಯ ಸುಮಾರಕ್ಕೆ ಮತ್ತೆ ಬರುತ್ತೇವೆಂದೂ ಹೇಳಿ ಹೊರಡುತ್ತಲೇ * "Take care that you do not trouble him in any way, Be silently waiting near him" ಎಂದು ಹೇಳಿದರು. ವೈದ್ಯರು ಹೊರಟು ಹೋದಮೇಲೆ ಸರಸ್ವತಿಯೂ ಮನೋರಮಾಬಾಯಿಯವರೂ ಒಬ್ಬರನ್ನೊಬ್ಬರು ಅಪ್ಪಿಕೊಂಡು ಬಿಕ್ಕಿ ಅಳಹತ್ತಿದರು ಅಳುವ ವೇಗವು ತುಸು ಕಡಿಮೆಯಾದಮೇಲೆ ಸರಸ್ವತಿಯು ಎದ್ದು ಮಂಚದ ಹತ್ತರವೇ ಶಾಂತಚಿತ್ತದಿಂದ ತಂದೆಯ ಮುಖವನ್ನು ನೋಡುತ್ತ ಕುಳಿತುಕೊಂಡಳು. ಮನೋರಮಾಬಾಯಿಯವರೂ ಹಾಗೇಮಾಡಿದರು ತುಸು ವೇಳೆಯು ಕ್ರಮಿಸಿದನಂತರ ಶ್ರೀನಿವಾಸರಾಯರು ಕಣ್ದೆರೆದು "ಸರಸ್ವತೀ, ಮಾಧವಾ" ಎಂದು ಸಾವಕಾಶವಾಗಿ ನಿಲ್ಲುತ್ತ ನಿಲ್ಲುತ್ತ ಅಂದರು. ಸರಸ್ವತಿಯು ತೀರ ಹತ್ತರಹೋಗಿ ಬಗ್ಗಿ "ಅಪ್ಪಾ ನಿಮಗೇನು ಆಗುತ್ತದೆ?" ಎಂದು ಕೇಳಿದಳು ಶ್ರೀನಿವಾಸರಾಯರು ಮತ್ತೆ ಒಮ್ಮೆ

* ಅವರಿಗೆ ಯಾವತೊಂದರೆಯನ್ನು ಕೊಡಬೇಡಿರಿ ಸುಮ್ಮನೆ ಅವರ ಹತ್ತರ ಕುಳಿತು ಶುಸ್ರೂಷಣೆಯನ್ನು ಮಾಡಿರಿ

ದೃಷ್ಟಿಯನ್ನು ಎಲ್ಲಕಡೆಗೆ ಹಾಕಿದರು. ಕಣ್ಣೊಳಗಿಂದ ನೀರು ಹರಿಯಹತ್ತಿತು ಮಾತಾಡಲಿಕ್ಕೆ ಬರದಂತಾಗಿ ಕಂಠವು ಬಿಗಿದುಹೋಯಿತು ಇದನ್ನು ಕಂಡು ಸರಸ್ವತಿಯು ತಾಯಿಗೆ ಅಲ್ಲಿಂದ ಎದ್ದು ಹೋಗಲು ಹೇಳಿ ತಂದೆಯ ಕಣ್ಣುಗಳನ್ನು ಒರಿಸುತ್ತ "ಈಗ ನೀವು ಏನೂ ಮಾತಾಡಬೇಡಿರಿ. ಸ್ವಸ್ಥಚಿತ್ತದಿಂದ ಮಲಗಿಕೊಳ್ಳಿರಿ" ಎಂದು ಹೇಳಿ ಮೋರೆಯಮೇಲೆ ತೆಳುವಾದ ವಸ್ತ್ರವನ್ನು ಹೊದ್ದಿಸಿ ಹತ್ತರವೇ ಕುಳಿತುಕೊಂಡಳು. ಶ್ರೀನಿವಾಸರಾಯರು ಮತ್ತೆ ನಿಶ್ಚೇಷ್ಟಿತರಾದರು ಸರಸ್ವತಿಯು ಗಾಬರಿಯಾಗಿ ವೈದ್ಯರು ಹೇಳಿದಂತೆ ಔಷಧೋಪಚಾರಗಳನ್ನು ಮಾಡಿದಳು. ಇನ್ನು ಮುಂದೇನು ಮಾಡಬೇಕೆಂಬದು ಆಕೆಗೆ ತೋಚದಾಯಿತು. ಅತ್ತ ಮಾಧವನು ತನ್ನ ಮಿತ್ರರ ಸಹಾಯಕ್ಕಾಗಿ ಕೊಲ್ಹಾಪುರದಲ್ಲಿ! ಏನುಮಾಡಬೇಕು? ಕೂಡಲೆ ಮಾಧವನಿಗೆ ತಾರುಮಾಡಬೇಕೆಂದು ಆಕೆಗೆ ತೋಚಿತು ಇಷ್ಟರಲ್ಲಿಯೇ ಶ್ರೀನಿವಾಸರಾಯರು ಎಚ್ಚರಾದಂತೆ ಮಾಡಿ 'ವಿದ್ಯಾಧರನೆಲ್ಲಿ?' ಎಂದು ಕೇಳಿದರು "ವಿದ್ಯಾಧರನಿಗೆ ಬರಲು ತಾರು ಮಾಡುವೆನು, ಮುಂಜಾನೆ ಬರಬಹುದೆ"ಂದು ಸರಸ್ವತಿಯು ಹೇಳಿದಳು. ಶ್ರೀನಿವಾಸರಾಯರು ತುಸು ಸಮಾಧಾನದೃಷ್ಟಿಯಿಂದ ಸರಸ್ವತಿಯನ್ನು ನೋಡಿ ಮತ್ತೆ ಹೊದ್ದುಕೊಂಡು ಮಲಗಿಕೊಂಡರು. ಇದನ್ನು ತಿಳಿದು ಸರಸ್ವತಿಯು ತಾಯಿಯವರನ್ನು ಕರೆದು ಅಲ್ಲಿಯೇ ಕೂಡೆಂದು ಹೇಳಿ ತಾನು ಭರದಿಂದ ಪಾವಟಿಗೆಗಳನ್ನು ಇಳಿದು ಅದೇ ಮನೆಯ ಕೆಳಗಿನ ಅಂತಸ್ತಿನಲ್ಲಿದ್ದ ಅಂಚೆ ಕಟ್ಟೆಗೆ ಹೋಗಿ ತಾರುಮಾಡುವ ಕಾಗದವನ್ನು ತೆಗೆದುಕೊಂಡು ಮಾಧವನು ಭಯಪಡದಂತೆ ಸಂಕ್ಷಿಪ್ತವಾಗಿ ಕೆಲವು ಶಬ್ದಗಳಲ್ಲಿ ಆತನಿಗೆ ಕೂಡಲೇ ಬರಬೇಕೆಂದು ಬರೆದಳು. ತಿರುಗಿ ಕೋಣೆಗೆ ಬಂದು ನೋಡಲು ಶ್ರೀನಿವಾಸರಾಯರು ಆಗ ಪೂರ್ಣವಾಗಿ ಕಣ್ದೆರೆದು ವ್ಯಾಕುಲರಾಗಿ ಎಲ್ಲಕಡೆಗೆ ನೋಡುತ್ತಿದ್ದರು. ಸರಸ್ವತಿಯು ಬಂದಳೆಂದು ಕಂಡು ಕೈಸೊನ್ನೆಯಿಂದ ಆಕೆಗೆ ತನ್ನ ಹತ್ತರ

ಕೂಡೆಂದು ತಿಳುಹಿ ಆಕೆಯ ಬೆನ್ನ ಮೇಲೆ ಕೈಯ್ಯಾಡಿಸಹತ್ತಿದರು. ಸರಸ್ವತಿಯು ತಂದೆಯ ಕೈಸ್ಪರ್ಶವಾದ ಕೂಡಲೆ ಗಾಬರಿಯಾಗಿ ಮತ್ತೊಮ್ಮೆ ಅವರ ಕೈ ಹಿಡಿದು ನೋಡಿದಳು. ಭಯಂಕರ ಜ್ವರದಿಂದ ಶ್ರೀನಿವಾಸರಾಯರ ಶರೀರವೆಲ್ಲ ಕಾಯ್ದು ಹೋಗಿತ್ತು. ಆಕೆಯ ಧೈರ್ಯವು ಕುಂದಹತ್ತಿತು

ಹೇಳಿದಂತೆ ಎಂಟು ಗಂಟೆಯ ಸುಮಾರಕ್ಕೆ ವೈದ್ಯರು ಮತ್ತೆ ಬಂದು ನಾಡೀ ನೋಡಿ ಜ್ವರವು ಬಹಳೇ ಬಂದಿರುವದನ್ನು ಕಂಡರು. ಮಾನಸಿಕ ಶ್ರಮವು ಬಹಳವಾಗಿರುವದರಿಂದ ಈ ಬೇನೆಗೆ ಔಷಧವು ತೀವ್ರ ನಡೆಯಲಾರದೆಂದು ಹೇಳಿ ಮತ್ತೆ ಶರೀರ ಪರೀಕ್ಷಣೆಗೆ ಹತ್ತಿದರು. ಸರಸ್ವತಿಯು ವೈದ್ಯರು ಹೇಳಿದ್ದನ್ನು ಕಂಡು ಬಹಳ ದುಃಖಿತಳಾದಳು. ವೈದ್ಯರು ಮತ್ತೆ ಔಷಧವನ್ನು ಕೊಟ್ಟು ಅದಕ್ಕೆ ಮಾಡತಕ್ಕ ಎಲ್ಲ ಕಾರ್ಯವನ್ನು ತಿಳುಹಿದರು. ಸರಸ್ವತಿಯು ಔಷಧವನ್ನು ಇಸುಗೊಂಡು ಅದನ್ನು ಹೇಗೆ ಹೇಗೆ ಉಪಯೋಗಿಸಬೇಕೆಂಬದನ್ನು ತಿಳಕೊಳ್ಳುತ್ತಿದ್ದಳು. ವೈದ್ಯರು ತಿರುಗಿ ಹೋಗಲಿಕ್ಕೆ ಸಿದ್ಧರಾಗಹತ್ತಿದರು. ಅಷ್ಟರಲ್ಲಿ ಸರಸ್ವತಿಗೆ ಏನೋ ನೆನವಾದಂತಾಗಿ "* Sir, will you kindly see my mother's wounds? She too is attacked by strong fever " ಎಂದು ವ್ಯಾಕುಲಚಿತ್ತಳಾಗಿ ಪ್ರತಿ ಶಬ್ದಗಳನ್ನು ಕಷ್ಟದಿಂದಲೇ ಉಚ್ಚರಿಸುತ್ತ ವೈದ್ಯರಿಗೆ ಹೇಳಿದಳು. ವೈದ್ಯರಿಗೆ ತಾವು ಮಧ್ಯಾಹ್ನದಲ್ಲಿ ಬಂದಾಗ್ಗೆ ಮನೋರಮಾಬಾಯಿಯವರ ತಲೆಗೆ ಪೆಟ್ಟುಹತ್ತಿ ನಿಶ್ಚೇಷ್ಟಿತರಾಗಿ ಬಿದ್ದಿರಲು ತಾವು ಅವರಿಗೆ ಮಲಮು ಪಟ್ಟಿಯನ್ನು ಹಚ್ಚಿ ಔಷಧ ಕೊಟ್ಟದ್ದು ಈಗ ನೆನವಾಯಿತು. ಅವರು '§Yes! and where is your mother?"

* ಮಹಾಶಯ, ತಾಯಿಗೂ ಕೂಡ ಜ್ವರಬಂದು ಸುಂಡಿನ ಗಾಯದಿಂದ ಆಕೆಯು ತಪತಪಿಸುತ್ತಿರುವಳು. ಆಕೆಯ ಗಾಯವನ್ನಷ್ಟು ನೋಡುವಿರಾ?

§ ಹೌದು, ಅವರು ಈಗ ಎಲ್ಲಿರುವರು?

ಎಂದು ಕೇಳಿದರು. ಸರಸ್ವತಿಯು ತಾರು ಮಾಡಹೋಗಲು ಮನೋರಮಾಬಾಯಿಯವರು ವ್ಯಥೆಯನ್ನು ತಾಳುತ್ತ ಅಲ್ಲಿಯೇ ಕೂಡ್ರಲಾರದೆ ತುಸು ಹೊತ್ತು ಹತ್ತರದ ಕೋಣೆಯಲ್ಲಿ ಮಂಚದ ಮೇಲೆ ಮಲಗಿದ್ದರು.

ಸರಸ್ವತಿಯು ಹತ್ತರದ ಕೋಣೆಯ ಬಾಗಿಲವನ್ನು ತೆಗೆದಳು. ಮಂಚದ ಮೇಲೆ ಮನೋರಮಾಬಾಯಿಯವರು ವಿಷಣ್ಣ ಹೃದಯದಿಂದ ಕಣ್ಣಲ್ಲಿ ನೀರು ತುಂಬಿಕೊಂಡು ಊರ್ಧ್ವದೃಷ್ಟಿಯಿಂದ ದೇವರನ್ನು ಧ್ಯಾನಿಸುತ್ತಿದ್ದರು ವೈದ್ಯರನ್ನು ಕಂಡು ಏಳಲಿಕ್ಕೆ ಯತ್ನಿಸಿ 'ನನ್ನ ಪತಿಗೆ ನೆಟ್ಟಗಾಗುವದೋ' ಎಂಬ ಅರ್ಥಪೂರ್ಣದೃಷ್ಟಿಯಿಂದ ಅವರ ಕಡೆಗೆ ನೋಡಿದರು ವೈದ್ಯರು 'ಹಾಗೆ ಆಗಬಹುದು ನೀವೇನು ಚಿಂತಿಸಬೇಡಿರಿ,' ಎಂಬ ದೃಷ್ಟಿಯಿಂದ ನೋಡುವಂತೆ ತೋರಿತು. ಮನೋರಮಾಬಾಯಿಯವರ ಮುಖದ ಮೇಲೆ ತುಸು ಆನಂದದ ಕಳೆಯೇರಿತು ವೈದ್ಯರು ಗಾಯದ ಮೇಲಿನ ಪಟ್ಟಿಯನ್ನು ತೆಗೆದು ಅದನ್ನು ಸ್ವಚ್ಛವಾಗಿ ತೊಳೆದು, ಮಲಮುವನ್ನು ಹಚ್ಚಿ, ಮುಂಜಾವಿನಲ್ಲಿ ಮತ್ತೆ ಬರುತ್ತೇನೆಂದು ಹೇಳಿ ಹೋಗಹತ್ತಿದರು. ಸರಸ್ವತಿಯು "* I am ever thankful to you, Sir" ಎಂದು ಅವರು ಹೋಗುವಾಗ್ಗ ಅಂದಳು. ಇದರಲ್ಲಿ ಉಪಕಾರ ಮನ್ನಿಸುವಷ್ಟು ವಿಶೇಷವೇನಿಲ್ಲೆಂತಲೂ, ಶ್ರೀನಿವಾಸರಾಯರ ನಿರ್ಮಲ ಅಂತಃಕರಣವು ತನಗೆ ಅಂತರಿಸಲಾರದೆಂದೇ ಈ ಕಾರ್ಯವನ್ನು ಕೈಕೊಂಡಿರುವೆನೆಂದೂ ಹೇಳಿ ಅವರು ಮುಖದಮೇಲೆ ಆನಂದದ ಕಳೆಯನ್ನು ತಂದುಕೊಳ್ಳಲು ಯತ್ನಿಸಿದರು. ಆದರೆ ಅವರ ಮುಖವು ಮತ್ತಿಷ್ಟು ಸಂಶಯಾಸ್ಪದವಾಗಿಯೇ ತೋರಹತ್ತಿ ಅವರು ಕಂಪಿಸತೊಡಗಿದರು. ಮುಖದ ಮೇಲಿನ ಗಾಂಭೀರ್ಯವೆಲ್ಲ ಹೋಯಿತು. "ತಾವು ಭಯಂಕರ ಕೃತ್ಯವನ್ನು ಮಾಡಿರುವೆವು" ಎಂಬ ಅಕ್ಷರಗಳು ಅವರ ಮುಂದೆ

* ನಾನು ತಮಗೆ ಆಜನ್ಮ ಉಪಕಾರಬದ್ಧಳಾಗಿರುವೆನು

ಕಾಣಿಯುಹತ್ತಿದವು ವೈದ್ಯರು ಬಹಳೇ ಪೇಚಾಟದಲ್ಲಿ ಬಿದ್ದರು. ಹೇಗಾದರೂ ಮಾಡಿ ಅಲ್ಲಿಂದ ಪಾರಾಗಿ ಹೋಗಬೇಕೆಂದುಮಾಡಿ "ಒಳ್ಳೇದು ನಾನು ಹೋಗಿ ಬರುತ್ತೇನೆಂ"ದು ಹೇಳಿ ಹೊರಟು ಹೋದರು

ವೈದ್ಯರ ಆ ಮನಸ್ಸ್ವಾಂಚಲ್ಯವೂ, ಅವರ ಕಂಪನೆಯೂ, ಅವರ ಮುಖದ ಮೇಲಿನ ಆಗಿನ ಭಯಂಕರ ಕಳೆಯೂ ಸರಸ್ವತಿಯ ಮನಸ್ಸಿನಲ್ಲಿ ಬರದೇ ಹೋಗಲಿಲ್ಲ ಆಕೆಗೂ ಕೂಡ ಈ ಗೊಂದಲವು ತಿಳಿಯದಾಯಿತು. ತನ್ನ ವಿಚಾರದಂತೆ ತಂದೆಯವರ ಬೇನೆಯು ಸಣ್ಣದಿರದೆ ಒಮ್ಮೆಲೇ ಬಂದ ಆಪತ್ತಿನಿಂದ ಅವರ ಎದೆಯೊಡೆದು ಮಾನಸಿಕ ಯಾತನೆಯು ಬಹಳವಾಗಿರುವದೆಂದು ತಿಳಿದಳು. ಆದರೂ ವೈದ್ಯರ ವಿಷಯದಲ್ಲಿ ಮಾತ್ರ ಆಕೆಗೆ ಸಂಶಯ ಬರದೆ ಇರಲಿಲ್ಲ.

ಮನೋರಮಾಬಾಯಿಯವರಿಗೆ ಮಾತ್ರ ಬರಬರುತ್ತ ನೆಟ್ಟಗನಿಸಹತ್ತಿತು ರಾತ್ರಿಯ ಹತ್ತು ಗಂಟೆಯ ಸುಮಾರಕ್ಕೆ ಅವರ ಜ್ವರವೆಲ್ಲ ಕಡಿಮೆಯಾಗಲು ಅವರು ಶ್ರೀನಿವಾಸರಾಯರ ಹತ್ತರ ಬಂದು ಕುಳಿತರು ಸರಸ್ವತಿಯಂತೂ ಹಗಲು-ಇರುಳೆನ್ನದೆ ಒಂದೇಸವನೆ ಶ್ರೀನಿವಾಸರಾಯರ ಶುಶ್ರೂಷಣೆ ಮಾಡುವದರಲ್ಲಿಯೇ ತೊಡಗಿದ್ದಳು.

ಹನ್ನೆರದು ಗಂಟೆಗೆ ಔಷಧವನ್ನು ಕೊಡಬೇಕಾಗಿತ್ತು, ಗಡಿಯಾರದಲ್ಲಿ ವೇಳೆ ನೋಡಿ ಇನ್ನು ಅರ್ಧತಾಸು ವೇಳೆ ಇರುವದೆಂದು ಕಂಡು, ಸಮಾಧಾನಪಟ್ಟು ಅಷ್ಟರಲ್ಲಿ ಹಾಲು ಕಾಯಿಸಬೇಕೆಂದು ಮಾಡಿದಳು. ಹೋಗುತ್ತ ಹೋಗುತ್ತ ಔಷಧದ ಶಿಸೆಯನ್ನು ತೆಗೆದುಕೊಂಡು ಹೋದಳು 'ಸ್ಟೋವ್ಹ'ನ್ನು ಹಚ್ಚಿ ಹಾಲು ಕಾಸುತ್ತಾ ಕುಳಿತಳು, ಇಷ್ಟರಲ್ಲಿ ಎಲ್ಲಿಯೋ ಹೋಗಿದ್ದ ಅವರ ಮನೆಯ ಬೆಕ್ಕು "ಮ್ಯಾಂವ ಮ್ಯಾಂವ"ಎಂದು ಒದರುತ್ತ ಆಕೆಯ ಬೆನ್ನಿಗೆ ಬೆನ್ನುಹಚ್ಚಿ ಒದರಹತ್ತಿತು. ತುಸು ಹಾಲು ಹಾಕಬೇಕೆಂದು ವಿಚಾರಿಸಿ ಬಟ್ಟಲ

ವನ್ನು ತೆಗೆದುಕೊಂಡು ಅದರಲ್ಲಿ ಹಾಲು ಹಾಕಿದಳು, ಅಷ್ಟರಲ್ಲಿ ಆಕೆಗೆ ಏನನಿಸಿತೋ ಯಾರಿಗೆ ಗೊತ್ತು! ಔಷಧದ ಶಿಸೆಯನ್ನು ತೆಗೆದು ಹಾಲಿನಲ್ಲಿ ಔಷಧದ ೮-೧೦ ಹನಿಗಳನ್ನು ಹಾಕಿದಳು. ಬೆಕ್ಕು ಹಾಲು ಹಾಕುತ್ತಿರುವದನ್ನು ಕಂಡು ಓಡುತ್ತ ಬಂದು ಔಷಧ ಹಾಕುತ್ತಿರುವಾಗಲೇ ಕುಡಿಯ ಹತ್ತಿತು. ತುಸು ಹೊತ್ತಿನ ಮೇಲೆ ಬೆಕ್ಕು ಹಾಲು ಕುಡಿದು ಕೃತಜ್ಞತೆಯಿಂದ ಸರಸ್ವತಿಯ ಹತ್ತರವೇ ಓಡಾಡುತ್ತಿತ್ತು. ಸರಸ್ವತಿಯಾದರೂ ಬೆಕ್ಕಿನ ಬೆನ್ನಮೇಲೆ ಕೈಯಾಡಿಸುತ್ತ ಕುಳಿತಳು, ೫-೬ ನಿಮಿಷಗಳ ತರುವಾಯ ಬೆಕ್ಕು ಬಹಳೇ ಒದರ ಹತ್ತಿತು ಇದನ್ನು ಕಂಡು ಅದಕ್ಕೆ ಮತ್ತೆ ಹಾಲುಬೇಕೆಂದು ಎಣಿಸಿ ಮತ್ತೆ ತುಸು ಹಾಲನ್ನು ಹಾಕಿ ಅದರ ಮುಂದೆ ಇಟ್ಟಳು, ಆದರೆ ಅದು ಹಾಲು ಕುಡಿಯದೆ ಉರುಳಾಡಿ ಒಂದೇಸವನೇ ಒದರಹತ್ತಿತು. ಸಹಜವಾಗಿ ಆಕೆಗೆ ಸಂಶಯ ಬಂದು ಬಟ್ಟಲನ್ನು ನೋಡಿದಳು. ಹಾಲು ಹೆಚ್ಚಗೆ ಹಸರಾಗಿದ್ದು, ವಾಸನೆಯೊಂದರೀ ಅದಕ್ಕೆ ಬರುತ್ತಿತ್ತು; ಆಕೆಯು ಶಿಸೆಯ ವಾಸನೆಯನ್ನು ನೋಡಿದಳು ಔಷಧವೇ ಹಾಗಿರಬಹುದೆಂದು ಶಿಸೆಯನ್ನು ಕೆಳಗಿಟ್ಟಳು ಬೆಕ್ಕು ಅಷ್ಟೊತ್ತಿನಲ್ಲಿ ಮರಣೋನ್ಮುಖವಾಗಿ ಬಳಲುತ್ತ ಕೆಳಗೆ ಬಿದ್ದಿತು, ಸರಸ್ವತಿಯು ಗಾಬರಿಯಾದಳು. ಔಷಧವು ಏನೋ ಘಾತಕವಿರಬಹುದೆಂದು ನಂಬಿ ಬಟ್ಟಲನ್ನು ಮುಚ್ಚಿ ಅಲ್ಲಿಯೇ ಇಟ್ಟು ಹಾಲು ತೆಗೆದುಕೊಂಡು ತಂದೆಯವರ ಕೋಣೆಗೆ ಹೋದಳು. ಹೋಗುತ್ತ ಹೋಗುತ್ತ ಬೆಕ್ಕು ಸಾಯುತ್ತಿರುವದನ್ನು ಕಂಡಳು. ತಂದೆಯವರು ಮಲಗಿದ್ದರು; ತಾಯಿಯು ಎಚ್ಚರವಿದ್ದು ಹತ್ತರವೇ ಕುಳಿತಿದ್ದಳು. ತಾಯಿಯ ಮುಂದೆ ಇದನ್ನೆಲ್ಲ ಹೇಳಬೇಕೆಂದು ಮಾಡಿದಳು; ಆದರೆ ಮತ್ತೆ ಯಾವ ಕಾರಣದಿಂದಲೋ ಹೇಳಲೇ ಇಲ್ಲ ತಂದೆಯವರನ್ನು ಎಚ್ಚರಿಸಿ ತುಸು ಹಾಲು ಕುಡಿಸಿದಳು, ಔಷಧವನ್ನು ಮಾತ್ರ ಆಕೆಯು ಎಲ್ಲಿಯೋ ಇಟ್ಟುಬಿಟ್ಟಳು.

ಏನೂ ಸಂಭವಿಸದಂತೆ ಮತ್ತೆ ತಂದೆಯ ಹತ್ತರ ಸ್ವಸ್ಥಚಿತ್ತ ದಿಂದ ಕುಳಿತಳು. ಬರಬರುತ್ತ ಮುಂಬೈಯು ಶಾಂತವಾಗಹತ್ತಿತ ೧೮ ತಾಸುಗಳವರೆಗೆ ಸಪ್ಪಳದ ಧ್ವನಿಗೆ ಬೇಸತ್ತಿದ್ದ ಜನರೆಲ್ಲರ ಶಾಂತತೆಯುಂಟಾದ ಕೂಡಲೇ ನಿದ್ರಾದೇವಿಯನ್ನು ಧ್ಯಾನಿಸಹತ್ತಿದರ ಆಕೆಯಾದರೂ ಜನರು ಬಹಳ ದಣಿದಿರುವರೆಂದು ಕಂಡು ಎಲ್ಲರನ ಚಪ್ಪರಿಸಹತ್ತಿದಳು. ಎಲ್ಲ ಕಡೆಯಲ್ಲಿಯೂ ಶಾಂತತೆಯ ರಾಜ್ಯವೆ ಹಬ್ಬಿತ್ತು

ನಮ್ಮ ಕುಟುಂಬದವರ ಕೂಡ ಮಾತ್ರ ನಿದ್ರಾದೇವಿಯು ಸಂ ಪ್ತಳಾಗಿದ್ದಳು. ಸರಸ್ವತಿಯಾದರೂ ಆಕೆಯನ್ನು ಲೆಕ್ಕಿಸುತ್ತಿದ್ದಿಲ್ಲ ತಂದೆಯ ಶುಶ್ರೂಷೆಯಲ್ಲಿ ತತ್ಪರಳಾಗಿದ್ದ ತನ್ನನ್ನು ನಿದ್ರಾದೇವಿಯ ಸಿಟ್ಟಿನ ಭರದಲ್ಲಿ ಪೀಡಿಸಲಿಕ್ಕೆ ಬಂದಿದ್ದರೆ ಆಕೆಯನ್ನು ಬದೆದ ನಿಶ್ಚೇಷ್ಟಿತಳಾಗಿ ಮಾಡಬೇಕೆಂಬ ಮನೋಧೈರ್ಯದಿಂದಲೇನವ ಸರಸ್ವತಿಯು ಕುಳಿತಿದ್ದಳು. ಕಡೆಗೆ ಗಡಿಯಾರವು ನಿದ್ದೆಯಿಂ ಎದ್ದು ಬಲದಿಂದ ನಾಲ್ಕ ಗಂಟೆಗಳನ್ನು ಹೊಡೆಯಿತು. ತೂಕಡಿ ಯಿಂದ ತಲೆಬಾಗಿಸಿಕೊಂಡು ಕುಳಿತಿದ್ದ ಮನೋರಮಾಬಾಯಿಯ ವರು ಪೂರ್ಣ ಎಚ್ಚತ್ತು ಸಾವರಿಸಿಕೊಂಡು ಕುಳಿತರು. ನಿಮಿಷಾಧ ದಲ್ಲಿಯೇ ಬಾಗಿಲದ ಮೇಲೆ ಸಾವಕಾಶವಾಗಿ ಯಾರೋ ಬಡಿಯುತ್ತಿ ರುವಂತೆ ಸಪ್ಪಳವಾಯಿತು. ಮನೋರಮಾಬಾಯಿಯವರು ಇಷ್ಟ ರಾತ್ರಿಯಲ್ಲಿ ಯಾರು ಬಂದರೆಂದು ಅಂಜುತ್ತಂಜುತ್ತ ಬಾಗಿ ತೆಗೆದರು. ಮಾಧವನು ಮುಂಜಾನೆ ಬರಬಹುದೆಂದು ಅವ ಲ್ಲರ ಎಣಿಕೆ; ಆದರೆ ಬಾಗಿಲ ತೆರೆದ ಕೂಡಲೆ ಮಾಧವನು ಕಾಣಿ ದನು. ಮನೋರಮಾಬಾಯಿಯವರಿಗೆ ಮತ್ತೆ ದುಃಖಾವೇಗವು ಬಂ ತು. ಹೀಗೆ ಒಮ್ಮೆಲೇ ತಾಯಿಯು ಅಳುವದನ್ನು ಮಂಚದ ಮೇ ಸರಸ್ವತಿಯು ಏಕಾಗ್ರಚಿತ್ತದಿಂದ ಚಿಂತಾಕುಲಳಾಗಿ ಯಾರದೊ

ಹತ್ತಿರ ಕುಳಿತಿರುವದನ್ನೂ ಕಂಡು ಆತನೂ ಸಹ ಗಾಬರಿಯಾದನು. ತಾಯಿಯನ್ನು ತಬ್ಬಿಕೊಂಡು ಎಬ್ಬಿಸುತ್ತ "ಇದೇನು ಗೊಂದಲ?" ಎಂದು ಕೇಳಿದನು.

ಆರನೇ ಪರಿಚ್ಛೇದ.

ಭ್ರಮ-ನಿರಸನ.

ಶ್ರೀನಿವಾಸರಾಯರು ಒಮ್ಮೆಲೇ ಮರಣೋನ್ಮುಖರಾಗಿ ಹಾಸಿಗೆಯನ್ನು ಹಿಡಿಯುವಷ್ಟು ಕಾರಣವೇನೆಂಬದು ತಿಳಿಯದೆ ನಮ್ಮ ಪ್ರಿಯವಾಚಕರು ದಿಗಿಲುಗೊಂಡಿರಬಹುದು. ಆದ್ದರಿಂದ ಮೊದಲು ಅವರ ಬೇನೆಯ ಕಾರಣವನ್ನು ಹೇಳಿ ಮುಂದಿನ ಕಥಾ-ಭಾಗಕ್ಕೆ ಹತ್ತಬೇಕೆಂದು ಯೋಚಿಸಿದ್ದೇವೆ.

ಸರಸ್ವತಿಗೂ, ಮನೋರಮಾಬಾಯಿಯವರಿಗೂ ಇದರ ಕಾರಣವು ಶ್ರೀನಿವಾಸರಾಯರು ತಮ್ಮ ಪರಮ ಮಿತ್ರರೆಂದು ಹೇಳಿಕೊಂಡ ವೈದ್ಯರ ಮುಖದಿಂದ ತಿಳಿದೇ ಇರುವದು.

ಮುಂಬಾಪುರದಲ್ಲಿ ಕಬ್ಬಿಣ ಕಾರಖಾನೆಯನ್ನು ನಡೆಸುತ್ತಿದ್ದ 'ಟಾಟಾ ಮತ್ತು ಕಂಪನಿ,' ಎಂಬವರ ಕಚೇರಿಯಲ್ಲಿ ಶ್ರೀನಿವಾಸರಾಯರು ತಿಂಗಳೊಂದಕ್ಕೆ ಎರಡುನೂರು ರೂಪಾಯಿ ಸಂಬಳದ ಮೇಲೆ ಕೆಲಸ ಮಾಡುತ್ತಿದ್ದರು. ಶ್ರೀನಿವಾಸರಾಯರು ಎಲ್. ಸೀ. ಈ. ಎಂಬ ಪರೀಕ್ಷೆಯಲ್ಲಿ ಮೊದಲನೇ ತರಗತಿಯಲ್ಲಿ ಉತ್ತೀರ್ಣರಾದ್ದರಿಂದ ಮೇಲೆ ಹೇಳಿದ್ದ ಪ್ರಸಿದ್ಧ ಕಂಪನಿಯವರು ಒಮ್ಮೆಲೇ ಇವರನ್ನು ೧೫೦ ರೂಪಾಯಿ ಸಂಬಳದ ಮೇಲೆ ತಮ್ಮಲ್ಲಿ ಇಟ್ಟುಕೊಂಡಿದ್ದರು. ಮುಂದೆ ಇವರ ಕಾರ್ಯದಕ್ಷತೆಯನ್ನೂ, ಜಾಣತನವನ್ನೂ ನೋಡಿ ಕಂಪನಿಯವರು ಇವರ ಸಂಬಳವನ್ನು ಎರಡು ನೂರು

ರೂಪಾಯಿವರೆಗೆ ಹೆಚ್ಚಿಸಿದ್ದಲ್ಲದೆ ಮತ್ತೆ ಕೆಲವು ಕಾರ್ಯಗಳನ್ನು ಮಾಡಿಸಿಕೊಂಡು ಮೇಲಿಂದ ಮೇಲೆ 'ಇನಾಮು' ಎಂದು ಎಷ್ಟೋ ಹಣವನ್ನು ಕೊಡುತ್ತಿದ್ದರು. ಕಂಪನಿಯವರ ವಿಶ್ವಾಸವು ಶ್ರೀನಿವಾಸ ರಾಯರಮೇಲೆ ದಿನೇದಿನೇ ಬೆಳೆಯಹತ್ತಿತು ಶ್ರೀನಿವಾಸರಾಯರಿಗೆ ಸ್ಥಾನಿಕ ಆದಾಯವಿಲ್ಲದ್ದರಿಂದ ಕೂಡಿಸಿದ ಹಣವನ್ನೆಲ್ಲ '**ಮುಂಬ ಯಿಯ ವ್ಯಾಪಾರಿಸಂಘ**'ದಲ್ಲಿ ತೊಡಗಿಸಿದ್ದರು. ಹೀಗೆ ಮಾಡಿದ್ದ ರಿಂದ ಅವರಿಗೆ ವ್ಯಾಪಾರದ ಲಾಭವೆಂದು ವರ್ಷಕ್ಕೆ ನೂರಾರು ರೂಪಾಯಿಗಳು ಬರುತ್ತಿದ್ದವು ಮುಂದೆ ಚಾಕರಿಯ ಬೇಸರಿ ಕೆಯು ಬಂದ ಮೇಲೆ ಸಂಘದ ತಮ್ಮ ಪಾಲುಗಳನ್ನು (Shares) ಮಾರಿ, ಬಂದ ದುಡ್ಡಿನಿಂದ ಹೊಲಮನೆಗಳನ್ನು ಕೊಂಡು ಯಾವದಾದ ರೂ ಒಂದು ಹಳ್ಳಿಯಲ್ಲಿ ಸುಖದಿಂದ ಕಾಲಕಳೆಯಬೇಕೆಂದು ಯೋಚಿ ಸಿದ್ದರು. ಮನುಷ್ಯನ ಇಚ್ಛೆಯೊಂದು ದೇವರು ಮಾಡುವದೊಂದು!!

ಶ್ರೀನಿವಾಸರಾಯರು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಂದಿ ನಿಂದ ಅಲ್ಲಿಯೇ ಅಚ್ಯುತರಾಯನೆಂಬ ಒಬ್ಬ ಪ್ರತಿಸ್ಪರ್ಧಿಯು ಉದ ಯನಾಗಹತ್ತಿದ್ದನು ಅಚ್ಯುತರಾಯನು ಶ್ರೀನಿವಾಸರಾಯರ ಏಳ್ಗೆ ಯನ್ನು ನೋಡಿ ಅವರನ್ನು ಬಹಳ ದ್ವೇಷಿಸುತ್ತಿದ್ದನು. ಇವರ ಏಳ್ಗೆಗೆ ಆತನು ಹಲ್ಲುಕಚ್ಚುತ್ತಿದ್ದನು; ಕಂಪನಿಯವರು ಶ್ರೀನಿವಾಸರಾಯ ರನ್ನು ಇಷ್ಟು ಪ್ರೀತಿಸುತ್ತಿದ್ದದ್ದನ್ನು ಕಂಡು ಆತನು ಮತ್ಸರ ತಾಳಿ ದ್ದನು. ಆತನಾದರೂ ಶ್ರೀನಿವಾಸರಾಯನಷ್ಟೇ ಕಲಿತವನಿದ್ದನು. ಆದರೆ ಆತನು ಮಹಾಕಾರಸ್ಥಾನಿಯು. ಯಜಮಾನರ ಸೇವೆಯನ್ನು ವಿಶ್ವಾಸ ದಿಂದ ಮಾಡದೆ ಕಪಟನಾಟಕದಿಂದ ಕಂಪನಿಯ ದುಡ್ಡು ಎತ್ತಿ ಹಾಕಿ ಶ್ರೀಮಂತನಾಗಬೇಕೆಂಬದೇ ಆತನ **ರಾಕ್ಷಸೀಮಹತ್ವಾ ಕಾಂಕ್ಷೆಯು.** ತಾನು ಕಂಪನಿಯಲ್ಲಿ ಶ್ರೀನಿವಾಸರಾಯರಿಗಿಂತ ಹೆಚ್ಚು ವರ್ಷ ದುಡಿದದ್ದದರಿಂದ ಅವರು ಈಗಿದ್ದ ಸ್ಥಳಕ್ಕೆ ತಾನು

ಯೋಗ್ಯನಿದ್ದು ಕಂಪನಿಯವರು ಆ ಸ್ಥಳವನ್ನು ಶ್ರೀನಿವಾಸರಾಯ ರಿಗೆ ಕೊಟ್ಟದ್ದರಿಂದ ಆತನ ಮತ್ಸರವು ಈಗೀಗ ಬಹಳೇ ಹೆಚ್ಚಿತ್ತು. ಕಂಪನಿಯೊಳಗಿಂದ ಈ ಮನುಷ್ಯನನ್ನು ಹೊರಗೆಡವದೆ ತನ್ನ ಏಳ್ಗೆಗೆ ಆಸ್ಪದವಿಲ್ಲೆಂದು ಆತನು ಈಗ ಪೂರ್ಣವಾಗಿ ಮನಗಂಡಿ ದ್ದನು. ಅದಕ್ಕಾಗಿ ಆತನು ಎಷ್ಟೋ ಸುಳ್ಳು ಸುದ್ದಿಯನ್ನು ಹುಟ್ಟಿಸಿ ಶ್ರೀನಿವಾಸರಾಯರ ವಿಷಯಕ್ಕೆ ಕಂಪನಿಯವರ ಮನಸ್ಸು ಕಲುಷಿ ತವಾಗುವಂತೆ ಮಾಡಲು ಯತ್ನಿಸುತ್ತಿದ್ದನು. ಆದರೆ ಪ್ರತಿಸಾರೆ ಆತನ ಪ್ರಯತ್ನವು ನಿಷ್ಫಲವಾಗಿದ್ದಲ್ಲದೆ ಪ್ರತಿಸಾರೆಯು ತಾನೇ ಅವಿಶ್ವಾಸುಕ ನೆಂದು ನಿರ್ಣಯಿಸಲ್ಪಡುತ್ತೇನೆಂದು ಕಂಡದ್ದರಿಂದಂತೂ ಆತನು ಭಯಂಕರ ಕೃತ್ಯಕ್ಕೆ ಎದುರಾಗಿದ್ದನು.

ಶ್ರೀನಿವಾಸರಾಯರು ನಿಶ್ಚಿಂತರಾಗಿ ಮನೆಯನ್ನು ಪ್ರವೇಶಿ ಸಿದ ದಿವಸ ಮುಂಜಾನೆ ೧೦ ಗಂಟೆಗೆ ಊಟಮಾಡಿ ತಮ್ಮ ಕಾರ್ಯಾ ಲಯಕ್ಕೆ ಹೋಗಿ ತಮ್ಮ ಕಾರ್ಯದಲ್ಲಿ ತೊಡಗಿದರು ಅಚ್ಯುತರಾ ಯನು ಶೀನಿವಾಸರಾಯರು ಬಂದರೆಂದು ಕಂಡು ನಮ್ರತೆಯಿಂದ ಅವ ರಿಗೆ ತಲೆಬಾಗಿ ನಮಸ್ಕರಿಸಿದನು. ಶ್ರೀನಿವಾಸರಾಯರು ಅವನಿಗೆ ಕೂಡ್ರಲಿಕ್ಕೆ ಮತ್ತೊಂದು ಕುರ್ಚಿಯನ್ನು ಕೊಟ್ಟು ತುಸು ಹೊತ್ತು ಯುದ್ಧದ ಸುದ್ದಿಗಳನ್ನು ಮಾತಾಡುತ್ತ ಕುಳಿತರು. ಅಚ್ಯುತರಾಯನು ಅತಿ ನೀಚನೆಂದು ಅವರಿಗೆ ಎಂದೂ ತೋರಿದ್ದಿಲ್ಲ, ಆತನೂ ಸಜ್ಜನನೇ ಎಂದು ಶ್ರೀನಿವಾಸರಾಯರು ತಿಳಕೊಂಡಿದ್ದರು.

ಸಜ್ಜನರು ಸರ್ವಜಗತ್ತು ತಮ್ಮಂತೆಯೇ ಸುಗುಣಪರಿಪೂರಿತ ವಾಗಿರುವದೆಂದು ತಿಳಿಯುತ್ತಾರೆ ದುರ್ಜನರ ಕೆಟ್ಟ ಕೃತಿಗಳ ಅಂತ ರಂಗವು ಸುಜನರ ಅಂತಃಕರಣಕ್ಕೆ ತಿಳಿಯುವಷ್ಟು ಅವರ ಹೃದ ಯವು ಕಠೋರವಾಗಿರುವದಿಲ್ಲ. ಶ್ರೀನಿವಾಸರಾಯರು ಅಚ್ಯುತರಾ ಯನು ಒಳ್ಳೇ ಮನುಷ್ಯನೆಂದು ತಿಳಿದು ಆತನ ಸಂಗಡ ಯಾವಾ

ಗಲೂ ಪ್ರೀತಿಯಿಂದಲೇ ನಡಕೊಳ್ಳುತ್ತಿದ್ದರು. ಅಚ್ಯುತರಾಯನು ಎದ್ದು ಹೋದನಂತರ ಶ್ರೀನಿವಾಸರಾಯರು ಮತ್ತೆ ತಮ್ಮ ಕೆಲಸದಲ್ಲಿ ತೊಡಗಿರಲು ಸಿಪಾಯಿಯು ಶ್ರೀನಿವಾಸರಾಯರ ಕೈಯಲ್ಲಿ ಒಂದು ಪತ್ರವನ್ನು ತಂದುಕೊಟ್ಟನು ಲಗಬಗೆಯಿಂದ ಮೇಲ್ಮಾಗದವನ್ನು ಹರಿದು ಪತ್ರವನ್ನು ಓದಹತ್ತಿದರು. ವಾಚಕರಿಗೆ ಅದರ ರಹಸ್ಯವು ತಿಳಿಯಬೇಕೆಂದು ಅದರ ಸಾರಾಂಶವನ್ನೇ ಇಲ್ಲಿ ಕೊಡುತ್ತೇವೆ.

‘ ಹೆಡ್ ಆಫೀಸ ’ ಲಂಡನ್. | " ವ್ಯಾಪಾರಿ ಸಂಘ ಆಫೀಸ "
೫೭ ಫೋರ್ಟರೋಡ
ಮುಂಬಯಿ.

ಮಹನೀಯರೇ,

ಹೆಡ್ ಆಫೀಸಿನಿಂದ ಇದೇ ಈಗ ತಾರುಬಂದಿರುವದು. ಮಾಲುಗಳನ್ನು ತುಂಬಿಕೊಂಡು ಕೆಲವು ಹಡಗಗಳು ಆಫ್ರಿಕೆಗೂ, ಕೆಲವು ಹಿಂದುಸ್ತಾನಕ್ಕೂ ಬರುತ್ತಿರಲು ಜರ್ಮನರ ವಿಮಾನದಲ್ಲಿಯ ತೋಫಿನ ಗುಂಡಿಗೆ ಬಲಿಯಾಗಿ ಎಲ್ಲ ಹಡಗಗಳು ಜಲಸಮಾಧಿಯನ್ನು ಹೊಂದಿದವು. ಆದ್ದರಿಂದ ಸಂಘವು ಇಂದು ಮುರಿಯಲ್ಪಟ್ಟು ಪಾಲುಗಾರರ ಹಣವನ್ನು ಸಹ ಕೊಡಲು ನಾವು ಈಗ ಶಕ್ತರಿಲ್ಲೆಂದು ತಿಳಿಸಲು ಪರಾಕಷ್ಟದ ದುಃಖವಾಗುತ್ತದೆ.

ಮ್ಯಾನೇಜರ.

ಪತ್ರವನ್ನು ಓದಿ, ತಮ್ಮ ಜೀವಿತ ಸರ್ವಸ್ವವೂ, ಇಂದು ಜಲಸಮಾಧಿಯನ್ನು ಹೊಂದಿತೆಂದು ಕಂಡು ಶ್ರೀನಿವಾಸರಾಯರ ತಲೆತಿರುಗಿದಂತಾಗಿ ಎದೆಎದೆ ಬಡಕೊಂಡು ಒದರುತ್ತ ಕುರ್ಚಿಯ ಮೇಲಿಂದ ನಿಶ್ಚೇಷ್ಟಿತರಾಗಿ ದೊಪ್ಪನೆ ಕೆಳಗೆ ಬಿದ್ದರು, ಅವರ ಆಕ್ರೋಶವನ್ನು ಕೇಳಿ ಹತ್ತರದ ಕೋಣೆಯಲ್ಲಿಯೇ ಬರೆಯುತ್ತ ಕುಳಿತಿದ್ದ ಅಚ್ಯುತರಾಯನು ಓಡಿಬಂದು ಇದೇನು ಗದ್ದಲವೆಂದು ನೋಡಿದನು. ಶ್ರೀನಿವಾಸರಾಯರ ನೆತ್ತಿಗೆ ವಿದ್ಯುಲ್ಲತೆಯಿಂದ ತಿರಗುವ ಬೀಸಣಿಕೆಯು

(Electric Fan) ಭಯಂಕರ ಆಘಾತವಾಗಿ ಅದರೊಳಗಿಂದ ಅತುಲ ರಕ್ತವು ಹರಿಯುತ್ತಿದ್ದದ್ದು ಆತನಿಗೆ ಕಾಣಿಸಿತು. ಕೂಡಲೇ ಸಿಪಾಯಿಯನ್ನು ಕರೆದು ವೈದ್ಯನಾದ ತನ್ನ ಒಬ್ಬ ಮಿತ್ರನ ಕಡೆಗೆ ಚೀಟಿಯನ್ನು ಬರೆದು ಕಳಿಸಿದನು, ವೈದ್ಯರು ಕೂಡಲೇ ಬಂದರು. ಇಷ್ಟರಲ್ಲಿ ಅಚ್ಯುತರಾಯನು ಮೇಜಿನ ಮೇಲೆ ಬಿದ್ದಿದ್ದ ಸಂಘದವರ ಕಾಗದವನ್ನು ಓದುತ್ತಿದ್ದನು, ವೈದ್ಯರು ಬಂದ ಮೇಲೆ ಅವರಿಗೆ ಸಂಘದ ಸುದ್ದಿಯನ್ನು ಹೇಳಿ ಅದಕ್ಕಾಗಿ ಅವರು ಎದೆಯೊಡಕೊಂಡಿರಬಹುದೆಂದು ಸೂಚಿಸಿದನು ವೈದ್ಯರು ಗಾಯವನ್ನು ಕಟ್ಟಿ ಔಷಧೋಪಚಾರಗಳನ್ನು ಮಾಡಿ ಸಿಪಾಯಿಯ ಸಹಾಯದಿಂದ ಮಂಚದ ಮೇಲೆ ಮಲಗಿಸಿದರು, ವೈದ್ಯರು ತುಸು ಹೊತ್ತು ಅಚ್ಯುತರಾಯನ ಸಂಗಡ ಮಾತಾಡುತ್ತ ಕುಳಿತರು, “ ಗಾಯವು ಬಹಳವಾಗಿರುವದು ಮೇಲಾಗಿ ಅಂತರ್ವೇದನೆ, ಇದರೊಳಗಿಂದ ಶ್ರೀನಿವಾಸರಾಯರು ಉಳಿಯುವದು ದುರ್ಲಭವೇ ” ಎಂದು ಹೇಳಿದರು. ಅಚ್ಯುತರಾಯನಿಗೂ ಅದೇ ಬೇಕಾಗಿತ್ತು. ಇನ್ನು ನೀವೇ ಹೋಗಿ ಶ್ರೀನಿವಾಸರಾಯರನ್ನು ಅವರ ಮನೆಗೆ ಒಯ್ದು ಕುಟುಂಬದವರಿಗೆ ಎಲ್ಲವನ್ನು ಹೇಳಿ ಔಷಧಕೊಟ್ಟಂತೆ ತೋರಿಸಿ ಬನ್ನಿರೆಂದು ಹೇಳಿದನು ಮೊದಲು ವೈದ್ಯರು ಒಲ್ಲೆಂದು-ಅನ್ನಹತ್ತಿದರು ಕಡೆಗೆ ಅಚ್ಯುತರಾಯನು ೧೦೦ ರೂಪಾಯಿ ನೋಟನ್ನು ತೆಗೆದು ಅವರ ಕೈಯ್ಯಲ್ಲಿಟ್ಟು ಇನ್ನಾದರೂ ಹೋಗಿರೆಂದು ಹೇಳಿದನು, ತಾವು ಕೆಲಸ ಮಾಡಹತ್ತಿದಿಂದ ಇನ್ನುವರೆಗೆ ಇಷ್ಟು ರೂಪಾಯಿಗಳನ್ನು ತಮಗೆ ಯಾರೂ ಕೊಟ್ಟದ್ದಿಲ್ಲವಾದ್ದರಿಂದ ಹಿಗ್ಗಿ ಲಗುಬಗೆಯಿಂದ ಗಾಡಿಯನ್ನು ತರಿಸಿ ಶ್ರೀನಿವಾಸರಾಯರನ್ನು ತಕ್ಕೊಂಡು ಮನೆಗೆ ಬಂದರು ಎರಡು ಗಂಟೆಯ ಸುಮಾರಕ್ಕೆ ಸರಸ್ವತಿಯು ಪತ್ರವನ್ನು ಓದುತ್ತ ನಿಂತಿರಲು ಆಕೆಯು ತಂದೆಯನ್ನು ಹೇಗೆ ಆಕಸ್ಮಿಕವಾಗಿ ನೋಡಿದಳೆಂಬದೂ ಮನೋರಮಾಬಾಯಿಯವರ ಸ್ಥಿತಿಯು ಹೇಗೆ ಆಯಿತೆಂಬದೂ ವಾಚಕರಿಗೆ ಈ ಮೊದಲೇ

ಹೇಳಿರುವೆವು. ಮುಂದೆ ವೈದ್ಯರು ಔಷಧವನ್ನು ಕೊಟ್ಟು ಶ್ರೀನಿವಾಸ ರಾಯರ ಮನೆಯನ್ನು ಬಿಟ್ಟವರೇ ಅಚ್ಯುತರಾಯನ ಹತ್ತರ ಬಂದರು. ತನ್ನ ಪ್ರತಿಸ್ಪರ್ಧಿಯನ್ನು ಪೃಥ್ವಿಯ ಮೇಲೆ ಇರಗೊಡದಿರುವದಕ್ಕೆ ಇದು ಒಳ್ಳೇ ಸಮಯವೆಂದು ತಿಳಿದು ಔಷಧದಲ್ಲಿ ವಿಷವನ್ನು ಕೂಡಿಸಿ ತೀವ್ರವೇ ಮರಣಕ್ಕೆ ಗುರಿಯಾಗುವ ಹಾಗೆ ಮಾಡಬೇಕೆಂದು ಅಚ್ಯುತ ರಾಯನು ವೈದ್ಯರಿಗೆ ಹೇಳಿ ಮತ್ತೆ ೫೦೦ ರೂಪಾಯಿಗಳನ್ನು ಕೊಟ್ಟು ಅವರ ಮನೆಯಲ್ಲಿ ಯಾರು ಯಾರು ಇದ್ದರೆಂದು ಕೇಳಿಕೊಂಡು ವೈದ್ಯರಿಗೆ ಹೋಗಲು ಅಪ್ಪಣೆಯನ್ನಿತ್ತನು, ಮುಂದೆ ಆ ಔಷಧವು ಹೇಗೆ ಸರಸ್ವತಿಗೆ ಗೊತ್ತಾಯಿತೆಂಬದೂ, ವೈದ್ಯರು ಔಷಧ ಕೊಟ್ಟು ಮನೆಗೆ ಹೋಗುತ್ತಿರಲು ಅವರ ಮುಖಚರ್ಯದಲ್ಲಿ ಆದ ವ್ಯತ್ಯಯವನ್ನು ನೋಡಿ ಸಂಶಯಪಟ್ಟ ಸರಸ್ವತಿಯು ಆ ಔಷಧವನ್ನು ಬೆಕ್ಕಿನ ಮೇಲೆ ಹೇಗೆ ಪ್ರಯೋಗಿಸಿ ನೋಡಿದಿಳೆಂಬದು ನಮಗೆ ಈ ಮೊದಲೇ ಗೊತ್ತಿ ರುವದು. ಇರಲಿ. ಇತ್ತ ಮಾಧವನು ಬಂದ ತುಸು ಹೊತ್ತಿನಲ್ಲಿಯೇ ಶ್ರೀನಿವಾಸರಾಯರಿಗೆ ಬಹಳೇ ಜ್ವರ ಬಂದು, ತಲೆನೋವು ತಾಳಲಾರದೆ ಅವರು ಒದರಹತ್ತಿದರು. ಮಾಧವನು ತಾಯಿಯನ್ನು ಎಚ್ಚರಿಸಿ, ತಂದೆಯ ಹತ್ತರ ಹೋಗಿ ಕುಳಿತು "ಅಪ್ಪಾ ನಿಮಗೇನಾಗುವದು?" ಎಂದು ಕೇಳಿದನು. ಶ್ರೀನಿವಾಸರಾಯರು ತಾವು ಇನ್ನು ಈ ಅಂತ ವೇದಗಳೊಳಗಿಂದಲೂ, ತಲೆ ನೋವಿನೊಳಗಿಂದಲೂ ಜೀವದಿಂದ ಉಳಿಯುವದಿಲ್ಲೆಂದು ಕಂಡು ಆದ ಸುದ್ದಿಯನ್ನೆಲ್ಲ ತಮ್ಮ ಕುಟುಂಬಕ್ಕೆ ಹೇಳಿ ಎಲ್ಲರ ಕ್ಷಮೆಯನ್ನು ಬೇಡಿಕೊಂಡು, ಎಲ್ಲರಿಂದಲೂ ತಮ್ಮ ಕಡೆಯ ಅಪ್ಪಣೆಯನ್ನು ತೆಗೆದುಕೊಳ್ಳಬೇಕೆಂದೂ ಮಾತಾಡಲಿಕ್ಕೆ ಯತ್ನಿಸಹತ್ತಿದರು. "ಇನ್ನು ಉಳಿದವರನ್ನಾದರೂ ಸುಖಿಯಾಗಿಡು" ಎಂದು ಪರಮೇಶ್ವರನಿಗೆ ಹೇಳುವದಕ್ಕೆ ತಮ್ಮ ಕೈಯ್ಯಗಳನ್ನು ಎತ್ತಿ ಊರ್ಧ್ವದೃಷ್ಟಿಯಿಂದ ಒಮ್ಮೆ ಆಕಾಶದ ಕಡೆಗೆ ನೋಡಿ ಇಹಲೋ ಕದ ಯಾತ್ರೆಯನ್ನು ಮುಗಿಸಬೇಕಂತಲೇ ಎಲ್ಲರನ್ನು ತಮ್ಮ ಹತ್ತರ

ಕರೆದು ಅತಿ ಪ್ರಯಾಸದಿಂದ, ಮೇಲಿಂದ ಮೇಲೆ ಗಂಟಲವನ್ನಿರಿಸಿ ಕೊಳ್ಳುತ್ತ, ನಿಶ್ಚೇಷ್ಟಿತರಾಗುತ್ತ, ವ್ಯಾಪಾರ ಸಂಘವು ಮುಣುಗಿದ್ದರಿಂದ ಒಮ್ಮೆಲೆ ತಮ್ಮ ಎದೆಯೊಡೆದು ಭಾಸವು ತಪ್ಪಿ ಕಾರ್ಖಾನೆಯ ಮೇಲಿಂದ ಬಿದ್ದದಕ್ಕೆ ತಮಗೆ ಎಷ್ಟು ಪೆಟ್ಟು ಹತ್ತಿರುವದೆಂದು ಹೇಳಿ ತಾವು ಇನ್ನು ಬಹಳ ಹೊತ್ತು ಬದುಕಲಾರವೆಂದೂ ಸಹ ಹೇಳಿದರು. ಅವರು ಅಂದದ್ದು " ಮಾಧವಾ ನಿನ್ನ ವಿದ್ಯೆಯನ್ನು ಪೂರ್ಣಮಾಡು ವಷ್ಟು ನಾನು ಶಕ್ತನಾಗಲಿಲ್ಲ. ಅರ್ಧಹಾದಿಯಿಂದಲೇ ನಾನು ನನ್ನ ಕರ್ತವ್ಯದಿಂದ ಪರಾನ್ಮುಖನಾಗುತ್ತೇನೆ ಇದಕ್ಕಾಗಿ ನನ್ನನ್ನು ಕ್ಷಮಿಸಿ, ಸಮಾಧಾನದಿಂದ ನನಗೆ ಪರಲೋಕಕ್ಕೆ ಹೋಗಗೊಡು, ನೀನು ಈ ವರ್ಷ ಬಿ ಎ ಪರೀಕ್ಷೆಗೆ ಕೂಡುವಿ, ಮುಂದೆ ಎಲ್ಲಿ ಯಾದರೂ ವಿಶ್ವಾಸದಿಂದ ಚಾಕರಿಮಾಡಿ ನಿನ್ನ ತಾಯಿಯನ್ನೂ ನಿನ್ನ ತಂಗಿಯನ್ನೂ ರಕ್ಷಿಸು " ಸರಸ್ವತಿಯೂ, ಮನೋರಮಾ ಬಾಯಿಯವರೂ, ದೊಡ್ಡ ಧ್ವನಿಯಿಂದ ಎಗೆ ಎದೆ ಬಡಕೊಂಡು ಅಳಹತ್ತಿದರು, ಶ್ರೀನಿವಾಸರಾಯರು ಸುಮ್ಮನಾಗಿರಿ; ಅಳಬೇಡಿ ರೆಂದು ಕೈಸೊನ್ನೆಯಿಂದ ಹೇಳಿ ಮುಂದೆ ಅಂದದ್ದು " ಸರಸ್ವತಿ-ವಿದ್ಯಾಧರನು ಇರುವನು, ನೀನು ಏನೂ ಚಿಂತಿಸಬೇಡ, ನಿನ್ನ ವಿಷಯಕ್ಕೆ ಆತನು ಎಲ್ಲ ವ್ಯವಸ್ಥೆಯನ್ನು ಮಾಡುವನು." ಮಾಧವನ ಕಡೆಗೆ ತಿರುಗಿ " ಮಾದವಾ ಸಮಾಜ-ಸೇವೆಗೆ-ನಿನ್ನಿಂದಾದಷ್ಟು ಸಹಾಯಮಾಡ., ದೇವರು ಸಮಾಜರೂಪಿ-ಯಾಗಿ-ದ್ದಾನೆಂಬುದನ್ನು ಮರೆಯಬೇಡ, ಸಮಾಜಸೇವೆಯೇ ದೇವರ ಸೇವೆಯು; ಸಮಾಜಸೇವೆಯೇ ಮಾತಾ-ಪಿತೃ ಸೇವೆಯು, " ಶ್ರೀನಿವಾಸರಾಯರಿಗೆ ಬಹಳ ವೇದನೆಗಳಾಗಹತ್ತಿ ಚಡಪಡಿಸಹತ್ತಿದರು. ಸರಸ್ವತಿಯು ಖಿನ್ನಮುಖಿಯಾಗಿ ಅಳುತ್ತಲೇ ಎದ್ದು ತಂದೆಯವರ ಕಾಲುಗಳನ್ನು ಒತ್ತಹತ್ತಿದಳು; ಮಾಧವನು ತುಸು ಹಾಲು ಹಾಕಹತ್ತಿದನು, ಮನೋರಮಾಬಾಯಿಯವರು ಪತಿಯ ತಲೆಗಿಂಬಿನ ಹತ್ತರ ಗಾಯವನ್ನು ನೋಡುತ್ತ

ಕಣ್ಣೀರಿನಿಂದ ಗಾಯವನ್ನು ತೊಳೆಯುಹತ್ತಿದ್ದರು; ತುಸು ಸಮಾಧಾನ ವೆನಿಸಿದ ಮೇಲೆ ಶ್ರೀನಿವಾಸರಾಯರು:—" ಮಾಧವಾ ಇನ್ನು ನಾನು ನಿಮಿಷಾರ್ಧ-ನಿಮಿಷದವನು; ನಾನು ಇನ್ನು ಬದಕುವದಿಲ್ಲ; ಈ ವೇದನೆಗಳನ್ನು ನಾನು ಇನ್ನು ಸಹಿಸಲಾರೆನು, ನಾನು ಹೇಳಿದ್ದನ್ನು ಮರೆಯಬೇಡ ನೆನಪಿನಲ್ಲಿಟ್ಟುಕೊಂಡು ನನ್ನ ಆಜ್ಞೆಯನ್ನು ಪಾಲಿಸಿ, ನಿನ್ನ ತಾಯಿಗೆ ಸುಖವನ್ನಿತ್ತು, ದೇಶಸೇವೆಯನ್ನು ಮಾಡಿ, ನಿನ್ನ ಮಾತೃಭೂಮಿ ಋಣದೊಳಗಿಂದ ಮುಕ್ತನಾಗು, ನಾನು ಮಾತ್ರ ಹುಟ್ಟಿ ವ್ಯರ್ಥವಾಯಿತು, ಸಮಾಜಕ್ಕೂ, ದೇಶಕ್ಕೂ ನನ್ನಿಂದ ಎಳ್ಳಷ್ಟಾದರೂ ಸಹಾಯವಾಗಲಿಲ್ಲ, ಆದ್ದರಿಂದ ನಾನು ಮಾಡಬೇಕಾಗಿದ್ದ ಭಾಗವನ್ನೂ ನಿನ್ನ ಭಾಗವನ್ನೂ ನೀನೇ ಮಾಡಿ ಇಬ್ಬರನ್ನು ಆ ಋಣದಿಂದ ಮುಕ್ತರನ್ನಾಗಿ ಮಾಡು, ಒಮ್ಮೆಲೇ-ನನ್ನ ಹಣವೆಲ್ಲ-ಹೀಗೆ-ಜಲಸಮಾಧಿಯನ್ನು-ಹೊಂದಿದ ಮೇಲೆ ಇನ್ನು ನನ್ನ ಮಕ್ಕಳ ಗತಿಯೇನೆಂದು-ನನಗೆ-ಬಹಳೇ-ತಲೆ ತಿರುಗಿ-ಬಿದ್ದು ಪೆಟ್ಟು ಹಚ್ಚಿಕೊಂಡು ಈ ಅವಸ್ಥೆಯಿಂದ ಮರಣಹೊಂದುವೆನು, ದೇವರ ಇಚ್ಛೆಯು!! " ತುಸು ಹೊತ್ತು ಎಲ್ಲಕಡೆಗೆ ನೋಡಿ ಮತ್ತೆ ಮಾತಾಡಹತ್ತಿದರು. " ಈ ನನ್ನ ಪ್ರಿಯ ಸರಸ್ವತಿಯ ವಿವಾಹವನ್ನೂ ನಾನು ಮಾಡಲಿಲ್ಲ, ಅದನ್ನೂ ನಿನ್ನ ಮೇಲೆಯೇ ಬಿಟ್ಟಿದ್ದೇನೆ, ಆಕೆಗೆ ಪತಿಯನ್ನು ತೋರಿಸಿ ಆಕೆಯ ಇಚ್ಛೆಯಿಂದಲೂ ನಿನ್ನ ತಾಯಿಯ ಇಚ್ಛೆಯಿಂದಲೂ ಸರಿದೋರುವಂಥ ಗಂಡನನ್ನು ಹುಡುಕು, " ಸರಸ್ವತಿಯ ಕಡೆಗೆ ನೋಡಿ " ಸರಸ್ವತೀ, ಅತಿಶ್ರಮ-ಪಟ್ಟು ನಾನು ಇಲ್ಲಿಯ ವರೆಗೆ ನಿನ್ನನ್ನು ಜೋಕೆಮಾಡಿ ವಿದ್ಯೆ ಕಲಿಸಿದ್ದೇನೆ, ವಿವಾಹನಾದ ಮೇಲೆ ಪತಿಯ ಸಂಗಡ ಚನ್ನಾಗಿ ನಡೆದು ಆತನ ಕಾರ್ಯದಲ್ಲಿ ಯಾವಾಗಲೂ ಸಹಾಯಮಾಡಿ, ಸಮಾಜ ಕಾರ್ಯವನ್ನು ಮಾಡಿ ನಿನ್ನ ಭಗಿನಿಯರನ್ನು ಉದ್ಧರಿಸಿ ನಿನ್ನ ಜೀವಿತ್ವವನ್ನು ಧನ್ಯವಾಗಿ ಮಾಡಿಕೋ; ಇಷ್ಟೇ ನನ್ನ ಹೇಳುವಿಕೆಯು; ಇದೇ ನನ್ನ ಆಜ್ಞೆಯು. " ಹೆಂಡತಿಯ ಕಡೆಗೆ ತಿರುವಿ " ಪ್ರಿಯಳೇ,

ನಿನ್ನ ಜೀವಕ್ಕಿಂತಲೂ-ಹೆಚ್ಚಿಗೆ-ನನ್ನನ್ನು ಪ್ರೀತಿಸಿ-ಇಷ್ಟು-ದಿವಸದ ವರೆಗೆ-ಸತ್ಶೀಲಳಾಗಿ-ನನ್ನ ಸೇವೆಯಲ್ಲಿ-ತತ್ಪರಳಾಗಿ-ನನ್ನ ಕಾರ್ಯದಲ್ಲಿ ಯಾವಾಗಲೂ-ಸಹಾಯಕಳಾಗಿದ್ದಿ; ಅದರ ಪ್ರತ್ಯು-ಪಕಾರವನ್ನು-ಮಾಡದೆ, ನಿನಗೆ ಎಳ್ಳಷ್ಟು-ಸುಖೋಪಭೋಗವನ್ನು ಕೊಡದೆ ಇಂದು ನಿನ್ನನ್ನು ಹೀಗೆಯೇ ಬಿಟ್ಟು ಹೊರಟೆನು, ಅದಕ್ಕಾಗಿ ನೀನೂ ನನ್ನ ಮೇಲೆ ಸಿಟ್ಟಿಗೇಳಬೇಡ, ಇನ್ನು ನೀನಾದರೂ ಈಶಚಿಂತನೆಯಲ್ಲಿ ಕಾಲುಕಳೆದು ನಿನ್ನಿಂದಾದಷ್ಟು ಸಮಾಜಕ್ಕೆ ಸಹಾಯವನ್ನು ಮಾಡು, ಸಣ್ಣ ಹುಡುಗಿಯರನ್ನು ಕೂಡಿಸಿ ವಿದ್ಯೆ, ಗೃಹಕೃತ್ಯ ಮುಂತಾದದ್ದನ್ನು ಕಲಿಸಿ ಅವರಿಗೆ ಎಲ್ಲತರದ ಉಪಕಾರವನ್ನು ಮಾಡುತ್ತ ಹೋಗು; ಸಮಾಜಸೇವೆಯೇ ನನ್ನ ಸೇವೆಯು, ಇನ್ನು ಹೆಚ್ಚಿಗೇನು ಹೇಳಲಿ; ನೀವೆಲ್ಲರೂ ಸುಖಿಯಾಗಿ ಬಾಳಿರಿ. ನಾನು ಇನ್ನು ಹೋಗಿಬರುತ್ತೇನೆ." ಎಂದು ಹೇಳಿ ಸುಮ್ಮನಾದರು, ಅವರ ವೇದನೆಗಳು ಬಹಳೇ ಹೆಚ್ಚಿದವು; ಮಾಧವನು ವೈದ್ಯನನ್ನು ಕರೆತರುವೆನೆಂದು ಹೇಳಿ ಹೋಗ ಹತ್ತಿದನು. ಶ್ರೀನಿವಾಸರಾಯರು ಕೈಸೊನ್ನೆಯಿಂದ "ಬೇಡ-ಇನ್ನು-ಆ-ತ-ನಲ್ಲಿ-ನನ್ನ-ಉಳಿಸು-ವ ಶಕ್ತಿಯಿಲ್ಲೆ"ಂದು ಹೇಳಿ ತನ್ನ ಹತ್ತಿರವೇ ಎಲ್ಲರಿಗೂ ಕುಳ್ಳಿರಲು ಹೇಳಿದರು. ಮಾಧವನು ಉಪಾಯಗಾಣದೆ ಹತ್ತಿರ ಅಳುತ್ತ ಕುಳಿತನು "ಬಾಳಾ-ಮಾಧವಾ-ಅಳಬೇಡ, ಸರ-ಸ್ವ-ತಿ ಅಳಬೇಡ, ಪ್ರಿಯಳೇ-ಅಳಬೇಡ ನಾನು ಇನ್ನು-ಸುಖರೂಪದಿಂದ ಹೋಗುತ್ತೇನೆ. ನೀವು ಸು-ಖಿ-ಯಾಗಿ...." ಎಂದು ಹೇಳುತ್ತಿರಲು ಶ್ರೀನಿವಾಸರಾಯರ ಪ್ರಾಣೋತ್ಕ್ರಮಣವಾಯಿತು, ಸಹಸ್ರಕರನು ತನ್ನ ಎಲ್ಲ ಕೈಗಳನ್ನು ಚಾಚಿ ಶ್ರೀನಿವಾಸರಾಯರ ಪ್ರಾಣಜ್ಯೋತಿಯನ್ನು ತನ್ನ ಜ್ಯೋತಿಯಲ್ಲಿ ಕೂಡಿಸಿಕೊಂಡು ಆನಂದದಿಂದ ರಥವನ್ನು ಹೊಡೆಯುತ್ತ ಸ್ವರ್ಗಾಭಿಮುಖಿಯಾಗಿ ಶ್ರೀನಿವಾಸರಾಯರ ಆತ್ಮವನ್ನು ಮೇಲಿಂದ ಮೇಲೆ ಮುದ್ದಿಸುತ್ತ ನಡೆದನು.

ಏಳನೇ ಪರಿಚ್ಛೇದ.

ತದನಂತರ!

ಈ ಜಗತ್ತಿನಲ್ಲಿ ಕೆಲವು ವೇಳೆ ದುರ್ಜನರ ಉತ್ಕರ್ಷೆಯೂ ಆಗುವದು, ಆದರೆ ಸಜ್ಜನರು ದುರ್ಜನರು ತರುವ ವಿಘ್ನಗಳಿಗೆ ಅಂಜದೆ, ತಮ್ಮ ಸದಾಚಾರವನ್ನು ಬಿಡದೆ, ತಮ್ಮ ಕರ್ತವ್ಯವನ್ನು ಮಾಡುತ್ತಲೇ ಇರುವರು; ಕಗ್ಗತ್ತಲೆಯನ್ನು ನೂಕುವ ಭಾಸ್ಕರನು ನಭೋಮಂಡಲದಲ್ಲಿ ಮೆರೆಯುವನು; ಸಜ್ಜನರಿಗೆ ನಿಜವಾದ ಸುಖವೂ ಆನಂದವೂ ದೊರಕುವದು. ನಮ್ಮ ಅಚ್ಯುತರಾಯನು ತನ್ನ ಕಂಟಕವು ಇಂದು ಅನಾಯಾಸವಾಗಿ ದೂರಾಯಿತೆಂದು ತಿಳಿದು ಹಿಗ್ಗಿದ್ದನು ಆದರೆ ತುಸು ದಿವಸಗಳಲ್ಲಿಯೇ ತನ್ನ ವೈದ್ಯನು ಶ್ರೀನಿವಾಸರಾಯರ ಮರಣಕೆ ಅಪ್ರತ್ಯಕ್ಷವಾಗಿ ಕಾರಣೀಭೂತನಾಗಿರುವನೆಂದು ನಿರ್ಣಯಿಸಲ್ಪಟ್ಟು ಬಂದಿವಾಸವನ್ನನುಭವಿಸಲು ಒಯ್ಯಲ್ಪಟ್ಟನೆಂದು ಕೇಳಿ ಅಚ್ಯುತರಾಯನಿಗೆ ವಜ್ರಾಘಾತವಾದಂತಾಯಿತು, ಒಂದು ದಿವಸ ಅಚ್ಯುತರಾಯನು ಹತ್ತು ಗಂಟೆಗೆ ಊಟಮಾಡಿ ವೀಳ್ಯವನ್ನು ತಿನ್ನುತ್ತ ಕುಳಿತಿರಲು ವರ್ತಮಾನಪತ್ರವು ಅದೇ ಟಪಾಲಿಗೆ ಬಂದಿತು, ಪತ್ರವನ್ನು ಕೈಯ್ಯಲ್ಲಿ ತೆಗೆದುಕೊಂಡು ಓದಹತ್ತಿದನು. ಬರಬರುತ್ತ ‘ ಎಡಿಟರರು ’ ತಮ್ಮ ಸ್ಫುಟಲೇಖಗಳಲ್ಲಿ ಕೆಳಗೆ ಕೊಟ್ಟಂತೆ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದ್ದರು.

“ಟಾಟಾ ಮತ್ತು ಕಂಪನಿ”ಯಲ್ಲಿ ವಿಶ್ವಾಸುತನದಿಂದ ಕೆಲಸು ಮಾಡಿ ಅವರ ಪೂರ್ಣ ಪ್ರೇಮಕ್ಕೆ ಪಾತ್ರರಾಗಿದ್ದ ಮಹಾಶಯರಾದ ಶ್ರೀನಿವಾಸರಾವ, ಎಲ್. ಸೀ. ಈ. ಇವರು ಮೃತರಾದರೆಂದು ತಿಳಿಸಲು ನಮಗೆ ಅತ್ಯಂತ ವಿಷಾದವೆನಿಸುತ್ತದೆ. ‘ ವ್ಯಾಪಾರಿ ಸಂಘ ’ವು ಮುಳುಗಿದ್ದರಿಂದ ಎದೆಯೊಡಕೊಂಡು ಸತ್ತರೆಂದು ಹೇಳುವರು.

ಆದರೂ ನಮಗೆ ಅದೇನು ಸರಿಯಾಗಿ ತೋರುವದಿಲ್ಲೆಂದು ನಿನ್ನಿನ ಸಂಚಿಕೆಯಲ್ಲಿ ಬರೆದಿದ್ದೆವು ಅದರಂತೆ ತಮ್ಮ ಕಾರ್ಯನಿಪುಣರಾದ ಇಲ್ಲಿಯ ಪೋಲಿಸ 'ಸುಪರಿಂಟೆಂಡೆಂಟ'ರು ಶ್ರೀನಿವಾಸರಾಯರ ಮನೆಗೆ ಸ್ವತಃ ಹೋಗಿ ಕುಟುಂಬದವರನ್ನು ಕೇಳಲಾಗಿ ವೈದ್ಯರು ಬಾಟಲಿ ಯಲ್ಲಿ ವಿಷಹಾಕಿ ಕೊಟ್ಟಿದ್ದರೆಂದೂ ಗಾಯುವನ್ನು ಉಪಚರಿಸದೆ ಬಿಟ್ಟ ರೆಂದೂ, ಅವರಿಗೆ ತಿಳಿದು ಆ ವೈದ್ಯರನ್ನು ಇಂದು ಬಂದಿವಾಸಕ್ಕೆ ಕಳಿಸಿರುವರು, ವೈದ್ಯರಷ್ಟೇ ಈ ಕೆಲಸದಲ್ಲಿರದೆ ಅವರ ಮಿತ್ರಮುಖ ಶತ್ರುರಾರೋ ಶ್ರೀನಿವಾಸರಾಯರಲ್ಲಿ ಮತ್ಸರತಾಳಿ ಹೀಗೆ ಮಾಡಿಸಿರುವ ರೆಂದು ತಿಳಿದು ಅದರ ವಿಷಯಕ್ಕೆ ವಿಚಾರಣೆಯು ನಡೆದದೆ, ಸರಕಾರದವರು ಸಮಾಜಕಂಟಕರನ್ನು ನಾಶಿಸದೆ ಬಿಡಬಾರದು" ಲೇಖವನ್ನು ಓದಿ ಅಚ್ಯುತರಾಯರು ಬಹಳೇ ಗಾಬರಿಯಾದರು ಇನ್ನು ವೈದ್ಯರು ತನ್ನ ಹೆಸರನ್ನು ಹೇಳಿ ತನಗೂ ಬಂದಿವಾಸವನ್ನೂ, ಬಹುಶಃ "ಕರೇನೀರಿನ" ನಡುಗಡ್ಡೆಯಲ್ಲಿ ಇರುವ ಶೀಕ್ಷೆಯನ್ನು ದೊರಕಿಸಿಕೊಡಬಹುದೆಂದು ಹೆದರಿ ಅಚ್ಯುತರಾಯರು ವಿಷಪ್ರಾಶನ ಮಾಡಿ ಅಂದೇ ಸಂಜೆಯಾಗುವದರೊಳಗಾಗಿ ಇಹಲೋಕವನ್ನು ಬಿಟ್ಟನು. ಪಾಪ! ಅಚ್ಯುತರಾಯನು ತನಗೆ ಶಿಕ್ಷೆಯನ್ನು ತಾನೇ ಮಾಡಿಕೊಂಡನು!!

* * * *

ಶ್ರೀನಿವಾಸರಾಯರ ನಿಧನದನಂತರ ವಿದ್ಯಾಧರನೂ, ವಿಮ ಲೆಯೂ, ಮಾಧವನ ಪತ್ರದಂತೆ ಮುಂಬಾಪುರಿಗೆ ಬಂದರು. ಅವ ರಿಗೂ ಬಹಳೇ ದುಃಖವಾಯಿತು. ಹಿರಿಯರು ಬೇಕಾದ ಹಾಗೆ ತಮ್ಮ ವಿದ್ಯಾರ್ಜನೆಗೆ ಎಲ್ಲ ಸಾಧನಗಳನ್ನು ಪೂರೈಸುತ್ತಿರಲು ತಾವು ಹೇಗೆ ಯಾವಾಗಲೂ ವಿದ್ಯೆಯ ಚಿಂತೆಯಲ್ಲಿಯೇ ರಮಿಸುತ್ತಿದ್ದೆವೆಂಬದು ಅವರಿಗೆ ನೆನವಾಗಿ ಈ ಸಂಸಾರಯಾತ್ರೆಯು ಕಠಿಣವಾಗಿ ತೋರಹ ತ್ತಿತು. ಮಾಧವನು ಅಧೈರ್ಯಗೊಳ್ಳದೆ ಯಥಾಸಾಂಗವಾಗಿ ಎಲ್ಲ

ಕರ್ಮಗಳನ್ನು ತೀರಿಸಿದನು. ತಂದೆಯ ಕೊನೆ ಆಜ್ಞೆಯು ಇನ್ನು ಆತನ ಕಿವಿಯಲ್ಲಿ ಗುಣಗುಟ್ಟುತ್ತಿತ್ತು. ತಾಯಿತಂಗಿಯರನ್ನು ಸಮಾಧಾನಗೊಳಿಸಿ ಮುಂದಿನ ಕಾರ್ಯಕ್ಕೆ ತೊಡಗಿದನು; ವೈದ್ಯರ ದುಃಸ್ಥಿತಿಯ ವಿಷಯಕ್ಕೆ, ಆತನು ಕನಿಕರಪಟ್ಟನು! ಆದರೂ ದೇಶಕಟ್ಟಳೆಗಳು ಆತನನ್ನು ಬಂಧಮುಕ್ತಮಾಡಲಿಲ್ಲ! ಅವರವರ ಕರ್ಮಫಲವನ್ನನುಭವಿಸಲಿಕ್ಕೆ ಬಿಟ್ಟು ಬಿಟ್ಟನು ಮಾಧವನೂ ವಿದ್ಯಾಧರನೂ ಮತ್ತೆ ಎಡೂರಕ್ಕೆ ಹೋಗಿ ದಿವಾಕರಪಂತರ ಹಾಗೂ ತನ್ನ ಸ್ವಂತ ಹೊಲಮನೆಯನ್ನು ವ್ಯವಸ್ಥೆಗೊಳಿಸಿದರು ವಿದ್ಯಾಧರನ ಜುಲುಮೆಯಿಂದ ಎಲ್ಲರೂ ಆತನು ಪುಣ್ಯಪುರದಲ್ಲಿ ಮಾಡಿದ ಮನೆಯಲ್ಲಿಯೇ ಇರಹತ್ತಿದರು ಸರಸ್ವತಿಯೂ, ವಿಮಲೆಯೂ ಮನೋರಮಾಬಾಯಿಯವರೊಬ್ಬರ ಸಹವಾಸದಲ್ಲಿ ಮತ್ತೊಬ್ಬರು ಆನಂದಪಡಹತ್ತಿದರು ಕಾಲಚಕ್ರವು ವಿಚಿತ್ರವಾದದ್ದು ಈ ಕುಟುಂಬಕ್ಕೆ ಸಂಕಟವನ್ನು ತಂದಿದ್ದ ಕಾಲವೇ ಶ್ರೀನಿವಾಸರಾಯರ ಮರಣದಿಂದುಂಟಾದ ದುಃಖವನ್ನು चक्रनेमिक्रमेण ಕಡಿಮೆ ಮಾಡಹತ್ತಿತು. ವಿಮಲೆ ಸರಸ್ವತಿಯರ ಸಹವಾಸದಲ್ಲಿ ಮನೋರಮಾಬಾಯಿಯವರು ಹೇಗಾದರೂ ಮಾಡಿ ಮನರಂಜನೆಯನ್ನು ಮಾಡಿಕೊಳ್ಳಹತ್ತಿದರು. ಸರಸ್ವತಿಯು ವಿದ್ಯಾಧರನನ್ನು ಹೆಚ್ಚು ಹೆಚ್ಚಿಗೆ ಪ್ರೀತಿಸಹತ್ತಿದ್ದಳು, ಒಬ್ಬರ ಪರಿಚಯವು ಮತ್ತೊಬ್ಬರಿಗೆ ಈಗ ಪೂರ್ಣವಾಗಿ ಆಗಿದ್ದರಿಂದ ಒಮ್ಮೊಮ್ಮೆ ವಿಮಲಾ ಮಾಧವರ 'ಪ್ರೇಮ' ವಾದರೂ ದೃಷ್ಟಿಗೆ ಬೀಳುತ್ತಿತ್ತು. ಮಾಧವನು ಮಾತ್ರ ಆಕೆಯನ್ನು ಭಗಿನಿ ಪ್ರೇಮದಿಂದಲೇ ನೋಡುತ್ತಿದ್ದನು. ಸರಸ್ವತಿಯಲ್ಲಿ ದೃಢವಾಗಿದ್ದ ವಿದ್ಯಾಧರನ ಪ್ರೇಮವನ್ನು ಕಂಡು ಮಾಧವನಿಗೂ, ಮನೋರಮಾಬಾಯಿಯವರಿಗೂ ಆನಂದವಾಯಿತು.

ಮಾಧವನೂ, ವಿದ್ಯಾಧರನೂ ಮನಮುಟ್ಟಿ ಅಭ್ಯಾಸಿಸಿ ಅದೇ ವರ್ಷ ಬಿ. ಏ. ಪರೀಕ್ಷೆಯಲ್ಲಿ ಇಬ್ಬರೂ ಉತ್ತೀರ್ಣರಾದರು. ವಿಮಲೆ

ಸರಸ್ವತಿಯರು ಒಬ್ಬರನ್ನೊಬ್ಬರನ್ನು ಅಕ್ಕತಂಗಿಯರಂತೆ ಪ್ರೀತಿಸಿ ತಮಗೆ ಬರುವ ಜ್ಞಾನವನ್ನು ಇನ್ನೊಬ್ಬರಿಗೆ ಕಲಿಸಿ ಆನಂದದಿಂದ ಇರಹತ್ತಿದರು. ಪರೀಕ್ಷೆ ಸುದ್ದಿಯ ಆನಂದದಲ್ಲಿ ಮಾತಾಡುತ್ತ ಒಂದು ದಿವಸ ಕೌಮುದಿಯ ಬೆಳಕಿನಲ್ಲಿ ಮಾಧವನೂ ವಿದ್ಯಾಧರನೂ ಕುಳಿತಿದ್ದರು. ಬರಬರುತ್ತ ವಿವಾಹದ ಸುದ್ದಿಯು ಹೊರಡಿತು.

ಮಾಧ—ವಿದ್ಯಾಧರಾ, ಸರಸ್ವತಿಯ ವಿವಾಹವನ್ನಂತೂ ಇನ್ನು ಮಾಡಲೇ ಬೇಕು. ಆಕೆಯು ನಿನ್ನನ್ನು ಪ್ರೀತಿಸುವಳು; ನೀನು ಆಕೆಯನ್ನು ಪ್ರೀತಿಸುವಿ, ಆಕೆಯು ಸಮಾಜಸೇವೆಯ ಕಾರ್ಯದಲ್ಲಿ ನಿನಗೆ ಬೇಕಾದ ಹಾಗೆ ಸಹಾಯಮಾಡಬಹುದು, ತಂದೆಯವರು ಮರಣಕಾಲಕ್ಕೆ ಹೇಳಿದ್ದನ್ನೂ ನಾನು ಈ ಮೊದಲೇ ನಿನಗೆ ತಿಳಿಸಿರುವೆನು; ನನ್ನ ಕಾರ್ಯವಾದರೂ **ಸಮಾಜಸೇವೆಯೇ.** ಇಬ್ಬರೂ ಕೂಡಿ ಅದೇ ಕೆಲಸವನ್ನು ಜರುಗಿಸಲು ಯತ್ನಿಸುವಾ. ಇನ್ನು ವಿವಾಹದ ವಿಷಯಕ್ಕಂತೂ ನಿನಗೇನು ಹೆಚ್ಚಿಗೆ ಹೇಳುವ ಕಾರಣವಿಲ್ಲ; ಹೇಳು ನಿನ್ನ ಮನಸ್ಸಿಗೆ ಸರಸ್ವತಿಯು ಬರುವಳೋ ಇಲ್ಲವೋ?

ವಿದ್ಯಾಧರನೇನು ಮಾತಾಡುತ್ತಾನೆ? ನಾಚಿ ತಲೆ ಬೊಗ್ಗಿಸಿ ಸಮ್ಮತಿಯನ್ನೀಯಿದನು.

ವಿದ್ಯಾ—ಮಾಧವಾ, ಸರಸ್ವತಿಯಂಥ ಸುಗುಣಮಂಡಿತಳನ್ನು ಮದುವೆ ಮಾಡಿಕೊಳ್ಳಲಿಕ್ಕೆ ಯಾರು ಒಪ್ಪಲಿಕ್ಕಿಲ್ಲ!! ನೀನು ಹಿಂದಕ್ಕೆ ಒಮ್ಮೆ ವಿವಾಹದ ವ್ಯಾಖ್ಯಾನವನ್ನು ಹೇಳಿದ್ದು ನೆನಪಾಗುವದೇನು?

ಮಾಧ—ಹೌದು. ನೆನಪುಂಟು. ಆ ತರದ ಪ್ರೇಮವು ನಿಮ್ಮಲ್ಲಿ ಈಗ ಹುಟ್ಟಿರುವದು; ಸರಸ್ವತಿಯು ನಾನು ವರ್ಣಿಸಿದಂತೆ ಯೋಗ್ಯ **ಸತಿಧರ್ಮ**ವನ್ನು ಆಚರಿಸಿ ನಿನ್ನ ಕಾರ್ಯದಲ್ಲಿ ಸಹಾಯಕಳಾಗುವಳೆಂದು ನನಗೆ ಪೂರ್ಣ ವಿಶ್ವಾಸವುಂಟು. ಅದ್ದರಿಂದಲೇ ನಾನು ನಿನಗೆ ಸರಸ್ವತಿಯನ್ನು ವಿವಾಹ-ವಿಧಿಯಿಂದ ಪ್ರತಿ-ಗೃಹಿಸಲು ಹೇಳಿದೆನು.

ವಿದ್ಯಾ—ವಿದ್ಯಾಧರನು ಆನಂದದಿಂದ ತಲೆ ಅಲ್ಲಾಡಿಸಿ ಏನೋ ನೆನಪು ಮಾಡಿಕೊಂಡು ಮಾಧವಾ, 'ಸಮಾಜಹಿತಕ್ಕಾಗಿ ಯತ್ನಿಸು' ಎಂದು ನಿನ್ನ ತಂದೆಯವರು ಹೇಳಿದರೆಂದು ಯಾವಾಗಲೂ ಅನ್ನುವಿ. ಒಂದು ಸಮಾಜಹಿತಕಾರ್ಯವನ್ನು ಮಾಡುವಿಯಾ?

ಮಾಧ—ಅಗತ್ಯವಾಗಿ, ಮಾಡಲೇ ಬೇಕು. ಪಿತ್ರಾಜ್ಞೆಯನ್ನು ಮನ್ನಿಸಲೇ ಬೇಕು. ಮೇಲಾಗಿ ಸಮಾಜಸೇವೆಯೇ ಪಿತೃಸೇವೆಯು. ಅಂದಮೇಲೆ ಪಿತೃಸೇವಾಪರಾಙ್ಮುಖರಾಗುವ ಬಗೆ ಹೇಗೆ?

ವಿದ್ಯಾ—ಹಾಗಾದರೆ ಈ ಜಗತ್ತಿನಲ್ಲಿ ಎರಡನೆಯವರು ಯಾರೂ ಸಹಾಯಕರಿಲ್ಲದಂಥ ಸುಂದರಿಯೂ ಸದ್ಗುಣಿಯೂ ನಿನ್ನ ಸರಸ್ವತಿಯಂತೆ ಸುಸಂಸ್ಕೃತಳೂ ಆಗಿದ್ದ ಬಾಲಿಕೆಯನ್ನು ನೀನು ವಿವಾಹ ಮಾಡಿಕೊಳ್ಳುವಿಯಾ? ನೋಡು, ಸಮಾಜಸೇವೆಗಾಗಿ, ತಂದೆಯ ಆಜ್ಞಾಪಾಲನಮಾಡಿದ ಪುಣ್ಯವು ನಿನಗೆ ಲಭಿಸುವದು.

ಮಾಧವನು ಗಾಬರಿಯಾಗಿ ಗೊಂದಲದಲ್ಲಿ ಬಿದ್ದಂತೆ ತೋರಿದನು. ವಿದ್ಯಾ—ಹಾಗಾದರೆ ಅನಾಥಳಾದ ನನ್ನ ವಿಮಲೆಯನ್ನು ಮದುವೆಯಾಗು. ನೋಡು, ಇದೇ ಈಗ ಅಂದದ್ದನ್ನು ಮರೆಯಬೇಡ. ವಿಮಲೆಯು ಸರ್ವಗುಣಸಂಪನ್ನಳಿರುವಳು. ಅನಾಥಳಾಗಿ ನಿನ್ನ ಹೊರ್ತು ಜಗತ್ತಿಗೆ ತಿಲಾಂಜಲಿಯನ್ನು ಸಮರ್ಪಿಸಲು ಸಿದ್ಧಳಿರುವಳು. ನೀನು ಆಕೆಯನ್ನು ವರಿಸದಿದ್ದರೆ ಆಕೆಯು ವ್ಯಾಕುಲಚಿತ್ತಳಾಗಿ ತನ್ನ ಜೀವಕ್ಕೆ ಎರವಾಗಬಹುದು, ಅನಾಥ ಬಾಲಿಕೆಯ ಜೀವವನ್ನು ಉಳಿಸಿದಂಥ ಉಚ್ಚತಮ-ಸಮಾಜಸೇವೆಯ ಪುಣ್ಯವನ್ನು ಕಟ್ಟಿಕೊಳ್ಳುವದಿಲ್ಲವೇ? ನೀನು ಆಕೆಯನ್ನು ಇಂದಿನವರೆಗೆ ಈ ಪ್ರೇಮದಿಂದ ಎಂದೂ ನೋಡದಿದ್ದದ್ದು ನಿಜವು; ಆದರೆ ಆಕೆಯ ಗುಣಗಳನ್ನು ನೀನು ದಿನಾಲು ವರ್ಣಿಸುತ್ತಿರುವಿ. ಆದ್ದರಿಂದ ಮಿತ್ರನ ಇದೊಂದು ಬಿನ್ನಣವನ್ನು ಮನ್ನಿಸಿ ಅನಾಥ ಬಾಲಿಕೆಯ ಜೀವವನ್ನು ಉಳಿಸು.

ಮಾಧವನು ಗೂಢವಿಚಾರಕ್ಕೊಳಗಾದನು. "ವಿಮಲೆಯಲ್ಲಿ ಎಲ್ಲ ಗುಣಗಳಿರುವದು ನಿಜವು ಆಕೆಯಿಂದ ನನಗೆ ಸುಖವಾಗಿ ಸಮಾಜಸೇವೆಯ ಕಾರ್ಯದಲ್ಲಿಯೂ ಸಹಾಯವಾಗಬಹುದು. ಆಕೆಯ ಪಾಣಿಗ್ರಹಣವನ್ನು ಮಾಡದಿದ್ದರೆ ಜೀವಕ್ಕೆ ಎರವಾಗುವಳಂತೆ!! ಛೀ! ನಾನು ಸಮಾಜಕಂಟಕನು!! ಛೀ, ಎಂದಿಗೂ ಆಗಲಾರೆನು. ತಂದೆಯವರು ಸಮಾಜಹಿತದ ಕಾರ್ಯವನ್ನು ಮಾಡಿದರೆ ತಮ್ಮ ಸೇವೆಯನ್ನು ಮಾಡಿದ ಹಾಗಾಗುವದೆಂದೂ, ತಮ್ಮ ಎಲ್ಲ ಮನೋರಥಗಳನ್ನು ಪೂರ್ಣ ಮಾಡಿದಂತಾಗುವದೆಂದೂ ಹೇಳಿದರಲ್ಲವೇ? ಹೌದು! ತಂದೆಯವರ ಆಜ್ಞೆಯು ನನಗೆ ಶಿರಸಾವಾನ್ಯವು. ಏನೂ ಚಿಂತೆಯಿಲ್ಲ, ವಿದ್ಯೆಯ ಬಲದಿಂದ ಇನ್ನು ಬೇಕಾದ ಹಾಗೆ ತಾಯಿಗೂ ಹೆಂಡತಿಗೂ ಹೊಟ್ಟೆಗೆ ಹಾಕಬಲ್ಲೆನು. ನಮ್ಮಿಬ್ಬರ ದೇಹವನ್ನು ಸಮಾಜಸೇವೆಯಕಾರ್ಯದಲ್ಲಿಯೇ ಅರ್ಪಿಸಿದರಾಯಿತು." ಎಂದು ವಿಚಾರಿಸುತ್ತ ಕುಳಿತನು. ತಾನು ಇಂದು ತನ್ನ ಒಂದು ಕರ್ತವ್ಯಮಾಡಿದ ಹಾಗಾಗುವದೆಂದು ಕಂಡು ಆತನಿಗೆ ಅತ್ಯಾನಂದವಾಯಿತು. ಆತನ ಮುಖವು ಪ್ರಫುಲ್ಲಿತವಾಯಿತು. ಮುಂದಿನ ಅಭ್ಯಾಸ, ಗೃಹವ್ಯವಸ್ಥೆ, ವಿವಾಹಸಿದ್ಧತೆ, ಮೊದಲಾದವುಗಳ ವಿಷಯಕ್ಕೆ ಎಷ್ಟೋ ವೇಳೆಯವರೆಗೆ ಮಾತಾಡುತ್ತ ಕುಳಿತರು. ಬಹಳ ರಾತ್ರಿಯಾದಮೇಲೆ ಇಬ್ಬರೂ ಮನೆಯೊಳಗೆ ಹೋಗಿ ಎಲ್ಲ ಸುದ್ದಿಯನ್ನು ಮನೋರಮಾಬಾಯಿಯವರಿಗೆ ಹೇಳಿದರು, ವಿದ್ಯಾಧರನು ಸರಸ್ವತಿಯನ್ನು ವಿವಾಹವಿಧಿಯಿಂದ ಸ್ವೀಕರಿಸಲು ಸಿದ್ಧನಿರುವನೆಂದೂ, ವಿಮಲೆಯನ್ನು ಮಾಧವನು ಮಾಡಿಕೊಳ್ಳಲೊಪ್ಪಿದನೆಂದೂ ಕೇಳಿ ಅವರಿಗೆ ಅತ್ಯಾನಂದವಾಯಿತು. ಸರಸ್ವತಿಯೂ ವಿಮಲೆಯೂ ಬಹಳೇ ಆನಂದಸಾಗರದಲ್ಲಿ ತೇಲಾಡಹತ್ತಿ ತಮ್ಮ ತಮ್ಮ ಅಣ್ಣಂದಿರಿಗೆ ಮನದಿಂದಲೂ, ಭಕ್ತಿಭಾವದಿಂದ ನಮಸ್ಕರಿಸಿದರು ಎಲ್ಲರೂ ಮಲಗಿಕೊಂಡರು.

ಉಪಸಂಹಾರ.

ಮೇಲೆ ಹೇಳಿದ ಪ್ರಸಂಗಕ್ಕೆ ಈಗ ೩-೪ ವರ್ಷಗಳಾಗಿಹೋದ ಈಗ ಮನೋರಮಾಬಾಯಿಯವರು ಮೊಮ್ಮಕ್ಕಳನ್ನು ಆಡಿಸುತ್ತ ಆನಂದದಲ್ಲಿ ಕಾಲಕಳೆಯುತ್ತಿರುವರು. ವಿದ್ಯಾಧರನೂ ಸರಸ್ವತಿಯೂ ಒಂದು ಕ್ಷಣಹೊತ್ತು ವಿಶ್ರಾಂತಿಯಿಲ್ಲದೆ ಅಲ್ಲಿ ಉಪನ್ಯಾಸವನ್ನು ಮಾಡು, ಇಲ್ಲಿ ಸಭೆಗೆ ಅಧ್ಯಕ್ಷರಾಗು, ಹೀಗೆ ಒಂದೇಸಮನೆ ಸಮಾಜೋನ್ನತಿಯ ಕೆಲಸಕ್ಕೆ ಎಡೆಬಿಡದೆ ಹತ್ತಿರುವರು. ಈ ವರ್ಷ ಪುಣ್ಯಪುರದಲ್ಲಿ ಸಾಮಾಜಿಕಪರಿಷತ್ತು ಕೂಡುವದಿತ್ತು. ಮಾಧವನು ಅಧ್ಯಕ್ಷನಾಗಿ ಆರಿಸಲ್ಪಟ್ಟಿದ್ದನು. ಸ್ವಾಗತಮಂಡಲದ ಅಧ್ಯಕ್ಷನಾದ ವಿದ್ಯಾಧರನಿಗೂ ಕೂಡ ಎಷ್ಟೋ ಜನರಿಗೆ ಸ್ವಾಗತಮಾಡಬೇಕಾಗುತ್ತಿತ್ತು! ಈಗೀಗ ಮಾತ್ರ ನಮ್ಮ ದಂಪತಿದ್ವಯಕ್ಕೆ ಜನ್ಮಸಾರ್ಥಕವಾದಂತೆ ತೋರ ಹತ್ತಿರುವದು! ಸರಸ್ವತಿ-ವಿಮಲೆಯರೂ ಎಷ್ಟು ಸಹಾಯಮಾಡುತ್ತಿರುವರಲ್ಲ! ಸ್ವತಃ ಓಡಾಡಿ ಪರಿಷತ್ತನ್ನು ಪೂರ್ಣ ಯಶಸ್ವಿಯಾಗಿ ಮಾಡುವದಕ್ಕೆ ಸರಸ್ವತಿ-ವಿದ್ಯಾಧರರದಂಪತಿಯ ಶ್ರಮವೇ ಮುಖ್ಯ ಕಾರಣವೆಂದು ಎಲ್ಲರೂ ಅವರನ್ನು ಎಷ್ಟು ಅಭಿನಂದಿಸುವದು!! ನಮ್ಮ ಸರಸ್ವತಿಗೆ ಸ್ವರ್ಗವೂ ಇನ್ನು ಎರಡೇ ಬೊಟ್ಟು ಉಳಿದದೆ.

× × × × ×

ಪ್ರಿಯವಾಚಕರೇ, ವೈದ್ಯರು ಆಜನ್ಮತುರಂಗವಾಸದಲ್ಲಿಯೇ ತಮ್ಮ ಆಯುಷ್ಯವನ್ನು ಕ್ಷೀಣಿಸುತ್ತಿರುವರಲ್ಲವೇ? ರೋಗಿಗಳಿಗೆ ವಿಷಪ್ರಾಶನ ಮಾಡಲೆತ್ನಿಸಿದವರಿಗೆ ಇದು ಸಾಕಷ್ಟು ಶಾಸನವಾಗದಿದ್ದರೂ ಈ ಲೋಕವನ್ನು ಬಿಟ್ಟುಹೋದಮೇಲೆ ಆ ಸರ್ವಶಕ್ತನಾದ ಪರಮೇಶ್ವರನ ಶಾಸನವನ್ನು ಅನುಭವಿಸಲಿಕ್ಕೆ ಹೋಗಬೇಕಲ್ಲವೇ?

ದೇವರೂ ಎಲ್ಲರಿಗೂ ದೇಶಸೇವೆಗಾಗಿ ಉದಂಡ ಆಯುಷ್ಯವನ್ನೀಯಲಿ!

ಶ್ರೀಕೃಷ್ಣಾರ್ಪಣಮಸ್ತು

ಸಂಪೂರ್ಣ.